ಪರವಾಗಿ): ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2009 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ 'ಮಾಹಿತಿ ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2874.27 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3037.14 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ) ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಬೇಡಿಕೆಗಳನ್ನು ಮಂಡಿಸಲಾಯಿತು.

....

ಅಧ್ಯಕ್ಷರು:- ಈಗ ನಾವು ಆಯವ್ಯಯದ ಮೇಲೆ ಚರ್ಚೆಯನ್ನು ಮುಂದುವರೆಸೋಣ. ಈಗ ಡಾ॥ಎಂ.ಸಿ. ಸುಧಾಕರ್ ರವರು ಇದ್ದಾರೆಯೇ? ತಾವು ಏನು ಲಿಸ್ಟ್ ಕೊಟ್ಟಿದ್ದೀರಿ, ಅದರ ಪ್ರಕಾರ ನಾನು ಕರೆಯುತ್ತಿದ್ದೇನೆ. ಅಯಾ ಪಕ್ಷದವರ ಪರವಾಗಿ ಲಿಸ್ಟ್ ಕೊಟ್ಟಿದ್ದಾರೆ. ಸದಸ್ಯರ ಹೆಸರನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ನಾನು ಚರ್ಚೆಗೆ ಕರೆಯುತ್ತೇನೆ. ಇಲ್ಲದಿದ್ದರೆ, next ಸಿ.ಎಸ್. ನಾಡಗೌಡರವರು. ಅವರೂ ಇಲ್ಲ, ಸೈಯದ್ ಯಾಸೀನ್.

(ii) 2008-09ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಸೈಯದ್ ಯಾಸೀನ್ (ರಾಯಚೂರು):- ಮಾನ್ಯ ಸಭಾಧ್ಯಕ್ಷರೆ, ಬಜೆಟ್ 2008-09ರ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದೀನಿ. ಅದಕ್ಕಾಗಿ ನಮಗೆ ಬಹಳ ಸಂತೋಷವಾಗುತ್ತಿದೆ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮೂರು ಸಲ ಬಜೆಟ್ present ಮಾಡುವುದಕ್ಕೆ ಅವಕಾಶ ಸಿಕ್ಕಿದೆ. It looks to be, this budget is more of his own contribution. He presented the budget with high confidence in the House. ನಮ್ಮ ಜನತೆಯ ಅಭಿವೃದ್ಧಿಗಾಗಿ, stability ಗಾಗಿ ಹಾಗೂ better administration ಮಾಡುವುದಕ್ಕೆ mandate ಕೊಟ್ಟಿದ್ದಾರೆ. but, at the same time, the budget definitely is required to run proper Government and of course, sometimes it motivates for the public, consumption and political consumption also. But the general public need, is they expect peace security and employment to

thier children. on the other side, very poor people need to get away from poverty and always urged to have economic and social upliftment.

ಅಧ್ಯಕ್ಷರು:- ಮಾನ್ಯ ಸದಸ್ಯರು ಗಮನಿಸಬೇಕು. ತಾವು ಯಾವುದನ್ನಾದರೂ reference ಮಾಡುತ್ತಿದ್ದೀರೋ ಅಥವಾ speech ಓದುತ್ತಿದ್ದೀರೋ?

ಶ್ರೀ ಸೈಯದ್ ಯಾಸೀನ್: ಬಜೆಟ್ ಬಗ್ಗೆ ಏನೇನು points prepare ಮಾಡಿಕೊಂಡಿದ್ದೇನೆಯೋ, ಅದರ ಬಗ್ಗೆ ನಾನು ಸಲಹೆ ಕೊಡುತ್ತಿದ್ದೇನೆ.

ಅಧ್ಯಕ್ಷರು:- ತಾವು ತಮ್ಮ ಭಾಷಣವನ್ನು ಓದುವುದಾದರೆ ನಮ್ಮ permission ತೆಗೆದುಕೊಳ್ಳಬೇಕಾಗುತ್ತದೆ. ನೀವು ಭಾಷಣ ಮಾಡುವುದಾದರೆ ಮಾಡಿ. ಎಲ್ಲಿಯಾದರೂ reading reference ಮಾಡುವುದಾದರೆ reading ಮಾಡಿ. ಆದರೆ, ಸಂಪೂರ್ಣವಾಗಿ ನೀವು reading ಮಾಡುವುದಾದರೆ permission ಬೇಕಾಗುತ್ತದೆ. ನೀವು ಕನ್ನಡದಲ್ಲಿ ಭಾಷಣ ಮಾಡಿದರೆ ಒಳ್ಳೆಯದು.

Sri. Syed Yasin:- ಅಷ್ಟು ಕನ್ನಡ ಬರುವುದಿಲ್ಲ. ನಾನು ಕನ್ನಡದಲ್ಲಿ ಮಾತನಾಡುವುದಕ್ಕೆ Efforts ಮಾಡುತ್ತಿದ್ದೇನೆ.

Mr. Speaker :- ಕನ್ನಡದಲ್ಲಿಯೇ ಎಲ್ಲರೂ ಮಾತನಾಡಬೇಕೆಂದು ಬೆಳಿಗ್ಗೆಯೇ ಶ್ರೀ ನರೇಂದ್ರಬಾಬುರವರು ಹೇಳಿದರು. ಆದರೆ, ಈಗ ಅವರು objection ಮಾಡುತ್ತಿಲ್ಲ.

Sri. Qamarul Islam (Gulbarga North):- Sir one thing I want to tell you.

- Interruption -

I am Kannadiga. I have born here. Nobody can deny that I am kannadiga, I cannot speak kannadiga because my mother tongue is not kannada. My mother tongue is Urdu. But I am born here, I am a kannadiga. I have got a right to speak in my language. But one thing, under the Constitution also we can express.......

MR. SPEAKER: I am not insisting.

Sri. Qamarul Islam: ಇದು ನಮ್ಮ fault ಅಲ್ಲ. ನಾನು Hyderbad karnataka ದಿಂದ ಬಂದಿದ್ದೇನೆ. 1956ನಲ್ಲಿ ನಮ್ಮ Hydreabad karnataka ಇಲ್ಲಿಗೆ ಸೇರಿದೆ.

ಅಧ್ಯಕ್ಷರು: ಮಾತನಾಡಿ. ಚೆನ್ನಾಗಿ ಮಾತನಾಡುತ್ತಿದ್ದೀರಿ.

Sri. Qamarul Islam: ನನಗೆ ಕನ್ನಡ ಮಾತನಾಡುವುದಕ್ಕೆ ಚೆನ್ನಾಗಿ ಬರುವುದಿಲ್ಲ. ಆದರೆ, ಸ್ವಲ್ಪ ಕನ್ನಡ ಬರುತ್ತದೆ. ತಾವು ಇಲ್ಲಿ ಯಾವ ರೀತಿ ಮಾತನಾಡುತ್ತಿದ್ದೀರಿ ಆ ಶಕ್ತಿ ನನಗೆ, ಮತ್ತು ಸೈಯದ್ ಯಾಸೀನ್‌ರವರಿಗೆ ಇಲ್ಲ. ಅದರ ಸಲುವಾಗಿ ನಾನು ತಮಗೆ ವಿನಂತಿ ಮಾಡಿ ಹೇಳುತ್ತಿದ್ದೇನೆ. ತಾವು ಅಧ್ಯಕ್ಷರಿದ್ದೀರಿ. ತಾವು Houseನ custodian ಆಗಿದ್ದೀರಿ. ಯಾಸೀನ್‌ರವರೆ, ನೀವು ಕನ್ನಡ ಭಾಷೆ ಉಪಯೋಗಿಸಿ, ಸ್ವಲ್ಪ English ನಲ್ಲಿ ಮಾತನಾಡಿ ಎಂದು ತಾವು ಹೇಳಿ. Ruling Party should also encourage, ನಮ್ಮ ಕಡೆ ಸಾಕಷ್ಟು ಉರ್ದು ಶಾಲೆಗಳಿದ್ದು ಇನ್ನೂ ಅಲ್ಲಿ ಕನ್ನಡ ಇಲ್ಲ. Kannada Teachers ಇಲ್ಲ. ಯಾವ ತರಹ ಕನ್ನಡ improve ಮಾಡಬೇಕು, ಮಾತನಾಡಬೇಕು? why I am telling here is ನಾನು ಈಗ ಏಕೆ ಹೇಳುತ್ತಿದ್ದೇನೆ ಎಂದರೆ ನಾನು ಸಾಕಷ್ಟು improve ಮಾಡಿದ್ದೇನೆ. ತಾವು ಆ ತರಹ ಹೇಳಬಾರದು. ಕನ್ನಡದ ಬಗ್ಗೆ ಬೇರೆಯವರಿಗೆ ಎಷ್ಟು ಕಾಳಜಿ ಇದೆಯೋ ಅಷ್ಟೇ ಕಾಳಜಿ ನನಗೂ ಇದೆ. ಯಾಸೀನ್ ರವರಿಗೂ ಇದೆ, ಎಲ್ಲರಿಗೂ ಇದೆ. ತಾವು ಸ್ವಲ್ಪ ಅವರಿಗೆ English ನಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಿ.

Sri Syed Yasin:- ದಯಮಾಡಿ ನನಗೆ ಅವಕಾಶ ಕೊಡಿ. you should know the minds of MLAs,

MR. SPEAKER:- ನಾನು impose ಮಾಡುತ್ತಿಲ್ಲ. ನಾನು request ಮಾಡುತ್ತಿದ್ದೇನೆ.

Sri Syed Yasin: Sir, our Hon'ble chief Minister intelligently said in his budget speech in beginning itself that the inflation has gone up to 11.89% to keep in the chance in his mind to blame the Central Government whenever he has failed to support the budget in some areas and whenever there is failure of economic progress in the State, Hon'ble Speaker, our

senior leaders have already mentioned in the House, Sri Siddaramaiahji and our Mallikarjun Kharge already have said that the present situation of economic inflation in the country is due to the global recession and it is a temporary aspect. So, we all must join hands. perhaps, it is all due to the press and media in which they have been highlighting since 2-3 months that UPA Government is going to fall. Because of that, psychologically the inflation had gone up to 11%. But now, since yesterday, after this decision of this nuclear deal and after UPA Government has shown its majority, then it has created a psychological impact and economic impact among the people and now, I think the inflation will comedown. At the same time, the another thing is, the limited financial resources with limited fiscal pace which Hon'ble Chief Minister has mentioned perhaps, is definitely the product of previous two budgets which he has presented in the House.

At the same time, the Education development which our Hon'ble Chief Minister has mentioned, of Course, it is a good political mobility an development in the field of education. But, I would suggest that you have to take care of the area particularly Hyderbad-Karnataka and Northern karnataka, the since the pecentage of illiteracy is very high. So all schemes must be pushed towards the Northern Karnataka especially Hyderbad-Karnataka area. I request our Hon'ble Chief Minister and Hon'ble Education MInister to open maxium Lower Primary School to enroll maxium number of new students to improve the percentage of education and I must be thankful to our Hon'ble Chief Minister, since he has given support to Hyderbad-karnataka especially to Northern karnataka. he has declared the Agriculture university in Raichur. It is in my constituency. It is not the question of constituency.This college has got Msc., (Agriculture Science), M. Tech., (Agricilture in Engineerring), This is the only college having these courses in Raichur, and this type of education is available only in Raichur Campus, More than 700 acres of sufficient land is already

available with sufficient Course, Sufficient research facilities, Government Expert Committee approved the project. The ICAR, (The Indian Council of Agriculture Research) has already approved this regional Agriculture Research Station, its running, its affiliated colleges and Research centers at Bheemgudi, Gulbarga, Bidar and Raichur also. It will cater to the Hyderbad-Karnataka area. The Expert Committees, even Nanjundappa's report has said that there should be at least one University in every district. So Nanjundappa's report is also supporting, I am really gratefull and thankful to our Hon'ble Chief Minister that he has favoured Hyderbad-karnataka, North karnataka and at the same time, it is very important to note that there are some 7,000 acres of land at javalgira, under the control of Central Estate Farm in Central Ministry. Our Principal Secretary Agriculture and Finance Secretary have worked on it I think in Punjab and Gujarath these types of Central farms have been defunct. Similarly in sindhnoor Taluk in Raichur District 7,000 acres of land are defunct. So they can be taken over and that chapter can be opened by our Principal Secretary Agriculture.

Hon'ble Speaker, one important issue is , I think our Ex-health minister and present Health Minister may be aware given that this is a little serious subject to be given attention and every MLA should take out the number of births in their taluk hospitals monthly wise. In district hospitals, in every 300-400 beds hospitals they are producing children and they are giving births of children Hon'ble Speaker, this is a serious subject. In 130-150 deliveries, there are pre-mature babies they are giving birth about 20-25 per month and no taluk hospital and district hospital has got Neo-natal facilities. Ultimately every month in district Hospital 25-30 children are declared deed inspite of taking birth. alive this is a serious subject. I request our Hon'ble Chief MInister and Hon'ble Health Minister should take action to provide Neo-natal facility. does not require a huge amount. A few thousands are required to have an intensive care

unit for the pre-mature babies in the taluk hospitals and the district hospitals.

Another subject I would bring to your notice is that I am greateful and thankful to Hon'ble Chief Minister that he has mentioned yardstick to some of the districts which I am bringing to your knowledge, in Raichur, attached to city outskirts on the state highway along with the side of Industrial Growth Centre and neighbouring RTPS, there are 390 acres of land. Since NIjam's time it is lying as abandoned airport. It was already exsisting for your information as per the record of karnataka . in 1957 when Jawaharalal Nehru was Prime Minister emergency landing took place by 'Meghdhooth' that itself shows that we are Contributing this land of 398 acres, the free of cost to be State and there cannot be no any hesitation to form a mini Airport at Raichur, because RTPS is there. In Raichur Thermal Plant neraly 17 units are there. in Manthralayam, the Toursim and Pilgrimage center is very near and lots of people are coming. OPEC assisted Rajiv Gandhi Medical College is there, Agriculture University is going to be opened there and 2 medical colleges are there. Asia's No.2 cotton market is exesting in Raichur. That itself shows That there is economic viability and also necessity for airport. when you want to open airport in other areas you have to buy the land. Crores of rupees you have to invest. But here, about 30-40 crores worth land is already there, So as an emergency steps, please take action there is no hesistation, So, I am thankful to our Hon'ble Chief Minister and I request the Government to take up this issue very fast.

Regarding energy, Raichur is generating about 1470 MW and is future they are going to have also and Raichur has been already loaded with polluted environment. I request Hon'ble Chief Minister and our Government to take care of the polution problems in Raichur due to existence of AVR, ACC Cement, Vasudhatha Cement and Rajeshwari Cement. we are lifting thousands and lakhs of tones fly ash and they

have created lot of pollution there and they are dictated in terms to our Government as well as to our Thermal RTPC and KPCL, that dictation should not be there and the pollution should be controlled very fast. Sir, RTPS acquired more than 800 acres of land near the existing Air stop and they are going to have future thermal plants and KSSIDC had already given the report regarding this techno Economic Survey to have an Airport and they have acquired the land abjacent to that Airport land. So, I request the Managing Director, the Government, the hon'ble Chief Minister and Hon'ble Power Minister to alert them so that thier Chimnis and towers should not become obstacle to our future airport progress.

Sir, I have few points to represent and suggestion to be given to the House regarding the Water Shed Department. Our Agriculture mission, the State Agricuture Management Agency about Which we mentioned during the budget, and in Water Shed Department during March, April, May only for 3 months they have got work and for the remaining days they don't have any work after June in rainy season. So for remaining 9-10 months, there is no work and they are drawing salaries without any work Everybody wants to come to Water shed Department and we politicians are also encouraging somtime to harvest thier need in Water Shed Department and at the same time, ther are lot of vacancies having fallen in the Agriculture Department. I think, our Former Minister Mr. Jayachandraji must be knowing about that. I think he has done lot of work in water shed Department. That is also important. but the vacancies are falling vacant in Agriculture Department. The Agriculture development is also needed very badly. That is in also an important development area of Karnataka.

Sir, regarding urban development, this is the era of HIgh-tech technology, people need new methodology and administration. karnataka State Infrastructure Department and Finance Corporation have to play the important role. Sir, every city, district headquarters and town has got

30-40 slums. Again we have to take care of the Slum Clearance Development and the solid waste management to be accelerated to maintain and to have good administration in Municipality and liquid waste management, especially the underground drainge system, the proper supply of drinking water, proper source, reliable source and reliable supplies, thanks to karnataka State Urban Infrastruture Development and Finance Corporation and Asian Development Bank for thier new schemes and high-tech schemes to give a better environment in the municipality administration. To have interactions with these high-tech department, the existing Municipality Officer is a promotee. Usualy, such people are not capable. They are all corrupt. If you see the record, many times they have ben suspended, again they have been revoked and again they are taking up the administration. So, I request the Government to make up thier mind to provided for a Taluk Municipality, a KAS Class-II Officer and for the City Municipality Class-I Officer should be posted so that they can have a fair and efficient administration everywhere. Sir, another important requirement is road. KRDC, The karnataka Road Development Corporation Limited and K- SHIP Karnataka HIghway improvement Project have brought so many projects namely Gangavathi- kambli-Kundkini-Hundigiri- Hadagali, Hadagali to Harapanahalli and tintini, Jalahally, Dedru i.e., under ADB Gabbur, kalmara, Thavargara, kushtagi, Bellary and Sandoor and hospet Bellary. Bellary and hospet, Sandoor and Raichur, are contributing a lot, Raichur is giving power to the State, about 1420 MWS of power to the State and our Hatti Gold mine is giving lot of profit to our State and our industrial growth has also increased So Bellary, hospet, Sandoor and Raichur need lot of infrastructure especially for better roads and highway networks. I request our Hon'ble Chief Minister and Government to Have a good planning to this area to cater to the industrial growth center and for the other activities, Sir, you have declared in your budget about *Raichur Growth*

Center as a steel zone. One side we have declared the steel zone. of Course, it is a good gesture of the Government. But, at the same time we are generating about 1420 MWs and we are adding every 2 years 210 & 250 MWS in Raichur. But unfortuantely the uninterrupted electricity to the industrial growth has not been given so far. When we have declared Steel zone, this should have a separate grid which our Hon'ble Chief Minister has declared, the Grid System. The grid is not going to produce electricity. But, it will give reliable electricity to growth centers. Similarly, we must give uninterruppted electricity to all industrial growth zones for better productivity.

The Narayanapura Right Bank Canal should extend up to three phase which is long pending In this backward area. ICC also has approved it in Hyderabad Karnataka, Northern Karnataka, in ICC meeting we have already discussed about this and we have given the proposal. NRBC must be connected to our Ganekal balancing reservoir in Devadurga taluk which is very important and the extension of this also should be taken very fast. Another thing about construction of barrage at Doddabellary and Chikkalparvi which is pending for a long time. That has to be taken care very fast. Implementation of H.C. Chiniwal Committee report to strengthen modernization of Tunga-Bhadra Left Bank Canal is also pending. That is very useful for the agricultural development in this area.

By way of conclusion, I would like to state that there are so many points to highlight and I request you to give more opportunities and more time to our new M.L.A.s so that you could know the minds of our new MLAs Of course, seniours have always been talking and they have got right to talk more. But, at the same time you must give priority to new comers to know their mind and you have to give training to them also. You must encourage them. Whatever they talk, you must encourage them so that they can be better legislators in this House.

Sir, You have mentioned in the Budget about Railway line. But

you have forgotten to pursue. The Gadwal-Raichur Railway line has been delayed since long time, the work is hampered and pending and the same has to be upgraded very fast.

About old Age Homes there are Two, three points to be highlighted before you. This is in the form of information which is very much required . Old age homes are maintained by Social Welfare Departments. We are keeping them usually away from the city Wherever the Deputy Commissioners give place. But, I request Hon'ble Health Minister and Hon'ble Chief Minister that old age homes should be established the premises of District Hospitals so that they will get therapeutic facilities and free medicines, nursing care and medical facilities.

Sir, IPP-Population Project Hospitals are given during the period of Mr. S.M. Krishnaji and afterwards also it is followed in Mr. Kumaraswamy's time IPP i.e., Indian Population Project Hospitals are taking care of entire slum area. As I have already told you, in every District Head Quarters there are about 30-40 slums. Poverty is there. Health care is not there. They are not able to approach the District Hospitals. So more and more IPP Hospitals can be encouraged in the slums.

I am very graceful to you. You have given chance to know my mind and I have given some mature and immature suggestions. Lastly, by way of conclusion, I would like to state regarding Poverty Alleviation Programme which we have taken. Always we have been talking about poverty alleviation eradictate of poverty. Social Welfare Department is there. Women and Child Welfare Department is there. Every year we are giving crores of rupees in budget to eradiction poverty. But, poverty remains the same.Government should make up its mind. Today, in the House, we should make up our mind finally and we should make plan an action plan to eradiction poverty from the root. For that purpose enrolment of children who are not going to schools is every important. The seond important point is the loan facilities, according to RBI directions. We have to catch

hold the slum area for the poverty alleviation. Self Help Groups, Sri Shakthi, there are so many other such programmes.

Lastly, I would like to tell you. we have more than three crores of Rupees in co-operative socities in the State and there are more than 47,000 co-opertive socities. In that the profit oriented socities may be very few and 18,000-20,000 may be functioning . Sir, I would request that the rural mass is not participating in the co-operative movement. Government should give seprate funds to enroll the minorities, SC, ST, backward classes, Suppose if you open this chapter for the enrollment, if you announce, all the socities will open their doors. Otherwise, they will not open the doors for the poor people. Especially, to backward communities, minorities and scheduled caste you should announce through the co-operative movement and the Government should give money and we should give direction to all Joint Directors and Deputy Directors of Co-operative Socities to enroll maximum number of minorities, maximum number of Scheduled Caste and and Scheduled Tribes and backward communities. Thank you. Thank you very much.

ಶ್ರೀ ವಿ. ಶ್ರೀನಿವಾಸ ಪ್ರಸಾದ್ (ನಂಜನಗೂಡು): ಮಾನ್ಯ ಅಧ್ಯಕ್ಷರೆ, 2008-09 ನೇ ಸಾಲಿನ ಮುಂಗಡ ಪತ್ರದ ಬಗ್ಗೆ ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ಧನ್ಯವಾದಗಳು. ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಖಾತೆಯನ್ನು ಹೊಂದಿರತಕ್ಕಥವರು. ಅವರು ಮುಖ್ಯಮಂತ್ರಿಗಳಾಗಿ ಮಂಡಿಸಿರತಕ್ಕಂಥ ಮೊದಲನೆ ಬಜೆಟ್. ಹಣಕಾಸಿನ ಸಚಿವರಾಗಿ ಮಂಡಿಸಿರತಕ್ಕಂಥದ್ದು ಮೂರನೇ ಬಜೆಟ್ ಆದರೂ ಕೂಡ ಅವರ ಚೊಚ್ಚಲ ಬಜೆಟ್. ಬಜೆಟ್ ಅನ್ನು ಮಂಡಿಸತಕ್ಕಂಥ ಸಂದರ್ಭದಲ್ಲಿ ಅವರು ಮಾಡಿರುವ ಭಾಷಣದ ಪೀಠಿಕೆಯನ್ನು ನೋಡಿದಾಗ, ಅವರು ಒಂದು ಮಾತು ಹೇಳಿದ್ದಾರೆ. ಕರ್ನಾಟಕ ರಾಜ್ಯವು ಆರು ತಿಂಗಳಿಗೂ ಹೆಚ್ಚು ಅವಧಿಯ ರಾಜಕೀಯ ಅನಿಶ್ಚಿತೆ ಮತ್ತು ರಾಷ್ಟ್ರಪತಿಗಳ ಆಡಳಿತದ ಅವಧಿಯಿಂದ ಹೊರ ಬಂದಿದೆ. ಸಮ್ಮಿಶ್ರ ಸರ್ಕಾರದ ಪ್ರಯೋಗ ಜನರಿಗೆ ಹಿಡಿಸಿಲ್ಲ. ಜನರು ಏಕ ಪಕ್ಷದ ಸ್ಥಿರ ಸರ್ಕಾರವನ್ನು ಬಯಸಿದ್ದಾರೆ ಇದರ ಫಲವೇ ಕಳೆದ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷಕ್ಕೆ ದೊರೆತಿರುವ ಜನಾದೇಶ

ಎಂದು ಹೇಳಿದ್ದಾರೆ. ಒಟ್ಟಾರೆಯಾಗಿ ಈ ಸರ್ಕಾರ ಅಸ್ತಿತ್ವಕ್ಕೆ ಬರುವ ಮೊದಲೇ 20 ತಿಂಗಳ ಕಾಲ ಆರು ತಿಂಗಳ ಕಾಲ ರಾಷ್ಟ್ರಪತಿ ಆಡಳಿತ ಬಿಟ್ಟರೆ ಅದಕ್ಕೆ ಹಿಂದೆ ಸಮ್ಮಿಶ್ರ ಸರ್ಕಾರವಿತ್ತು. ಬಿಜೆಪಿ, ಜೆಡಿಎಸ್ ಸಮ್ಮಿಶ್ರ ಸರ್ಕಾರದ ಆಡಳಿತದ ಜವಾಬ್ದಾರಿಗಳಾಗಿದ್ದವು. ಹೊಣೆಗಾರಿಕೆಗಳಾಗಿದ್ದವು ಅವರ ಮಾತಲ್ಲಿ ಹೇಳುವುದಾದರೆ ಸಂಪೂರ್ಣ ವಿಫಲವಾಗಿದೆ ಎನ್ನುತ್ತಾರೆ. ಜನರ ಆಶಯಕ್ಕೆ ನಾವು ತಕ್ಕಂತೆ ಸ್ಪಂದಿಸಲಿಲ್ಲ. ಜನರು ಹತಾಶರಾದರು, ಭ್ರಮನಿರಸರಾದರು ಎನ್ನುವ ಮಾತನ್ನು ಹೇಳಿದರು. ನಾನು ಒಂದು ಮಾತನ್ನು ಹೇಳುತ್ತೇನೆ, ಅದು ನಿಜ ಜನರಿಗೆ ಪ್ರಯೋಜನವಾಗಲಿಲ್ಲ. ಭ್ರಮನಿರಶನವಾಯಿತು, ಆದರೆ 20 ತಿಂಗಳಕಾಲ ಅನೀರಿಕ್ಷಿತವಾದಂಥ ಒಂದು ಸಮ್ಮಿಶ್ರ ಸರ್ಕಾರ ಬಂದಥ ಸಂದರ್ಭದಲ್ಲಿ ಅದರ ಪ್ರಯೋಜನವಾಗಿರುವುದು ಬಿಜೆಪಿ ಮತ್ತು ಜೆಡಿಎಸ್‌ನ ಶಾಸಕರಿಗೆ. ಜೆಡಿಎಸ್ ನವರು ಕುಮಾರಸ್ವಾಮಿಯಂಥವರು ಮುಖ್ಯಮಂತ್ರಿಗಳಾಗುತ್ತಾರೆಂದು ನೀರಿಕ್ಷೆ ಮಾಡಿರಲಿಲ್ಲ. ಅದು ಈಡೇರಿತು. ಒಂದು ಕಡೆ ಬಿಜೆಪಿ ರವರ ಕನಸು ಕೂಡ ನನಸಾಯಿತು. ರಾಜ್ಯದಲ್ಲಿ ಅಧಿಕಾರಕ್ಕೆ ಬರುತ್ತೇವೆಂದು ಅವರು ಕನಸಲ್ಲೂ ಕೂಡ ನನೆಸಿರಲಿಲ್ಲ. ಆದರೆ, ಸಮ್ಮಿಶ್ರ ಸರ್ಕಾರದಿಂದ ಬಿಜೆಪಿ ಪಾಲುದಾರರಾದಿರಿ ಯಡಿಯೂರಪ್ಪನವರು ಕೂಡ ಉಪ ಮುಖ್ಯಮಂತ್ರಿಗಳಾಗತಕ್ಕಂಥ ಅವಕಾಶ ಸಿಕ್ಕಿತ್ತು. ಬಿಜೆಪಿ ಯವರು ಕೂಡ ಬಹಳ ಹೆಮ್ಮೆಯಿಂದ ದಕ್ಷಿಣ ಭಾರತದ ಹೆಬ್ಬಾಗಿಲು ಆಗುವಂಥ ಅವಕಾಶ ಸಿಕ್ಕಿತು, Gate way of South India ಆಗತಕ್ಕಂಥ ಅವಕಾಶ ನಮಗೆ ಸಿಕ್ಕಿತು ಎಂದು ಕೊಂಡರು. ನಾನು ಈ ಮಾತನ್ನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಅವರು ಹೇಳಿದ ರೀತಿಯಲ್ಲಿ ಸಂಪೂರ್ಣವಾಗಿ 20 ತಿಂಗಳು ಕರ್ನಾಟಕದ ಜನತೆಗೆ ಪ್ರಯೋಜನವಾಗದಿದ್ದರೂ ಮತ್ತು ಅವರಿಗೆ ಒಳ್ಳೆಯ ಆಡಳಿತವನ್ನು ಕೊಡುವುದಕ್ಕೆ ಆಗಲಿಲ್ಲವೆಂದು ಒಪ್ಪಿಕೊಂಡಿದ್ದರೂ ಕೂಡ ಅದರ ಪ್ರಯೋಜನ ಬಹುಶಃ ಇವತ್ತು ಭಾರತೀಯ ಜನತಾ ಪಕ್ಷಕೆ ಆಗಿದೆ. ಏಕೆಂದರೆ, ಇದು ಆದ ನಂತರದ ಘಟನೆಗಳ ಬಗ್ಗೆ ನಾನು ಮೆಲಕು ಹಾಕುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಅದರಲ್ಲಿ ಯಾರೂ ವಚನ ಭ್ರಷ್ಟರು ಮತ್ತು ಅದು ಯಾವ ರೀತಿಯಾಯಿತೆಂದು ಮತ್ತು ಆ ಹಿನ್ನೆಲೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿಯವರು ಮಾಡಿದಂಥ ಭಾಷಣವನ್ನು ನೋಡಿದಾಗ ಬಹಶಃ ಇಂಡಿಯಾ ದೇಶದ ಇತಿಹಾಸದಲ್ಲಿ ನಿಮ್ಮ 20 ತಿಂಗಳು ಮೈತ್ರಿ ಮುಗಿದ ನಂತರ ನಿಮ್ಮ ಹೇಳಿಕೆ ಮತ್ತು ಪ್ರತಿ ಹೇಳಿಕೆಗಳು ಯಾವ ರೀತಿ ಇತ್ತೆಂದರೆ ಈ ಕಡೆಯಿಂದ ಜೆಡಿಎಸ್‌ನವರು ಸೈಕಲ್ ಕೊಡತಕ್ಕಂಥದರಲ್ಲಿ ನಡೆದಂಥ ಭ್ರಷ್ಟಚಾರದ ಬಗ್ಗೆ ಮತ್ತು ಆ ಕಡೆಯಿಂದ ಅದಕ್ಕೆ ಪ್ರತಿಯಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನಡೆದಂಥ ಭ್ರಷ್ಟಚಾರಗಳ

ಬಗ್ಗೆ ಹೇಳಿದ್ದಾರೆ. 20 ತಿಂಗಳು ಸಮ್ಮಿಶ್ರ ಸರ್ಕಾರವನ್ನು ನಡೆಸಿ ಬಂದ ತಕ್ಷಣ ನಿಮ್ಮ ಮೈತ್ರಿ ಮುಗಿದ ನಂತರ ಭ್ರಷ್ಟಚಾರದ ಬಗ್ಗೆ ಒಬ್ಬೊರಿಗೊಬ್ಬರು ಅಪಾದನೆಗಳ ಸುರಿಮಳೆ ನಡೆದಿರುವಂಥದು ಬಹಶಃ ಇಂಡಿಯಾ ದೇಶದ ಇರಿಹಾಸದಲ್ಲಿ ಆಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಒಂದು ವಾರ ಮಾನ್ಯ ಯಡಿಯೂರಪ್ಪನವರಿಗೆ ಮುಖ್ಯ ಮಂತ್ರಿಗಳು ಆಗತಕ್ಕಂಥ ಅವಕಾಶ ಸಿಕ್ಕಿದ್ರು. ಮತ್ತೆ ಅವರನ್ನು ಅಧಿಕಾರದಿಂದ ಕೆಳಕ್ಕೆ ಇಳಿಸುವುದಕ್ಕೆ ಬಂದಂಥ ಸಂದರ್ಭ ಬಹಶಃ ಈ ರಾಷ್ಟ್ರದ ಇತಿಹಾಸದಲ್ಲಿ ನಡೆದಿಲ್ಲ. ಅದು ಲಕ್ಷ್ಮಣ್ ರೇಖೆ ಇರಬಹುದು ರಾಜಧರ್ಮ ಇರಬಹುದು. ಈ ಎಲ್ಲಾ ಹಿನ್ನಲೆಯಿಂದ ಅವರು ಅಧಿಕಾರವನ್ನು ಕಳೆದುಕೊಳ್ಳಬೇಕಾಯಿತು. ಈ ಜಾಡನ್ನು ಹಿಡಿದು ಅವರು ಕರ್ನಾಟಕ ರಾಜ್ಯದಲ್ಲಿ ಪ್ರಚಾರ ಮಾಡಿದರು. ಈ ಪ್ರಕ್ರಿಯೆ ಪ್ರಜಾಪ್ರಭುತ್ವದಲ್ಲಿ ಅಗತಕ್ಕಂಥದು. ಬಹುಶಃ ಈ ಒಂದು ಹಿನ್ನಲೆಯಲ್ಲಿ ಅವರು ಬರಬೇಕಾದರೆ, ಅನುಕಂಪ ಅಥವಾ ಬೇರೆ ಬೇರೆ ಫ್ಯಾಕ್ಟರ್‌ಗಳು ಇರಬಹುದು. ಇಷ್ಟೆಲ್ಲಾ ಕೆಲಸ ಮಾಡಿ ಭಾರತೀಯ ಜನತಾ ಪಕ್ಷ ಬಹುಮತವನ್ನು ಪಡೆಯದಿದ್ದಾಗಲೂ ಕೂಡ ಬಹುಮತದ ಹತ್ತಿರ ಬಂದು ಪಕ್ಷೇತರ ಸದಸ್ಯರ ಬೆಂಬಲದಿಂದ ಇವತ್ತಿನ ದಿವಸ ಸರ್ಕಾರ ರಚನೆಯಾಗಿದೆ. ಈಗ ಮಾನ್ಯ ಯಡಿಯೂರಪ್ಪನವರು ಮುಖ್ಯ ಮಂತ್ರಿಗಳಾಗಿ ಹಣಕಾಸಿನ ಖಾತೆಯನ್ನು ಇಟ್ಟುಕೊಂಡು ಇವತ್ತಿನ ದಿವಸ 2008-09ನೇ ಸಾಲಿನ ಬಜೆಟ್‌ಅನ್ನು ಮಂಡಿಸಿದ್ದಾರೆ. ಈಗಾಗಲೇ ಬಜೆಟ್ ಬಗ್ಗೆ ಈ ಕಡೆ ಮಾನ್ಯ ಶಾಸಕಾಂಗ ಪಕ್ಷದ ನಾಯಕರಾದಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಬಹಳ ಧೀರ್ಘವಾಗಿ ಮಾತನಾಡಿದ್ದಾರೆ.ಅದರಲ್ಲಿಯೂ ಕೂಡ ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿ 6 ಬಾರಿ ಬಜೆಟ್‌ಅನ್ನು ಮಂಡಿಸಿದ್ದಾರೆ. ಅವರು ಸುಮಾರು 3 ಗಂಟೆಗಳ ಕಾಲ ಬಜೆಟ್ ಮೇಲೆ ಬಹಳ ಸವಿಸ್ತಾರವಾಗಿ ಮತ್ತು ಎಳೆಎಳೆಯಾಗಿ ಸುರ್ಧಿಘವಾಗಿ ಅವರು ಮಾತನಾಡಿದ್ದಾರೆ. ಆದ್ದರಿಂದ, ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಮತ್ತೆ ಅದರ ಬಗ್ಗೆ ರಿಪಿಟ್ ಕೂಡ ನಾನು ಮಾಡುವುದಿಲ್ಲ. ಒಟ್ಟಾರೆ ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಕಡೆ ಇರುವ ವಿರೋಧಪಕ್ಷದವರು ಚರ್ಚೆಯಲ್ಲಿ ಭಾಗವಹಿಸಿ ಹೇಳತಕ್ಕಂಥ ಮಾತುಗಳು ಏನಿವೆ ಅವು ಬಹುಶಃ ಬಜೆಟ್‌ನಲ್ಲಿರತಕ್ಕಂಥ ಲೋಪದೋಷಗಳನ್ನು ಸರಿಪಡಿಸತಕ್ಕಂಥ ರೀತಿಯಲ್ಲಿರುತ್ತವೆ. ಅದನ್ನು ಸರಿಪಡಿಸಿ ಬಜೆಟ್‌ಅನ್ನು ಸ್ಟ್ರೆಂಥನ್ ಮಾಡತಕ್ಕಂಥ ದೃಷ್ಟಿಯಲ್ಲಿ ಒಳ್ಳೆಯ ಸಲಹೆಗಳನ್ನು ನಾವು ಕೊಡಬೇಕೆಂದು ಮತ್ತು ರಾಜ್ಯದ ಜನರಿಗೆ ಒಳ್ಳೆಯ ಆಡಳಿತ ಸಿಗಬೇಕೆಂದು ಕರ್ನಾಟಕ ರಾಜ್ಯ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವಂಥ ಅಂಶ ಬಹಳ ಪ್ರಾಮುಖ್ಯವಾಗಿ

ಬಜೆಟ್‌ನಲ್ಲಿರತಕ್ಕಂಥದ್ದು ಈ ಒಂದು ಹಿನ್ನಲೆಯಲ್ಲಿ ಇವತ್ತಿನ ದಿವಸ ನಾವು ಅನೇಕ ಸಲಹೆಗಳನ್ನ ಮತ್ತು ಬಜೆಟ್‌ನಲ್ಲಿರತಕ್ಕಂಥ ಲೋಪದೋಷಗಳನ್ನೂ ಕೂಡ ಎತ್ತಿ ತೋರಿಸತಕ್ಕಂಥ ಪ್ರಯತ್ನಗಳನ್ನೂ ಕೂಡ ನಾವು ಮಾಡಿದ್ದೇವೆ. ನಾನು ಮಾನ್ಯ ಯಡಿಯೂರಪ್ಪನವರನ್ನು ಮೆಚ್ಚುತ್ತೇನೆ. ಏಕೆಂದರೆ, ಮ್ಯಾರಥಾನ್ ಎಕ್ಸರ್‌ಸೈಜ್ ಮಾಡುವಂತೆ ಇದೇನು ಸಾಧಾರಣವಾದುದಲ್ಲ. ಬಹಳ ಒಳ್ಳೆಯ ಕಸರತ್ತನ್ನು ತಾವು ಮಾಡಿದ್ದೀರಿ. ಅಷ್ಟೇ ಬುದ್ಧಿವಂತಿಕೆಯಲ್ಲಿ ಕೈಚಳಕವನ್ನು ಮಾಡಿರತಕ್ಕಂಥದನ್ನು ನಾವು ನೋಡುತ್ತಿದ್ದೇವೆ. 83 ಪುಟಗಳ ಬಜೆಟ್‌ನಲ್ಲಿ ಸುಮಾರು 226 ಅಂಶಗಳನ್ನು ಅದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಇದನ್ನೆಲ್ಲಾ ಓದಿದ್ದೇನೆ. ಇದನ್ನು ಎಷ್ಟು ಚೆನ್ನಾಗಿ ಮಾಡಿದ್ದಾರೆಂದರೆ, ಬೆಂಗಳೂರಿನಲ್ಲಿ ಸಂಸ್ಕೃತ ವಿಶ್ವವಿದ್ಯಾಲಯದಿಂದ ಹಿಡಿದು ಮೈಸೂರಿನ ಪಿಂಜ್ರಾ ಪೋಲ್‌ವರೆಗೂ ಕೂಡ ಈ ಪುಸ್ತಕದ 83 ಪುಟಗಳಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅವರು ಬಹಳ ಸುಧೀರ್ಘವಾಗಿ ಎಲ್ಲಾ ವಿಷಯಗಳನ್ನು ಅಳವಡಿಸತಕ್ಕಂಥ ರೀತಿಯಲ್ಲಿ ಮಾಡಿದ್ದಾರೆ. ಇದರ ಬಗ್ಗೆ ನಮ್ಮ ಗ್ರಾಮೀಣ ಭಾಷೆಯಲ್ಲಿ ಹೇಳುವ ಹಾಗೆ ಆಡು ಮಟ್ಟದ ಸೊಪ್ಪಿಲ್ಲ ಎನ್ನುವ ರೀತಿಯಲ್ಲಿ ಇವರು ಬಹುಶಃ ಎಲ್ಲಾ ಕ್ಷೇತ್ರಗಳನ್ನು ಮುಟ್ಟಿದ್ದಾರೆ ಮತ್ತೆ ಎಲ್ಲಾ ವಿಷಯಗಳನ್ನು ಅವರ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿರತಕ್ಕಂಥದನ್ನು ನಾವು ಕಾಣುತ್ತೇವೆ. ಮತ್ತೆ ಅದರ ಹಿನ್ನಲೆ ಕೂಡ ಬಹಳ ಸ್ಪಷ್ಟವಾಗಿದೆ. ಅದೇನೆಂದರೆ, ಬಜೆಟ್ ಅನ್ನು ಸಮಗ್ರವಾಗಿ ಓದಿ ನೋಡಿದಾಗ ಅವರು ಚುನಾವಣೆ ಸಂದರ್ಭದಲ್ಲಿ ಕೊಟ್ಟಿದಂಥ ಚುನಾವಣೆ ಪ್ರಣಾಳಿಕೆಯನ್ನು ಗಮನದಲ್ಲಿಟ್ಟುಕೊಂಡು ಈ ಬಜೆಟ್‌ಅನ್ನು ಮಾಡಿದ್ದಾರೆ. ಅದರ ಜೊತೆ ಜೊತೆಗೆ ಇವತ್ತಿನ ದಿವಸ ಬಹಳ ಪ್ರಮುಖವಾದಂಥ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಚುನಾವಣೆ ಕೂಡ ಬರುತ್ತಿದೆ. ಆ ಹಿನ್ನೆಲೆಯಲ್ಲಿ ಅವರು ಬಹಳ ಚೆನ್ನಾಗಿ ಯೋಚನೆ ಮಾಡಿದ್ದಾರೆ. ಮತ್ತೆ ಸಧ್ಯದಲ್ಲಿಯೇ ಲೋಕಸಭೆ ಚುನಾವಣೆ ಬರುತ್ತದೆ. ಈ ಮೂರು ವಿಚಾರಗಳನ್ನು ಮನಗೊಂಡು ಬಹಳ ಬುದ್ಧಿವಂತಿಕೆಯಿಂದ ಅವರು ಈ ಬಜೆಟ್‌ಅನ್ನು ತಯಾರು ಮಾಡಿರತಕ್ಕಂಥದು ಕಾಣುತ್ತದೆ ಬಜೆಟ್‌ನಲ್ಲಿ ನಾನು ನೋಡಿರತಕ್ಕಂಥದರಲ್ಲಿ ರೈತರಿಗೆ ಬೇಕಾದಂಥದ್ದು ಮತ್ತು ಸರ್ಕಾರಿ ನೌಕರರಿಗೆ ಬಹಳ ಬುದ್ಧಿವಂತಿಕೆಯಿಂದ ನಿವೃತ್ತಿ ವಯಸ್ಸು 58 ರಿಂದ 60ಕ್ಕೆ ತಂದಿದ್ದಾರೆ. ಸರ್ಕಾರಿ ನೌಕರರ ವಯಸ್ಸನ್ನು ಅವರು ಹೆಚ್ಚಿಗೆ ಮಾಡಿದ್ದಾರೆ. ಮತ್ತೆ ಗ್ರಾಮ ಪಂಚಾಯತ್ ಸದಸ್ಯರಿಗೂ ಕೂಡ ಸಂಬಳ ಕೊಡತಕ್ಕಂಥ ರೀತಿಯಲ್ಲಿ ಅವರನ್ನೂ ಕೂಡ ಮೆಚ್ಚಿಸುವಂತಹ ಎಲ್ಲ ಪ್ರಯತ್ನಗಳನ್ನು ಅವರು ಮಾಡಿದ್ದಾರೆ. ಒಟ್ಟಿನಲ್ಲಿ ಅವರು ಬಜೆಟ್‌ಅನ್ನು ಮಂಡನೆ ಮಾಡಿದ ನಂತರ ಅವರ ಮುಖವನ್ನು ನೋಡಿದಾಗ

ಮತ್ತು ಅದರ ಪ್ರತಿಕ್ರಿಯೆ ಹೇಗಿತ್ತೆಂದರೆ, ನನ್ನ ಬಜೆಟ್‌ನಲ್ಲಿ ನಾನು ಡಿಸ್ಟಿಂಕ್ಷನ್‌ನಲ್ಲಿ ಪಾಸ್ ಆಗಿದ್ದೇನೆ ಎನ್ನತಕ್ಕಂಥದು ಅವರ ಮನಸ್ಸಿನಲ್ಲಿತ್ತು. ಆದರೆ , ನನಗೇನು ಅನಿಸುತ್ತದೆಂದರೆ, ಅವರು ಡಿಸ್ಟಿಂಕ್ಷ್‌ನಲ್ಲಿ ಪಾಸ್ ಆಗದಿದ್ದರೂ ಕೂಡ ಫೇಲ್ ಅಂತೂ ಆಗಿಲ್ಲ. ಅವರು ಬಜೆಟ್‌ನಲ್ಲಿ ಜಸ್ಟ್ ಪಾಸ್ ಆಗಿರತಕ್ಕಂಥದನ್ನು ನಾವು ನೋಡಬಹುದು. ಅವರು ಬಹಳ ಎಚ್ಚರಿಕೆಯಿಂದ ಮಾಡಿದ್ದಾರೆ. ಮತ್ತೆ (ಸಂಪೂರ್ಣವಾಗಿ ವಿಫಲವಾಗಿದೆ ಎಂದು ನಾವು ಹೇಳುವುದಕ್ಕೆ ಆಗದ ರೀತಿಯಲ್ಲಿ ಅವರು ಬಹಳ ಬುದ್ಧಿವಂತಿಕೆಯಿಂದ ಬಜೆಟ್‌ಅನ್ನು ಮಾಡಿರತಕ್ಕಂಥದನ್ನು ನಾವು ಕಾಣುತ್ತಿದ್ದೇವೆ. ಮತ್ತೇ ನಿಮ್ಮ ಸಮ್ಮಿಶ್ರ ಸರ್ಕಾರದಲ್ಲಿ ನಿಮ್ಮ ಪಕ್ಷಕ್ಕೆ 110 ಸೀಟ್‌ಗಳು ಬಂದಾಗಲೂ ಕೂಡ 6 ಜನರಲ್ಲಿ ನಾಲ್ಕು ಜನ ಪರಿಶಿಷ್ಟ ಜಾತಿಯ ಸದಸ್ಯರು ನಿಮಗೆ ಬೆಂಬಲ ಕೊಟ್ಟಿದ್ದಾರೆ. ಇದರಲ್ಲಿ ನಾಲ್ಕು ಜನ ಕೂಡ ಇಂಡಿಪೆಂಡೆಂಟ್ ಆಗಿ ಆಯ್ಕೆಯಾಗಿದ್ದಾರೆ. ಮತ್ತೆ ಕೆಲವರು ಜನರಲ್ ಕಾನ್‌ಸ್ಟಿಯೆನ್ಸಿಯಿಂದ ಆಯ್ಕೆಯಾಗಿ ಬಂದಿದ್ದಾರೆ. ಆದರೆ, ಈ ನಾಲ್ಕು ಜನರಿಂದ ನಿಮ್ಮ ಸರ್ಕಾರ ನಿಂತಿದೆ. ಆದ್ದರಿಂದ, ಅವರ ಬಗ್ಗೆ ನಿಮ್ಮ ಜವಾಬ್ದಾರಿ ಮತ್ತು ವಿಶ್ವಾಸ ಹೆಚ್ಚಾಗಬೇಕು. ಪರಿಶಿಷ್ಟ ಸದಸ್ಯರಿಗೂ ಕೂಡ ಒಳ್ಳೆಯ ಪೋರ್ಟ್‌ಪೋಲಿಯೋವನ್ನು ಸಹ ಕೊಡಬಹುದಾಗಿತ್ತು. ಆದರೆ, ಇವತ್ತು ಏಕೆ ಕೊಟ್ಟಿಲ್ಲವೆಂಬುದು ನನಗ ಅರ್ಥವಾಗುತ್ತಿಲ್ಲ. ಆ ಜನಾಂಗದಿಂದ ಬಂದಂಥ ಹಿನ್ನೆಲೆಯಲ್ಲಿ ಅವರ ಬಗ್ಗೆ ಸ್ಪಂದಿಸತಕ್ಕಂಥ ರೀತಿಯಲ್ಲಿ ಮತ್ತು ಅವರು ಆ ಧಾಟಿಯಲ್ಲಿ ಕೆಲಸ ಮಾಡತಕ್ಕಂಥ ರೀತಿಯಲ್ಲಿ ಅಂದರೆ, ಮೀಸಲಾತಿ ಕ್ಷೇತ್ರದಿಂದ ಆಯ್ಕೆಯಾಗಿ ಬಂದಂಥವರಿಗೆ ವಿಶೇಷವಾದಂಥ ಜವಾಬ್ದಾರಿಗಳೂ ಕೂಡ ಇರುತ್ತದೆ. ಬಹುಶಃ ಅದನ್ನು ತಾವು ಮಾಡಬಹುದಾಗಿತ್ತು. ಬಹುಶಃ ಅದರಲ್ಲಿ ತಾವು ಎಡವಿದ್ದೀರಿ ಎಂದು ನನಗೆ ಕಾಣಿಸುತ್ತದೆ. ನಿಮ್ಮ prerogative ಇರಬಹುದು. ಏಕೆಂದರೆ ಅದು ನಿಮ್ಮ ಪ್ರಿವಿಲೇಜ್ ಮತ್ತು ಅದು ನಿಮಗೆ ಸೇರತಕ್ಕಂಥದ್ದು, ಆದ್ದರಿಂದ, ಇದನ್ನು ಮಾಡುವಾಗ ತಾವು ಯೋಚನೆ ಮಾಡಬಹದಾಗಿತ್ತೆಂಬ ವಿಷಯವನ್ನು ನಾನು ತಮ್ಮ ಜ್ಞಾಪಕಕ್ಕೆ ತರುವುದಕ್ಕೆ ಬಯಸುತ್ತೇನೆ. ನಾನು ಬಜೆಟ್‌ಅನ್ನು ನೋಡಿದಂತಹ ಸಂದರ್ಭದಲ್ಲಿ ನಿಮ್ಮ ಪಕ್ಷದ ಚುನಾವಣೆ ಪ್ರಣಾಳಿಕೆಯಲ್ಲಿ ಆಶ್ವಾಸನೆಗಳ ಮಹಾ ಪೂರವೇ ಹರಿದಿರತಕ್ಕಂಥದನ್ನು ನಾವು ಕಾಣುತ್ತೇವೆ. ಇದು ಸಹಜ. ಆದರೆ, ನಮ್ಮ ಮಾಧ್ಯಮ ಮಿತ್ರರು ಮತ್ತು ಬೇರೆಯವರೆಲ್ಲರೂ ನಿಮಗೆ ಪ್ರಶ್ನೆಯನ್ನು ಕೇಳಿ, ಇಷ್ಟು ಭರವಸೆಗಳನ್ನು ತಾವು ಕೊಟ್ಟಿದ್ದೀರಿ, ಬಹುಶಃ ಇದನ್ನು ಈಡೇರಿಸುವಂಥ. ದಿಕ್ಕಿನಲ್ಲಿ ತಾವೇನಾದರೂ ಯೋಚನೆ ಮಾಡಿದ್ದೀರಾ ಎಂದು ಮತ್ತು ಇದಕ್ಕೆ ರಿಸೋರ್ಸ್‌ಸ್ ಮೊಬಲೈಜೇಷನ್ ಏನಿರುತ್ತದೆ ಅದನ್ನು ಮಾಡಲಾಗಿದೆಯೇ? ಇದಕ್ಕೆ ಹಣಕಾಸಿನ ಸಂಪನ್ಮೂಲ

ಸುಮಾರು ಒಂದು ಲಕ್ಷ ಕೋಟಿ ರೂಪಾಯಿ ಬೇಕಾಗುತ್ತದೆಂದು ಅವರು ತಮ್ಮನ್ನು ಕೇಳಿದ್ದಾರೆ. ಹಣ ಎಲ್ಲಿಂದ ತರಬೇಕೆಂದು ಮಾನ್ಯ ಯಡಿಯೂರಪ್ಪನವರು ಅಷ್ಟೇ ಧೈರ್ಯವಾಗಿ ಹೇಳಿದ್ದಾರೆ. ಇದರಲ್ಲಿ ಯಾವುದೇ ತರಹದ ಮುಚ್ಚುಮರೆಯಿಲ್ಲದೇ ಅವರು ಮಾತನಾಡತಕ್ಕಂಥವರೆಂದು ನಮಗೆ ಗೊತ್ತಿದೆ. ಚುನಾವಣೆ ಪ್ರಣಾಳಿಕೆಯಲ್ಲಿ ಕೊಟ್ಟಿರುವ ಆಶ್ವಾಸನೆಗಳೆಲ್ಲವನ್ನು ಆ ದಿಕ್ಕಿನಲ್ಲಿ ಈಡೇರಿಸಬೇಕೆಂದು ನಮಗೆ ಗೊತ್ತಿದೆ ಎನ್ನತಕ್ಕಂಥ ಮಾತನ್ನು ಅವರು ಹೇಳಿದ್ದಾರೆ. ಅವರೇ ಮಂಡಿಸಿದಂಥ 2007–08ನೇ ಸಾಲಿನ ಬಜೆಟ್‌ನಲ್ಲಿ 47 ಸಾವಿರ ಕೋಟಿ ರೂಪಾಯಿ ಇತ್ತು. ಈ ಸಾರಿ ಸುಮಾರು 55 ಸಾವಿರ ಕೋಟಿ ರೂಪಾಯಿಯ ಬಜೆಟ್‌ಅನ್ನು ಅವರು ಮಂಡಿಸಿರುವುದನ್ನು ನಾವು ನೋಡುತ್ತಿದ್ದೇವೆ. ಅದರಲ್ಲಿ ರಿಸೋರ್ಸಸ್ ಮೊಬಲೈಜೇಷನ್ ಯಾವ ರೀತಿಯಾಗಬೇಕೆಂಬುದು ಮತ್ತು ಯಾವ ಯಾವ ಮೂಲದಿಂದ ಬರುತ್ತದೆಂಬುದನ್ನು ತಾವು ಈಗಾಗಲೇ ಹೇಳಿದ್ದೀರಿ. ಮತ್ತೆ ಸಾಲದ ರೂಪದಲ್ಲಿ 6818 ಕೋಟಿ ರೂಪಾಯಿ ತರುತ್ತೇವೆಂದು ಹೇಳಿದ್ದೀರಿ. ಮಾನ್ಯ ಸಿದ್ದರಾಮಯ್ಯನವರು ಮಾತನಾಡುವಂಥ ಸಂದರ್ಭದಲ್ಲಿ ಇದನ್ನು ಹೇಳಿದ್ದಾರೆ. ತಾವು ಇದನ್ನು ಮಾಡಬಾರದಾಗಿತ್ತು. stamp duty, Commercial Tax, Central Excise ನಿಂದ ಮತ್ತು State Excise ನಿಂದ ಬರತಕ್ಕಂಥದರ ಜೊತೆಯಲ್ಲಿ 3 ಸಾವಿರ ಕೋಟಿ ರೂಪಾಯಿಗಳನ್ನು ಭೂಮಿ ಮಾರಾಟ ಮಾಡಿ ತರುತ್ತೇವೆಂದು ಹೇಳಿದ್ದೀರಿ. ಇದು ಒಳ್ಳೆಯ ಪ್ರಿಸಿಡೆಂಟ್ ಆಗುವುದಿಲ್ಲ. ಸರ್ಕಾರದ ಆಸ್ತಿಯನ್ನು ಮಾರಾಟ ಮಾಡಿ ಹಣವನ್ನು ಸಂಗ್ರಹ ಮಾಡಿ ತರುತ್ತೇವೆಂದು ಹೇಳಿರತಕ್ಕಂಥದ್ದು ಬಹಶಃ ಒಳ್ಳೆಯ ರೀತಿಯಾದಂಥ ಆಲೋಚನೆಯಲ್ಲವೆಂದು ನಾನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹಶಃ ಬಜೆಟ್‌ನಲ್ಲಿ ಇದು ಬರಬಾರದಾಗಿತ್ತೆಂದು ತಮಗೆ ತಿಳಿಸಿ ಹೇಳುವುದಕ್ಕೆ ಬಯಸುತ್ತೇನೆ. ನನ್ನ ದೃಷ್ಟಿಯಲ್ಲಿ ಯೋಜನೆ ಮತ್ತು ಯೋಜನೇತರದ ಬಗ್ಗೆ ಹೇಳುವುದಾದರೆ, ನಾವು ಯೋಜನೆಗೆ ಹೆಚ್ಚು ಒತ್ತನ್ನು ಕೊಡಬೇಕಾಗುತ್ತದೆ. ಆದರೆ, ತಮ್ಮ ಬಜೆಟ್‌ನಲ್ಲಿ ಯೋಜನೇತರ ಬಾಬ್ತಿಗೆ ಹೆಚ್ಚಿಗೆ ಒತ್ತು ಕೊಟ್ಟಿದ್ದೀರಿ. ಯೋಜನೆಗೆ ಶೇಕಡ 48% ರಷ್ಟು ಕೊಟ್ಟು ಯೋಜನೇತರದಲ್ಲಿ 52% ನಷ್ಟು ತಾವು ಕೊಟ್ಟಿದ್ದೀರಿ. ಯೋಜನೆಗೆ ಕೇವಲ 26 ಸಾವಿರ ಕೋಟಿ ರೂಪಾಯಿ ಕೊಟ್ಟಿದ್ದೀರಿ. ಮತ್ತೆ ಯೋಜನೇತರದಕ್ಕೆ 29 ಸಾವಿರ ಕೋಟಿ ರೂಪಾಯಿಗಳನ್ನು ತಾವು ಇದರಲ್ಲಿ ಸೇರಿಸಿರತಕ್ಕಂಥದನ್ನು ನಾವು ನೋಡುತ್ತಿದ್ದೇವೆ. ಇದು ನಮ್ಮ ಪ್ರಗತಿಗೆ ಅಂದರೆ, ನಾವು ಗ್ಲೋಬಲೈಜೆಷನ್ ಹಿನ್ನಲೆಯಲ್ಲಿ ಮಾತನಾಡುವಂತಹ ಪರಿಸ್ಥಿಯಲ್ಲಿ ಯೋಜನೆಗೆ ಹೆಚ್ಚು ಒತ್ತು ಕೊಡದೇ ಇದ್ದರೆ ಅದು ನಮಗೆ ಆರ್ಥಿಕವಾಗಿ

that will lead to financial indiscipline ಆಗುತ್ತದೆ. ಅಂದರೆ, ಆರ್ಥಿಕ ಅಶಿಸ್ತಿಗೆ ಅದು ಬಹಳ ಕಾರಣವಾಗುತ್ತದೆ. ಏಕೆಂದರೆ, ನೀರಾವರಿ, ಕೃಷಿ, ಕೈಗಾರಿಕೆ ಅಥವಾ ನಗರದ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಇರಬಹುದು. ಈ ಎಲ್ಲಾ ದಿಕ್ಕಿನಲ್ಲಿ ನಾವು ನೋಡಬೇಕಾದರೆ, ಯೋಜನೆಗೆ ನಾವು ಹೆಚ್ಚು ಒತ್ತು ಕೊಟ್ಟು ಹೆಚ್ಚೆಚ್ಚು ಉತ್ಪಾದನೆ ಮಾಡತಕ್ಕಂಥ ರೀತಿಯಲ್ಲಿ ಮತ್ತು ಹೆಚ್ಚು ರಿಸೋರ್ಸಸ್‌ಅನ್ನು ಮೊಬಲೈಜೆಷನ್ ಮಾಡತಕ್ಕಂಥದರ ಬಗ್ಗೆ ನಾವು ಹೆಚ್ಚು ಗಮನವನ್ನು ಕೊಡಬೇಕಾಗಿತ್ತು. ಬಹಶಃ ಇದರಲ್ಲಿ ಯೋಜನೆತರಕ್ಕೆ ಹೆಚ್ಚು ಒತ್ತು ಕೊಟ್ಟಿರುವುದರಿಂದ ನಾನು ಈಗಾಗಲೇ ಹೇಳಿದ ಹಾಗೆ ಹಣಕಾಸಿನ ಶಿಸ್ತು ಬಹಶಃ ಹೆಚ್ಚಾಗತಕ್ಕಂಥ ಸಾಧ್ಯತೆ ಇದೆ ಎಂದು ಹೇಳುವುದಕ್ಕೆ ಬಯಸುತ್ತೇನೆ. ಇದರಲ್ಲಿಯೂ ಕೂಡ ವಿಶೇಷವಾಗಿ ನಿಮ್ಮ ದಾಹ ನೀರಾವರಿ ಮತ್ತು ಕೃಷಿಗೆ ಸಂಬಂಧಪಟ್ಟ ಹಾಗೆ ಇದೆ. ಏಕೆ ಈ ರೀತಿಯಾಗಿದೆ ಎಂದು ನಾನು ನೀರಾವರಿ ಸಚಿವರಾಗಿರುವ ಮಾನ್ಯ ಬಸವರಾಜ್ ಬೊಮ್ಮಾಯಿರವರಲ್ಲಿ ಕೇಳಿದಾಗ ಅವರು ಇದರ ಬಗ್ಗೆ ಸ್ವಲ್ಪ ಬ್ರೀಫ್ ಮಾಡಿದರು. ಆದರೆ ನೀರಾವರಿಗೆ 13.37% ಮಾತ್ರ ಅಂದರೆ, 55,000 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು, ನೀವು ಕೊಟ್ಟಿರುವುದು 3,468 ಕೋಟಿ ರೂಪಾಯಿಗಳು ಇದು ಬಹಳ ಕಡಿಮೆ ಇಷ್ಟು ಹಣ ಸಾಲದು. ಆ ಹಿನ್ನಲೆಯಲ್ಲಿ ನಾನು ಮಾತನಾಡುತ್ತಿರುವುದು ಈ ಹಣ ಏನೇನು ಸಾಲದು. ನಾನು ಪಕ್ಕದ ಸ್ಟೇಟ್ ಬಗ್ಗೆ ತಮ್ಮ ಗಮನಕ್ಕೆ ತಂದೆ, ಅಲ್ಲಿ ನೀರಾವರಿಯ ವ್ಯವಸ್ಥೆ ಮತ್ತು ಸೌಲಭ್ಯಗಳು ಅಲ್ಲಿರತಕ್ಕಂಥ ಬೇರೆ ಬೇರೆ infrastructure ಬಗ್ಗೆ ಎಲ್ಲವನ್ನು ಕೂಡ ನಾನು ತಮಗೆ ಹೇಳಿದೆ. ಆಂಧ್ರಪ್ರದೇಶದ ಬಗ್ಗೆ ಕೂಡ ತಮಗೆ ನಾನು ಮಾತನಾಡುತ್ತಾ ಹೇಳಿದೆ. ಅಲ್ಲಿ ಒಂದು ಲಕ್ಷ ಕೋಟಿ ರೂ.ಗಳ ಬಜೆಟ್‌ನಲ್ಲಿ ಸುಮಾರು 36% ಅಂದರೆ ಸುಮಾರು 36000 ಕೋಟಿ ರೂ.ಗಳನ್ನು ಅವರು ನೀರಾವರಿಗೆ ಕೊಡುತ್ತಾರೆ. ಅಲ್ಲಿ ಎಲ್ಲೆಲ್ಲಿ ನೀರಾವರಿ ಯೋಜನೆಗಳು ಇವತ್ತು ಪೆಂಡಿಗ್ ಇವೆಯೋ ಅವೆಲ್ಲವನ್ನು ಪೂರ್ಣ ಮಾಡಬೇಕು ಎನ್ನುವುದರಿಂದ ಅಲ್ಲಿ ನೀರಾವರಿಗೆ ಹೆಚ್ಚು ಆದ್ಯತೆ ಕೊಟ್ಟರೆ ಬಹುಶಃ ಕೃಷಿಕನಿಗೆ ಮತ್ತು ಕೃಷಿ ಕ್ಷೇತ್ರದಲ್ಲಿ ನಾವು ಹೆಚ್ಚು ಉತ್ಪಾದನೆಯನ್ನು ಮಾಡಬಹುದು. ನಮಗೆ ಸಂಪನ್ಮೂಲ ಆದರಿಂದ ಹೆಚ್ಚು ಬರುತ್ತದೆ. ರೈತರ ಬಾಳು ಕೂಡ ಬಹಳ ಹಸನಾಗುತ್ತದೆ. ಸಮಸ್ಯೆ ಕೂಡ ಬಹಳ ಬಗೆಹರಿಯುತ್ತದೆ. ಎನ್ನತಕ್ಕಂಥ ರೀತಿಯಲ್ಲಿ ನಾನು ಮಾತನಾಡುತ್ತಾ ಅವರಿಗೆ ಆ ವಿಷಯದಲ್ಲಿ ತಿಳಿಸಿ ಹೇಳಿದೆ. ಇನ್ನು ವಿದ್ಯುತ್ ಬಗ್ಗೆ ತಾವು ಚುನಾವಣೆಯಲ್ಲಿ ಪ್ರಸ್ತಾಪ ಮಾಡಿರುವಂಥದ್ದು, ಈಗಾಗಲೇ ಲೋಡ್‌ಶೆಡ್ಡಿಂಗ್ ಬಗ್ಗೆ ನಿಮ್ಮ Cabinet sub-committee ಏನು ಡಿಸಿಷನ್ ತೆಗೆದುಕೊಂಡಿದ್ದಾರೋ

ಗೊತ್ತಿಲ್ಲ. ಹೌದು, ವಸ್ತುಸ್ಥಿತಿ ಕೊಡಿ ಎಂದರೆ ಕೊಡುವುದಕ್ಕಾಗುವುದಿಲ್ಲ. ನಿಮಗೆ ಅನಿಸದೆ ಕೊಡಬೇಕು ಎನ್ನತಕ್ಕಂಥದ್ದು ಇದರಿಂದ ಸುಮಾರು 15 ಲಕ್ಷ ಜನ ರೈತರಿಗೆ ಅನುಕೂಲವಾಗುತ್ತದೆ. 10 ಹೆಚ್.ಪಿ. ವರೆಗೆ ಕೂಡ ನಾವು ರಿಯಾಯಿತಿ ಕೊಡಬೇಕು, ಉಚಿತವಾದ ರೀತಿಯಲ್ಲಿ ಕೊಡಬೇಕು. ಆದರೆ ಇದನ್ನು ಕೊಡುವಾಗ ಸ್ವಲ್ಪ ಯೋಚನೆ ಮಾಡಬೇಕಾಗಿತ್ತು. ನಮ್ಮಲ್ಲಿರತಕ್ಕಂಥ ವಿದ್ಯುತ್ ಉತ್ಪಾದನೆ ಎಷ್ಟು? National grid ನಿಂದ ನಮಗೆ ಎಷ್ಟು ಸಿಗುತ್ತದೆ. ಬೇರೆ ಬೇರೆ ರಾಜ್ಯದಿಂದ ನಾವು ಎಷ್ಟೆಷ್ಟು ಕೊಂಡುಕೊಂಡು ತರಬಹುದು. ಇವೆಲ್ಲವನ್ನು ಕೂಡ ಯೋಚನೆ ಮಾಡಿ ಹೇಳಬಹುದಾಗಿತ್ತು. ಆದರೆ ನಿಮಗೆ ಏನೋ ತಕ್ಷಣದಲ್ಲಿ ಪ್ರಚಾರ ಬೇಕು. ಅದಕ್ಕಾಗಿ ನಾವು ಹೇಳತಕ್ಕಂಥದ್ದು ನಿಮ್ಮ ಬಜೆಟ್ it is not a progressive budget, it is a populistic budget ಎನ್ನತಕ್ಕಂಥ ರೀತಿಯಲ್ಲಿ ಪ್ರಗತಿಪರ ಬಜೆಟ್ ಆಗಬೇಕು ಎನ್ನತಕ್ಕಂಥದ್ದು ಎಲ್ಲರ ಆಶಯ. ಬರೀ ಪ್ರಚಾರಕ್ಕೆ ಆಗಬೇಕು ಎನ್ನತಕ್ಕಂಥದ್ದು ಅಲ್ಲ. ತಾವು ಮಾಡತಕ್ಕಂಥ ಸಂದರ್ಭದಲ್ಲಿ ಇದನ್ನು ಯೋಚನೆ ಮಾಡಲಿಲ್ಲ. ಇವತ್ತು ಏನಾಗಿದೆ, domestic ಮತ್ತು ಬೇರೆ ಬೇರೆಯದಕ್ಕೆ ನಮಗೆ ವಿದ್ಯುತ್ ಸಾಲುತ್ತಿಲ್ಲ. ಮುಂಗಾರು ವಿಫಲವಾಗುತ್ತಿರುವುದರಿಂದ ಹೈಡಲ್ ಪ್ರಾಜೆಕ್ಟ್‌ನಿಂದ ನಮಗೆ ಹೆಚ್ಚು ಉತ್ಪಾದನೆ ಮಾಡುವುದಕ್ಕಾಗುತ್ತಿಲ್ಲ. ಆ ಹಿನ್ನಲೆಯಲ್ಲಿ ಪಾಪ ನಿವು ಒಪ್ಪಿಕೊಳ್ಳಲೇಬೇಕಾಗಿದೆ. ಏಕೆ ನೀವು ಇಷ್ಟು ತಡತಡವಾಗಿ ಬಂದಿರಿ, ನಿಜ ನೀವು ಚುನಾವಣೆಯ ಪ್ರಣಾಳಿಕೆಯಲ್ಲಿ ಹೇಳಿದ್ದಿರಿ. ಆದರೆ ಇವತ್ತು ಏನಾಗಿದೆ. ಬಹುಶಃ ಕೊಡುವುದಕ್ಕಾಗಲಿಲ್ಲ. ನಾನು ಒಂದು ಕಾರ್ಟೂನ್ ಅನ್ನು ಮಾಧ್ಯಮದಲ್ಲಿ ನೋಡಿದೆ, ಅದು ತುಂಬಾ ವ್ಯಂಗವಾಗಿ ಅರ್ಥಗರ್ಭಿತವಾಗಿತ್ತು. ರೈತ ಬಂದು ಕುಳಿತುಕೊಳ್ಳುತ್ತಾನೆ, ಸ್ವಾಮಿ ನಮಗೆ ಉಚಿತವಾದಂಥ ವಿದ್ಯುತ್‌ಅನ್ನು ಕೊಡಿ ನಮ್ಮ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ. ನೀನು ವಿದ್ಯುತ್‌ಅನ್ನು ಉತ್ಪಾದನೆ ಮಾಡು ಅಥವಾ ಬಿಡು ನಿಮಗೆ ಉಚಿತವಾಗಿ ವಿದ್ಯುತ್‌ನ್ನು ಕೊಡುತ್ತೇನೆ. ಎನ್ನುವಂಥ ಮಾತನ್ನು ಹೇಳಿರುವುದು ಇವತ್ತು ಒಂದು ಕಡೆ ಕಾರ್ಟೂನ್‌ನಲ್ಲಿ ನಾನು ನೋಡಿದೆ. ರೈತನಿಗೆ ಒಂದು ರೀತಿಯ ಪಾಪ, ತ್ರಾಸಿನಲ್ಲಿ ಅವನಿಗೆ ಉಚಿತವಾಗಿ ಕೊಡುತ್ತೇವೆ ಎಂದು ತಕ್ಷಣ, ಬಹುಶಃ ಅದನ್ನು ತಾವು ವಸ್ತುಸ್ಥಿತಿ ತಿಳಿದುಕೊಂಡು ಅದರ ಬಗ್ಗೆ ಇವತ್ತು ಮಾಡಿದ್ದರೆ ಅದು ಚೆನ್ನಾಗಿರುತ್ತಿತ್ತು, ಈ ಸಮಸ್ಯೆ ಬರುತ್ತಿರಲಿಲ್ಲ. ತಮಗೆ ವಿದ್ಯುತ್ ಎಲ್ಲಾ ಕ್ರೋಢೀಕರಿಸಿ ವಿದ್ಯುತ್ ನಿಮಗೆ ಸಾಕಷ್ಟು ಸಿಗುತ್ತದೆ ಎನ್ನತಕ್ಕಂಥದ್ದು ಮನದಟ್ಟಾದಾಗ ನೀವು ಈ ರೀತಿ ಅನೌನ್ಸ್ ಮಾಡಬಹುದಾಗಿತ್ತು. ಬಹಳ ಬೇಗ ಪ್ರಚಾರಕ್ಕೋಸ್ಕರ ಇದನ್ನು ಮಾಡಿರುವುದರಿಂದ ಬಹಳ ಜನ ರೈತರು

ಕೂಡ ಹತಾಶರಾಗಿದ್ದಾರೆ. ನಿಮಗೂ ಒಂದು ಕಡೆ ಮನಸ್ಸಿಗೆ ನಾವು ಕೊಟ್ಟಂಥ ಮಾತನ್ನು ಈಡೇರಿಸಿಕೊಳ್ಳುವುದಕ್ಕಾಗಲಿಲ್ಲ ಎನ್ನತಕ್ಕಂಥ ರೀತಿಯಲ್ಲಿ ಇವತ್ತು ತಾವು ಕೂಡ ಮನಸ್ಸಿನಲ್ಲಿ ಹತಾಶರಾಗಿರತಕ್ಕಂಥದ್ದನ್ನು ತಾವು ಕಾಣುತ್ತೀರಿ. ಇವತ್ತು ನೀವು ಬೇರೆ ಬೇರೆ ಬೇಡಿಕೆಗಳನ್ನು guillotine ಮೂಲಕ ಪಾಸ್ ಮಾಡುತ್ತಿದ್ದೀರಿ. ನಾನು ಬಜೆಟ್ ಮೇಲೆ ಮಾತನಾಡುವ ಈ ಸಂದರ್ಭದಲ್ಲಿ ತಮಗೆ ಕೆಲವು ಇಲಾಖೆಗಳ ಬಗೆ ಸಲಹೆಗಳನ್ನು ತಮ್ಮ ಗಮನಕ್ಕೆ ನಾನು ತರತಕ್ಕಂಥದ್ದು. ವಿಶೇಷವಾಗಿ ಶಿಕ್ಷಣದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ಇದನ್ನು ಹೇಳುತ್ತೇನೆ. ಏಕೆಂದರೆ ಸರ್ವಶಿಕ್ಷಣ ಅಭಿಯಾನ, ಇದು ನಾನು ಕೇಂದ್ರದ ಫುಡ್ ಮಿನಿಸ್ಟರ್ ಆಗಿದ್ದಂಥ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ನೆರವಿನಿಂದ ಆಗಿರುವಂಥದ್ದು. ಇದರ broad based concept ಅನ್ನು ನಾವು ಅರ್ಥಮಾಡಿಕೊಳ್ಳಬೇಕು. ಏಕೆಂದರೆ, ಈ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ನಾವು ಸಂವಿಧಾನವನ್ನು ಒಪ್ಪಿಕೊಂಡ ಆ ಸಂದರ್ಭದಲ್ಲಿ ನಾವು ಬಹಳ ಮುಖ್ಯವಾಗಿ emphasize ಮಾಡಿದ್ದು, ಒತ್ತಿ ಹೇಳಿರುವಂಥದ್ದು compulsory and free education ಇದರ ಬಗ್ಗೆ ಆವತ್ತು ನಾವು ಮಾತನಾಡಿರುವಂಥದ್ದು. 1950ನೇ ಇಸ್ವಿಯಲ್ಲಿ ಸಂವಿಧಾನದಲ್ಲಿ ನೇರ ನಿರ್ದೇಶನಗಳಲ್ಲಿ ಕಡ್ಡಾಯ ಮತ್ತು ಉಚಿತ ಶಿಕ್ಷಣವನ್ನು ಕೊಡಬೇಕು. ಈ ದೇಶದಲ್ಲಿರುವ 5 ರಿಂದ 14 ವರ್ಷದ ಒಳಗಿನ ಪ್ರತಿ ಮಗುವಿಗೆ ಶಿಕ್ಷಣ ಸಿಗಬೇಕು. ಏಕೆಂದರೆ ಈ ದೇಶದಲ್ಲಿ ಅನಕ್ಷರತೆ ಏನಿದೆ ಬಹುಶಃ ಇದೇ ಇಲ್ಲಿನ ಎಲ್ಲಾ ರೋಗರುಜಿನಗಳು ಮತ್ತು ಸಮಸ್ಯೆಗೆ ಕಾರಣ. Education is nothing but knowledge. ಅದು ಜ್ಞಾನವನ್ನು ತಿಳುವಳಿಕೆಯನ್ನು ಕೊಡತಕ್ಕ ಒಂದು ದೊಡ್ಡ ಸಾಧನ education ಎನ್ನತಕ್ಕಂಥದ್ದನ್ನು ನಾವು ಮನಗಂಡು ಪ್ರತಿಯೊಬ್ಬನಿಗೆ ಶಿಕ್ಷಣವನ್ನು ಕೊಡೋಣ, ಜ್ಞಾನ ಮತ್ತು ತಿಳುವಳಿಕೆಯನ್ನು ಕೊಡೋಣ, ಆನಂತರ ಈ ದೇಶದ ಬಗ್ಗೆ, ಸಮಸ್ಯೆಗಳ ಬ್ಗಗೆ ಈ ದೇಶದ ಪರಿಸ್ಥಿತಿಯ ಬಗ್ಗೆ, ಅವರಿಗೆ ತಿಳಿಸಿ ಹೇಳೋಣ ಎನ್ನತಕ್ಕಂಥ ಆಲೋಚನೆ ಇತ್ತು , ಆದರೆ ಅದರಲ್ಲಿ ನಾವು ಸೋತೆವು. we have failed, ಎಲ್ಲರಿಗೂ ಕೂಡ ಕಡ್ಡಾಯ ಮತ್ತು ಉಚಿತ ಶಿಕ್ಷಣ ಕೊಡುವುದರ ಮುಖಾಂತರ ಈ ದೇಶದಲ್ಲಿ ಪ್ರತಿಯೊಬ್ಬನಿಗೂ ಕೂಡ ಪ್ರತಿ ಕಡುಬಡವನಿಂದ ಹಿಡಿದು ಪ್ರತಿಯೊಬ್ಬ ಮಗುವಿಗೂ ಕೂಡ ನಾವು ಆ ಒಂದು ಶಿಕ್ಷಣವನ್ನು ಕಡ್ಡಾಯವಾಗಿ ಕೊಡುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಕೇಂದ್ರ ಸರ್ಕಾರ ಇವತ್ತು ಅದನ್ನು ಮನಗಂಡು ಸರ್ವಶಿಕ್ಷಣ ಅಭಿಯಾನದಲ್ಲಿ ಅದನ್ನು ತಂದಿರತಕ್ಕಂಥದ್ದು. ಆ ಹಿನ್ನೆಲೆಯಲ್ಲಿ ಇವತ್ತು Mid-day meals ಅಂತಹ ಒಂದು ಕಾರ್ಯಕ್ರಮ ಬಂದಿರತಕ್ಕಂಥದ್ದು. ಅದರ ಹಿನ್ನಲೆ ಏನು? ಮಧ್ಯಾಹ್ನದ ಉಪಹಾರವನ್ನು ಕೊಡತಕ್ಕಂಥದ್ದು.

ಇವತ್ತು ಕೂಡ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸತಕ್ಕಂಥ ಆಲೋಚನೆ ತಂದೆ ತಾಯಿಗಳಿಗೆ ಇಲ್ಲ. They are struggling for two square meals. ಎರಡು ಹೊತ್ತಿನ ಊಟಕ್ಕೋಸ್ಕರ ಹೋರಾಟ ಮಾಡತಕ್ಕಂಥದ್ದು, ತಾವು ದುಡಿದು ಆ ಮಗುವಿನ ಹೊಟ್ಟೆಗೆ ತರಬೇಕೆನ್ನುವವರು ಇದ್ದಾರೆ. ನಮಗೆ ಗೊತ್ತಿದೆ BPL card ಇದೆಲ್ಲಾ ಬಂದಾಗ ಎಷ್ಟು ಹಾಹಾಕಾರವಾಗುತ್ತಿದೆ ಎನ್ನತಕ್ಕಂಥದ್ದು. ಇವತ್ತು ಶೇಕಡಾ 30 ರವರೆಗೆ ಇಲ್ಲಿನ ಜನಸಂಖ್ಯೆಯಲ್ಲಿ ಬಡತನ ರೇಖೆಗಿಂತ ಕೆಳಗೆ ಇರುವವರಿಗೆ ಅಂದರೆ ಬಡತನವಲ್ಲ. ಎರಡು ಹೊತ್ತು ಊಟಕ್ಕೆ ಇಲ್ಲದೇ ಕೈ ಕಾಲು ಚಾಚಿ ಮಲಗಲಿಕ್ಕೆ ಮನೆ ಇಲ್ಲದಿರುವ ನಿರ್ಗತಿಕರಿದ್ದಾರೆ. ಅಂತಹ ಮಕ್ಕಳಿಗೆ ನಾವು ಶಿಕ್ಷಣವನ್ನು ಕೊಡತಕ್ಕಂಥದ್ದು ನಮ್ಮ ಕರ್ತವ್ಯವೆಂದು ಹೇಳಿ. ಅವರು ಮಗುವಿಗೆ ದುಡಿಯಲಿಕ್ಕೆ ಹೋಗು ಶಾಲೆಗೆ ಹೋಗಿ ಎಂದು ಅವರು ಹೇಳುವುದಿಲ್ಲ. ಮಧ್ಯಾಹ್ನ ಒಂದು ಹೊತ್ತು ಊಟವನ್ನು ಕೊಟ್ಟರೆ, nutrition food ಪೌಷ್ಠಿಕ ಆಹಾರವನ್ನು ಕೊಟ್ಟಾಗ ಊಟಕ್ಕೋಸ್ಕರವಾದರೂ ಮಗು ಶಾಲೆಗೆ ಹೊಟ್ಟೆ ಹಸಿವು ತಾಳಲಾರದೆ ಓಡಿ ಬರುತ್ತದೆ. ಆ ಮಗುವಿನಿಂದ ಹಿಡಿದು ಶಿಕ್ಷಣದ ಬಗ್ಗೆ ಆಸಕ್ತಿ ಮೂಡಿಸಬೇಕು ಎನ್ನವುದೇ ಇದರ ಮಹತ್ತರವಾದ ಆಕಾಂಕ್ಷೆ ಇರತಕ್ಕಂಥದ್ದು. ಹಾಗಾಗಿ ಇವತ್ತು Mid -day meals ಅನ್ನು ತಂದಿರುತ್ತೀರಿ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ, ಇದು ಬಹಳ ಸಂತೋಷ. ಈಗ 1 to 8 ವರೆಗೆ ಇದೆ, ನಾನು Food Minister ಆಗಿದ್ದಾಗ ದತ್ತು ತೆಗೆದುಕೊಂಡಂಥ 100 ಕ್ಕೆ 100 ರಷ್ಟು ದಲಿತ ಮಕ್ಕಳು ಓದುವಂಥ ಶಾಲೆಗೆ ಅದನ್ನು ಲಾಂಚ್ ಮಾಡುವುದಕ್ಕೆ ನಾನು ಹೋಗಿದ್ದೆ. ಆಗ 1 to 6 ವರೆಗೆ ಇತ್ತು. ಅಲ್ಲಿ ಹೆಣ್ಣು ಮಕ್ಕಳ ಹೈಸ್ಕೂಲ್ ಇತ್ತು, ನಾನು ಉದ್ಘಾಟನೆ ಮಾಡಿದಾಗ 1 to 6 ವರೆಗೆ ಊಟವನ್ನು ಹಾಕುತ್ತಿದ್ದೆ. ಬಡವರ 7 to 8 ರ ಸ್ಕೂಲಿನ ಮಕ್ಕಳು ಅಲ್ಲಿಯೇ ನಿಂತಿದ್ದರು ಬಡವರ ಮಕ್ಕಳು. ಆಗ ಅವರು ನನಗೆ ಒಂದು ಪ್ರಶ್ನೆಯನ್ನು ಕೇಳಿದರು. ನಾವು 6ನೇ ಕ್ಲಾಸಿನಿಂದ 7ನೇ ಕ್ಲಾಸಿಗೆ ಬಂದರೆ ನಾವು ಶ್ರೀಮಂತರ ಮಕ್ಕಳು ಆಗುತ್ತೇವೆಯೇ ನಾವು ಬಡವರ ಮಕ್ಕಳು ಅಲ್ಲವೆ? ನಮಗೆ ಏಕೆ ಮಧ್ಯಾಹ್ನದ ಊಟವನ್ನು ಕೊಡುವುದಿಲ್ಲ. ಎಂದು. ನಾನು ಆ ಶಾಲೆಯನ್ನು ಏನು ದತ್ತು ತೆಗೆದುಕೊಂಡಿದ್ದೆ 1 ರಿಂದ 8ನೇ ತರಗತಿಯ ಮಕ್ಕಳಿಗೂ ಮಧ್ಯಾಹ್ನದ ಊಟವನ್ನು, ಈ ಮಕ್ಕಳ ಜೊತೆಯಲ್ಲಿ ಕೊಡಬೇಕೆಂದು ಹೇಳಿದೆ. ಬಹಳ ಸಂತೋಷ ಈಗ 1 to 8 ಕ್ಲಾಸ್‌ವರಗೆ ಕೊಡುತ್ತಿದ್ದೀರಿ ಬಡವರ ಮಕ್ಕಳ ಹಾಜರಾತಿ ಇವತ್ತು ಜಾಸ್ತಿಯಾಗುತ್ತಿದೆ. , ಶಿಕ್ಷಣದ ಬಗ್ಗೆ ಆಸಕ್ತಿ ಜಾಸ್ತಿಯಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ನಾನು ಏಕೆ ಇದನ್ನುಹೇಳಿದೆ ಎಂದರೆ, ಇವತ್ತು ತಾವು ತಮಿಳುನಾಡು ನೋಡಿ ಕಲಿಯಬೇಕು ಅವರು

ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ಆ ರಾಜ್ಯದಲ್ಲಿ ಮಾಡುತ್ತಿದ್ದಾರೆ ಎಂ.ಜಿ.ಆರ್. ರವರು for the first time ಈ Mid-day meals ಅನ್ನು ಈ ದೇಶದಲ್ಲಿ ತಂದಿರುವಂಥವರು. ಏಕೆಂದರೆ ಅವರು ಒಂದು ಕಡೆ ಶಿಕ್ಷಣದಿಂದ ವಂಚಿತರಾಗಿದ್ದರು. ಎಂದು ಹೇಳುತ್ತಾರೆ. ಊಟ ಸಿಕ್ಕಿದ್ದರೆ ನಾನು ಓದುವುದಕ್ಕೆ ಹೋಗುತ್ತಿದ್ದೆ ಅದು ಸಿಗಲಿಲ್ಲ. ಅವರು ಮುಖ್ಯಮಂತ್ರಿಯಾದಾಗ ಮೊದಲು ತೆಗೆದುಕೊಂಡು ಬಂದರು. ಇವತ್ತು ನಾನು ಸರ್ಕಾರದಲ್ಲಿ ಕೇಳುತ್ತಿರುವುದು ಇವತ್ತು ಸುಮಾರು 968 ಕೋಟಿ ರೂ. ಗಳಷ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಲಕ್ಷಾಂತರ ಮಕ್ಕಳು ಇವತ್ತು ಮಧ್ಯಾಹ್ನದ ಉಪಹಾರದ ಒಂದು ಪ್ರಯೋಜನವನ್ನು ಪಡೆಯುತ್ತಿರುವಂಥದ್ದು. ಇದರಲ್ಲಿ ನಾನು ತಮಗೆ ಹೇಳತಕ್ಕಂಥದ್ದು, ಇದರಲ್ಲಿ ಬರೀ Education Department ನ ಮೇಷ್ಟ್ರುಗಳಿಗೆ ಇದನ್ನು ಬಿಟ್ಟು ಬಿಡಬೇಡಿ. ಇಷ್ಟು ಹಣವನ್ನು ಖರ್ಚು ಮಾಡತಕ್ಕಂಥ ಪ್ರಮುಖವಾದಂಥ ಕಾರ್ಯಕ್ರಮ ಏನಿದೆ ಶೋಷಿತ ಬಡ ಮಕ್ಕಳಿಗೆ ಊಟ ಕೊಡತಕ್ಕಂಥ ಈ ಕಾರ್ಯಕ್ರಮದಲ್ಲಿ ಪ್ರತ್ಯೇಕವಾದಂಥ ಡೈರೆಕ್ಟರೇಟ್ ಇರಬೇಕು. ಪ್ರತ್ಯೇಕವಾದಂಥ ಮಿನಿಸ್ಟರ್ ಕೂಡ ಇದಕ್ಕೆ ಇರಬೇಕು. 24 ಗಂಟೆ ತಮ್ಮನ್ನು ತೊಡಗಿಸಿಕೊಳ್ಳುವ full fledged ಮಿನಿಸ್ಟರ್ ಬರಬೇಕು. ಅದಕ್ಕೆ ಇಲ್ಲಿ ಡೈರೆಕ್ಟರೇಟ್ ಇರಬೇಕು. ಇಷ್ಟು ಕೋಟಿ ರೂ.ಗಳ ಇಂತಹ ಕಾರ್ಯಕ್ರಮವನ್ನು ನೀವು ಹಗುರವಾಗಿ ತೆಗೆದುಕೊಳ್ಳಬಾರದು ಎನ್ನುವ ದೃಷ್ಟಿಯಿಂದ, ಇದನ್ನು ಇವತ್ತು ಈ ಸರ್ಕಾರ ಮಾಡಬೇಕಾಗಿದೆ. ಯೋಚನೆ ಮಾಡಿ ಮಾಡತಕ್ಕಂಥ ಹೊಣೆಗಾರಿಕೆ ನಿಮಗೆ ಇದೆ ಎನ್ನತಕ್ಕಂಥ ರೀತಿಯಲ್ಲಿ ಸರ್ವಶಿಕ್ಷಣ ಅಭಿಯಾನದ ಹಿನ್ನೆಲೆಯಲ್ಲಿ ನಾನು ತಮಗೆ ಒಂದು ಈ ಸಲಗೆಯನ್ನು ಕೊಡುತ್ತಿದ್ದೇನೆ. ಬಹುಶಃ ತಾವು ಇದನ್ನು ಸೀರಿಯಸ್ಸಾಗಿ ಯೋಚನೆ ಮಾಡಬೇಕು. ಸಾವಿರ ಕೋಟಿ ರೂ. ಗಳ ಹತ್ತಿರ ಬರತಕ್ಕಂಥದ್ದು. ಲಕ್ಷಾಂತರ ಬಡ ಮಕ್ಕಳಿಗೆ ಊಟವನ್ನು ಕೊಡತಕ್ಕಂಥ ಬಹಳ ಲೋಪ ದೋಷಗಳು ಇವೆ, ಇದರಲ್ಲಿ ದುರುಪಯೋಗವಾಗುತ್ತಿದೆ. ಇದನ್ನು ತಡೆಗಟ್ಟತಕ್ಕಂಥ ರೀತಿಯಲ್ಲಿ ಸರ್ಕಾರ ಮುಂದೆ ಬರಬೇಕು. ಇದಕ್ಕೆ ಪ್ರತ್ಯೇಕವಾದ ಸಚಿವಾಲಯ ಸಂಪೂರ್ಣವಾಗಿ ಇದನ್ನು ಜವಾಬ್ದಾರಿ ತೆಗೆದುಕೊಳ್ಳತಕ್ಕಂಥ ಒಂದು ಟೀಮ್ ಬೇಕಾಗಿದೆ ಎನ್ನತಕ್ಕಂಥ ದೃಷ್ಟಿಯಲ್ಲಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಇದನ್ನು ತಾವು ಯೋಚನೆ ಮಾಡಬೇಕು. ಎಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಕಾಗೇರಿಯವರು ಈಗ ಇಲ್ಲಿ ಇಲ್ಲ. ಶಿಕ್ಷಣದ ಬಗ್ಗೆ ಬಂದಿರುವುದರಿಂದ it is a burining problem ಒಂದು ವಿಷಯ ಇದೆ, ಇವತ್ತು ಇತ್ತೀಚಿನ ಹೈಕೋರ್ಟ್ ಡಿಸಿಷನ್ ಏನಿದೆ......

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಒಂದು ಕಡೆ ಬಜೆಟ್ ಮೇಲೆ ಡಿಸ್‌ಕಷನ್ ಇದೆ. ಇನ್ನೊಂದು ಕಡೆ ಸುಮಾರು 25–30 ಡಿಮ್ಯಾಂಡ್‌ಗಳನ್ನ ಹಾಕಿದ್ದಾರೆ. ಅದನ್ನು ಸಹ ಮೂವ್ ಮಾಡಿದ್ದಾರೆ. ಅದರ ಬಗ್ಗೆ ಚರ್ಚೆಯೂ ಸಹ ಇದೆ. ಇದಕ್ಕೆ ಸಂಬಂಧಪಟ್ಟಂತಹ ಮಂತ್ರಿಗಳು ಇಲ್ಲಿ ಇಲ್ಲವೆಂದರೆ, ಅವರು ಕೊಠಡಿಗೆ ಹೋಗಿ ಹೇಳಬೇಕೇ? ಮಾನ್ಯ ಸದಸ್ಯರು ಸರ್ವ ಶಿಕ್ಷಣ ಅಭಿಯಾನದ ಬಗ್ಗೆ ಹೇಳಿದರು. ಆ ಬಗ್ಗೆ ಯಾರು ತಿಳಿದುಕೊಂಡು, ಅದರ ಬಗ್ಗೆ ಯಾರು ಬರೆದುಕೊಳ್ಳುತ್ತಾರೋ, ಇದನ್ನು ಅನುಷ್ಠಾನದಲ್ಲಿ ತರುವವರು ಯಾರೂ? ಆ ಮಂತ್ರಿಯೂ ಸಹ ಸದನದಲ್ಲಿಲ್ಲ, ಮುಖ್ಯಮಂತ್ರಿಗಳು ಸಹ ಇಲ್ಲಿ ಇಲ್ಲ. ನಾವು ಹೇಳುವುದು ಯಾರಿಗೆ? ಯಾರಿಗೋಸ್ಕರ ಹೇಳುವುದು? ಇಲ್ಲಿ ಸಕ್ರೆಟರಿಗಳು ಸಹ ಇಲ್ಲ ಸಂಬಂಧಪಟ್ಟಂತಹ ಸಕ್ರೆಟರಿಯವರು ಇಲ್ಲ, ಖುರ್ಚಿಗಳು ಖಾಲಿ ಬಿದ್ದಿವೆ. ಎಲ್ಲವನ್ನು ಸಹ ಲಘುವಾಗಿ ತೆಗೆದುಕೊಂಡರೆ ನಾವು ಇಲ್ಲಿಗೆ ಬರುವುದಕ್ಕೆ ಅರ್ಥವೇನು? ಇಲ್ಲಿ ನಾವು

(ಈ ಹಂತದಲ್ಲಿ ಡಾ. ಪರಮೇಶ್ವರ್‌ರವರು ಅಧ್ಯಕ್ಷ ಪೀಠಕ್ಕೆ ಬಂದರು)

ಮಾತನಾಡುವುದು ಏತಕ್ಕೆಂದರೆ, ಬಹುಶಃ ಇಲ್ಲಿ ಮಾತನಾಡಿದರೆ ಅವರು ಇದನ್ನು ಗಮನದಲ್ಲಿ ತೆಗೆದುಕೊಂಡು ಅವರು ಇಲಾಖೆಯವರೊಂದಿಗೆ ಚರ್ಚೆ ಮಾಡಿ ಅದಷ್ಟು ಮಟ್ಟಿಗೆ ಇದಕ್ಕೆ ಪರಿಹಾರವನ್ನು ಕೊಡುತ್ತಾರೆ. ಇದಕ್ಕೆ ಸ್ಪಂದಿಸುತ್ತಾರೆ. ಅನ್ನುವಂತಹ ದೃಷ್ಟಿಯಿಂದ ಇದನ್ನು ರೈಸ್ ಮಾಡುತ್ತೇವೆ. ಅಂದರೆ ಇದಕ್ಕೇನು ಅರ್ಥವೇನು ಇಲ್ಲ.

ಛೇರ್ಮನ್: ಮಾನ್ಯ ಸಚಿವರಾದ ಶ್ರೀ ಅಶೋಕ್‌ರವರು ಬರೆದುಕೊಳ್ಳುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರ ಎಷ್ಟು ಎಂದು ಬರೆದುಕೊಳ್ಳುತ್ತಾರೆ?

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು): ಮಾನ್ಯ ಸದಸ್ಯರಾದ ಶ್ರೀ ವಿ. ಶ್ರೀನಿವಾಸ್ ಪ್ರಸಾದ್ ಹೇಳುವುದನ್ನೆಲ್ಲಾ ಬರೆದುಕೊಳ್ಳತ್ತಿದ್ದೇನೆ. ಇಲ್ಲಿ Chief Secretary ಯವರು ಇದ್ದಾರೆ. ವಿಧಾನಪರಿಷತ್ತಿಗೆ ಕೆಲವು ಮಂತ್ರಿಗಳು ಹೋಗಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಶೋಕ್‌ರವರೆ, ಈ ಸದನವು ಬಹಳ ಮುಖ್ಯ ಆ ಸದನ ಮುಖ್ಯವಲ್ಲವೆಂದು ನಾನು ಹೇಳುತ್ತಿಲ್ಲ. ಇದು ಜನರಿಂದ ಆರಿಸಿಬಂದಂತಹ ಜನಪ್ರತಿನಿಧಿಯಿಂದ ಕೂಡಿದಂತಹ ಒಂದು ಅಸೆಂಬ್ಲಿಯಾಗಿದೆ. ಇಲ್ಲಿ ಮಾತನಾಡಿದರೆ ಬಹುಶಃ ಇದಕ್ಕೆ ಒಂದು ಅರ್ಥ ಬರುತ್ತದೆ. ಏಕೆಂದರೆ, ಅವರೆಲ್ಲರೂ ಜನರ ಹತ್ತಿರ ಹೋಗಿರುತ್ತಾರೆ. ಊರೂರಿಗೆ ತಿರುಗಿರುತ್ತಾರೆ. ಅನೇಕ ಜನರನ್ನು ಭೇಟಿಯಾಗಿರುತ್ತಾರೆ.

ಅಲ್ಲಿನ ಸಮಸ್ಯೆಗಳನ್ನು ಇಲ್ಲಿಗೆ ಬಂದು ಹೇಳುತ್ತಾರೆ. ಅದಕ್ಕೆ ಸರ್ಕಾರ ಸ್ಪಂದಿಸುತ್ತದೆ ಎನ್ನುವುದು ಆಗಬೇಕು. ಇದಕ್ಕೆ ಸಂಬಂಧಪಟ್ಟವರು ಎಲ್ಲರೂ ಹೊರಗಡೆಯೇ ಹೋಗಿದ್ದಾರೆಂದರೆ, ಒಂದು ಕಡೆ ತಾವು 25 ಬೇಡಿಕೆಗಳನ್ನು ಏತಕ್ಕಾಗಿ ಹಾಕಿದ್ದೀರಿ? ಹಾಕಬೇಡಿ. ಒಂದೇ ಬೇಡಿಕೆಯನ್ನು ಹಾಕಿ . ಒಂದು ಕಡೆ ಎಲ್ಲಾ ಡಿಮ್ಯಾಂಡ್‌ಗಳನ್ನು ಹಾಕುವುದು. ಅದನ್ನು ಹಾಕಿದವರು ಒಬ್ಬರು ಸಹ ಇಲ್ಲಿ ಇರುವುದಿಲ್ಲ. ಇದು ಸರಿಯಲ್ಲ.

ಛೇರ್ಮನ್: ಇಲ್ಲಿ 4-5 ಸಚಿವರು ಇದ್ದಾರೆ, ಅವರೆಲ್ಲರೂ ಬರೆದುಕೊಳ್ಳುತ್ತಿದಾರೆಂದು ಕಾಣಿಸುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಲ್ಲಿ ಯಾರೋ ಒಬ್ಬರು ಬರೆದುಕೊಂಡಿದ್ದಾರೆ.

ಛೇರ್ಮನ್: ಮಾನ್ಯ ಸಚಿವರಾದ ಅಶೋಕ್ ಇದ್ದಾರೆ. ಅಗ್ರಿಕಲ್ಚರ್ ಮಂತ್ರಿಗಳು ಇದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಕೋ-ಅಪರೇಷನ್ ಇಲಾಖೆಯ ಮಂತ್ರಿಗಳು ಒಬ್ಬರು ಅನಿಮಲ್ ಹಸ್‌ಬೆಂಡರಿ ಇಲಾಖೆಯ ಸಚಿವರು, ಒಬ್ಬರು ದೇವರಿಗೆ ಸಂಬಂಧಪಟ್ಟಂತಹವರು ಇದ್ದಾರೆ. ಇನ್ನೊಬ್ಬರು ದಿಂಡರಿಗೆ ಸಂಬಂಧಪಟ್ಟವರು ಇದ್ದಾರೆ. ಮತ್ಯಾರು ಇದ್ದಾರೆ?

ಛೇರ್ಮನ್: ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರೇ ತಾವು ಮುಂದುವರಿಸಿ.

ಶ್ರೀ ಆರ್. ಅಶೋಕ್: ಮಾನ್ಯ ಶ್ರೀನಿವಾಸ್ ಪ್ರಸಾದ್‌ರವರೆ, ತಾವು ಮಾತನಾಡುವುದನ್ನು ನಾನು ನೋಟ್ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ಬಜೆಟ್ ಬಗ್ಗೆ ಚರ್ಚೆ ಮಾಡುವಾಗ serious ಆಗಿ ನೋಡುವಂತಹದು ನಿಮ್ಮಲ್ಲಿ ಕಾಣಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರು ಮಾತನಾಡುವುದು ಏಕೆಂದರೆ, ಅವರ ಗಮನಕ್ಕೆ ತರುವುದಕ್ಕೆ ತಾನೇ?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ಬಜೆಟ್ ಮೇಲೆ ಸೀರಿಯಸ್ ಡಿಸ್‌ಕಷನ್ ನಡೆಯಬೇಕಾದರೆ ಬೇರೆ ಮೀಟಿಂಗ್‌ಅನ್ನು ಸ್ವಲ್ಪ ಮುಂದೆ ಹಾಕುವುದಕ್ಕೆ ಆಗುವುದಿಲ್ಲವೇ?

ಛೇರ್ಮನ್: ಮಾನ್ಯ ಸಚಿವರೆ , ಅವರುಗಳನ್ನು ಇಲ್ಲಗೆ ಕರೆಸಿ.

ಶ್ರೀ ಆರ್ . ಅಶೋಕ್ : ವಿಧಾನಪರಿಷತ್ತಿನಲ್ಲಿ question hour ಇದೆ. ಅದಕ್ಕಾಗಿ ಅಲ್ಲಿಗೆ ಹೋಗಿದ್ದಾರೆ.

ಶ್ರೀ ಛೇರ್ಮನ್: ಸಂಬಂಧಪಟ್ಟಂತಹ ಸಚಿವರುಗಳನ್ನು atleast ಇಲ್ಲಿಗೆ ಕರೆಸಿ. ಮಾನ್ಯ ಪ್ರಸಾದ್‌ರವರೆ, ಅವರುಗಳು ಬರುತ್ತಾರೆ. ತಾವು ಕಂಟಿನ್ಯೂ ಮಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಛೇರ್ಮನ್‌ರವರೆ, ಇಲ್ಲಿ ಅಧಿಕಾರಿಗಳಾದರೂ ಇರಬೇಕಲ್ಲವೇ? ಇವತ್ತು ಎಲ್ಲಾ ಇಲಾಖೆಗಳ ಬೇಡಿಕೆಗಳನ್ನು ಮಂಡಿಸಿದ್ದೀರಿ. ಅಧೀಕಾರಿಗಳು ಏನು ಮಾಡುತ್ತಿದ್ದಾರೆ? what is their duty? ಇಲ್ಲ MLA ಗಳು ಸಲಹೆಗಳನ್ನು ಕೊಡುತ್ತಾರೆ. ಟೀಕೆಗಳನ್ನು ಮಾಡುತ್ತಾರೆ. ಅವುಗಳನ್ನು ಸರಿಪಡಿಸಬೇಕಲ್ಲವೇ? Heads of the Department, Secretaries to Departments ಸಹ ಇರಬೇಕಲ್ಲವೇ?

ಶ್ರೀ ಛೇರ್ಮನ್: ಚೀಫ್ ವಿಪ್‌ರವರು ಹೋಗಿದ್ದಾರೆ ಅವರುಗಳನ್ನು ಕರೆಸುತ್ತಿದ್ದಾರೆ. ತಾವು ಚರ್ಚೆಯನ್ನು ಮುಂದುವರಿಸಿ.

ಶ್ರೀ ಸಿದ್ದರಾಮಯ್ಯ : ಚರ್ಚೆ ಬೇಡದೆ ಹೋದರೆ ಮತ್ತೆ ಏತಕ್ಕಾಗಿ ಬೇಡಿಕೆಗಳನ್ನು ತಂದಿದ್ದೀರಿ. ಇಲ್ಲಿ ನಾವು ನಮ್ಮ ಅಭಿಪ್ರಾಯಗಳನ್ನು ಹೇಳುತ್ತವೇ. ಅಲ್ಲಿರುವಂತಹ ಹುಳುಕುಗಳನ್ನು ಹೇಳುತ್ತೇವೆ. ಅಲ್ಲಿ ಆಗುವಂತಹ ಅನ್ಯಾಯಗಳನ್ನು ಹೇಳುತ್ತೇವೆ. ಭ್ರಷ್ಟಾಚಾರದ ಬಗ್ಗೆ ಹೇಳುತ್ತೇವೆ. ಅಲ್ಲಿ ಇಂಪ್ರೂವ್‌ಮೆಂಟ್ ಆಗಬೇಕೆಂದು ಸಲಹೆಗಳನ್ನು ಕೊಡುತ್ತೇವೆ. ಅವುಗಳನ್ನು ಬರೆದುಕೊಂಡು implement ಮಾಡುವವರು ಯಾರು? ಮಿನಿಸ್ಟರ್‌ಗಳು ಸಹ ಇಲ್ಲ. ಅಧಿಕಾರಿಗಳು ಸಹ ಇಲ್ಲ. ಇದು ಏನಿದು? ಸರ್ಕಾರಕ್ಕೆ ಏತಕ್ಕಾಗಿ ಬಂದಿದ್ದೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕಾರಣಾಂತರಗಳಿಂದ ಅಬ್‌ಸೆಂಟ್ ಆಗಿದ್ದಾರೆ. ಅದನ್ನು ಅವರು ಒಪ್ಪಿಕೊಳ್ಳುವುದಿಲ್ಲ.

ಶ್ರೀ ಸಿದ್ದರಾಮಯ್ಯ : This is very bad.

ಛೇರ್ಮನ್ : ಅವರುಗಳನ್ನು ಕರೆದುಕೊಂಡು ಬರುವುದಕ್ಕೆ ವಿಪ್ ಹೋಗಿದ್ದಾರೆ.

ಶ್ರೀ ಆರ್. ಅಶೋಕ್ :ಅವರುಗಳನ್ನು ಕರೆಸುತ್ತೇನೆ.

ಶ್ರೀ ಸಿದ್ದರಾಮಯ್ಯ : ಮುಂದುಗಡೆ ಬರೆದುಕೊಳ್ಳುವವರು ನೀವೊಬ್ಬರೇ?

ಛೇರ್ಮನ್ : ತಾವು continue ಮಾಡಿ ಅವರುಗಳು ಬರುತ್ತಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ರವೀಂದ್ರನಾಥ್ ಮತ್ತು ತಾವೊಬ್ಬರೇ ಇಲ್ಲಿ ಇರುವುದು ನೀವಿಬ್ಬರೇ?

ಶ್ರೀ ಆರ್. ಅಶೋಕ್ : ಅವರು ಬಂದು ಉತ್ತರವನ್ನು ಕೊಡುತ್ತಾರೆ.

ಶ್ರೀ ಸಿದ್ದರಾಮಯ್ಯ : ಉತ್ತರವನ್ನು ಎಲ್ಲರೂ ಸಹ ಕೊಡುತ್ತಾರೆ. ಇಲ್ಲಿ ಉತ್ತರವನ್ನು ಎಲ್ಲರೂ ಓದಿಕೊಡುತ್ತಾರೆ. ಮಾನ್ಯ ಸದಸ್ಯರುಗಳು ಇಲ್ಲಿ ಜವಾಬ್ದಾರಿಯಿಂದ ಹೇಳುವುದನ್ನು ನೋಟ್ ಮಾಡಿಕೊಂಡು ಅದನ್ನು ಇಂಪ್ಲಿಮೆಂಟ್ ಮಾಡುವವರು ಯಾರು? This is very bad.

ಛೇರ್ಮನ್ : ತಾವು ಕಂಟಿನ್ಯೂ ಮಾಡಿ.

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ನಾನು ಪ್ರಸ್ತಾಪ ಮಾಡುವಂತಹ ವಿಷಯ ಇದೆಯಲ್ಲಾ ತಮಗೆ ಇಲ್ಲಿ ಏನಾಗಿದೆ. It is such a sensitive issue. ಅದು ಬಹಳ ಸೂಕ್ಷ್ಮವಾದ ವಿಷಯವಾಗಿದೆ. ಶಿಕ್ಷಣ ಮಾಧ್ಯಮ ಹೇಗೆ ಇರಬೇಕು ಎನ್ನುವುದರ ಬಗ್ಗೆ ಅವತ್ತು ಮಾನ್ಯ ಕಾಗೇರಿಯವರು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ ಹೈಕೋರ್ಟ್ ಡಿಸಿಷನ್ ಬಂತು. 14 ವರ್ಷಗಳಿಂದ ಹೈಕೋರ್ಟ್ ಮುಂದೆ ಒಂದು ವಿಷಯವು ಪೆಂಡಿಂಗ್‌ನಲ್ಲಿತ್ತು. ಪ್ರಾಥಮಿಕ ಶಿಕ್ಷಣ ಇದೆಯಲ್ಲಾ. 1 ರಿಂದ 4 ನೇ ತರಗತಿಯವರೆಗೂ ಆಯಾಯ ರಾಜ್ಯ ಭಾಷೆಯಲ್ಲಾಗಬೇಕೆಂದು ಸರ್ವೋಚ್ಚ ನ್ಯಾಯಾಲಯದ ತೀರ್ಪು ಇದೆ. ಆ ಹಿನ್ನೆಲೆಯಲ್ಲಿ ಈಗಾಗಲೇ ಮಹಾರಾಷ್ಟ್ರ ಸರ್ಕಾರಗಳು ಅಲ್ಲಿ ಮರಾಠಿ ಭಾಷೆಯಲ್ಲಿಯೇ, ಸರ್ಕಾರಿ ಶಾಲೆಗಳೇ ಇರಬಹುದು. ಅಥವಾ ಅನುದಾನ, ಅನುದಾನ ರಹಿತ ಶಾಲೆಗಳಲ್ಲಿ ಕಡ್ಡಾಯವಾಗಿ ಆಗಬೇಕು ಎನ್ನುವಂತಹ ಯೋಚನೆ ಅಲ್ಲಿ ನಡೆಯುತ್ತಿದೆ. ಇಲ್ಲಿ ಏನಾಗುತ್ತದೆ? 14 ವರ್ಷಗಳ ಕಾಲ ಇಲ್ಲಿನ ಹೈಕೋರ್ಟ್‌ನಲ್ಲಿ ಪೆಂಡಿಂಗ್ ಇದ್ದಂತಹದ್ದು. ಮೊನ್ನೆ ಮೊನ್ನೆ ಇದ್ದಂತಹ Chief Justice ಅದರ ಬಗ್ಗೆ ಅವರ ಒಂದು ತೀರ್ಪನ್ನು ಕೊಟ್ಟು ಅವರು ಸುಪ್ರೀಂಕೋರ್ಟ್ ಜಡ್ಜ್ ಆಗಿ ಹೊರಟು ಹೋಗಿದ್ದಾರೆ. ಬಹುಶಃ ಅದರ ಬಗ್ಗೆ ನಾವು ಮೇಲ್ಮನವಿ ಮಾಡಬೇಕೆ, ಬೇಡವೇ? ಏನು ಮಾಡುತ್ತಿದೆ ಸರ್ಕಾರ? ಸದನದಲ್ಲಿ ಈ ಬಗ್ಗೆ ಚರ್ಚೆ ಯಾಗುವುದು ಬೇಡವೇ? ಇದು ಬಹಳ ಮುಖ್ಯವಾದಂತಹ ವಿಷಯವಾಗಿದೆ. ಇಲ್ಲಿ ರೆಸಲ್ಯೂಷನ್ ಆಗಬೇಕು. ಇಲ್ಲಿ ಅದರ ಬಗ್ಗೆ ದೀರ್ಘವಾದ ಚರ್ಚೆಯಾಗಬೇಕು. ಬಹುಶಃ ಅ ಬಗ್ಗೆ ಎಷ್ಟು ಯೋಚನೆ ಮಾಡುತ್ತಿದ್ದೀರಿ? ಇದು ಬಹಳ ಸೂಕ್ಷ್ಮವಾದಂತಹ ವಿಚಾರವಾಗಿದೆ. ಒಂದು ಸಾರಿ ಕನ್ನಡ ಮಾಧ್ಯದಲ್ಲಿ ಶಾಲೆಗಳನ್ನು ನಡೆಸುತ್ತೇವೆಂದು, ಹೇಳಿ ಇಂಗ್ಲೀಷ್ ಮಾಧ್ಯಮಕ್ಕೆ ಶಾಲೆಗಳನ್ನು ಬದಲಾವಣೆ ಮಾಡಿಕೊಂಡಿರುವುದು. ಈ ಬಗ್ಗೆ ಹೈಕೋರ್ಟ್ ಡಿಸಿಷನ್ ಏನಿದೆ, ಅವುಗಳೆಲ್ಲವನ್ನು ಇಂಗ್ಲೀಷ್ ಮಾಧ್ಯಮದಲ್ಲಿ ನಡೆಸಲೆಂದು ರೆಗ್ಯುಲರೈಸ್ ಮಾಡಬೇಕು, ಎಂದಾಗ ಸದ್ಯಕ್ಕೆ ಈಗಿನ ಹೈಕೋರ್ಟ್ ನ್ಯಾಯಾಧೀಶರೊಬ್ಬರು "ಈ ವರ್ಷ ಅದು ಬೇಡ, ಮುಂದಿನ

ವರ್ಷ ನೋಡೋಣ, ಅನುದಾನರಹಿತ ಶಾಲೆಗಳಲ್ಲೂ ಕೂಡ ಈ ಸಾರಿ ಕಡ್ಡಾಯ ಅನ್ನುವುದು ಬೇಡ" ಎಂದು ಮುಂದೆ ಹಾಕಿರುವುದನ್ನು ನಾವು ಕಾಣುತ್ತೇವೆ. ಇಂತಹ ವಿಚಾರವನ್ನು ನಾವು ತೆಗೆದುಕೊಳ್ಳಬೇಕು, ಸರ್ಕಾರ ಇದನ್ನು ಗಮನದಲ್ಲಿ ತೆಗೆದುಕೊಳ್ಳಬೇಕು. ಇಲ್ಲಿ ನಾವು ಆ ಬಗ್ಗೆ ಚರ್ಚೆಯನ್ನು ಮಾಡಬೇಕಾಗಿದೆ. ಕೇಂದ್ರ ಸರ್ಕಾರವೂ ಕೂಡ ಭಾಷಾ ವಿಷಯದಲ್ಲಿ ಬಹಳ ಹುಷಾರಾಗಿರಬೇಕು. ಏಕೆಂದರೆ ಕಾಂಗ್ರೆಸಿಗರು ಭಾಷಾ ವಿಷಯದಲ್ಲಿ ರೈತರ ವಿಷಯದಲ್ಲಿ, ಸರ್ಕಾರವನ್ನು ಕಳೆದುಕೊಂಡಿದ್ದೇವೆ. ಗೋಕಾಕ್ ವರದಿ ಬಂದಂತಹ ಹಿನ್ನೆಲೆಯಲ್ಲಿ ಏನು ಚಳುವಳಿ ನಡೆದಿದೆ ಎಂದು ಗೊತ್ತಿದೆ. ನಿಮಗೆ ಈ ಬಗ್ಗೆ ತಾತ್ಸಾರ ಬೇಡ. ಭಾಷಾ ವಿಷಯದಲ್ಲಿ ಒಂದು legal battle ನಡೆಯಬೇಕು, Political battle ನಡೆಯಬೇಕಾಗಿದೆ. ಕೇಂದ್ರ ಸರ್ಕಾರವು ಕೂಡ ಇದರ ಬಗ್ಗೆ ಗಮನ ಕೊಡಬೇಕು. ಈ ಬಗ್ಗೆ ರಾಜಕೀಯ, ಹಾಗೂ ಕಾನೂನು ಹೋರಾಟಗಳು ಸಹ ಆಗಬೇಕಾಗಿದೆ. ಈ ಬಗ್ಗೆ ತಾವು ಏನು ಯೋಚನೆಯನ್ನು ಮಾಡಿದ್ದೀರಿ? ಒಂದು ದಿನವೂ ತಾವು ಸರಿಯಾದಂತಹ ರೀತಿಯಲ್ಲಿ ಅಲೋಚನೆಯನ್ನು ಮಾಡಲಿಲ್ಲ. ಬರೀ ನೀವು ನಮ್ಮಿಂದ ಗೆದ್ದ ಶಾಸಕರನ್ನು ಎಳೆದುಕೊಂಡು ಅವರನ್ನು ಮಂತ್ರಿ ಮಾಡುವುದರಲ್ಲಿಯೇ ತಲ್ಲಿನರಾಗಿದ್ದೀರಿ. ಇದು ಒಳ್ಳೆಯದೇ? ಇದು .ನಿಮಗೆ ತಾತ್ಕಾಲಿಕವಾಗಿ ಒಳ್ಳೆಯದೆಂದು ಕಾಣಬಹುದು. ಸರ್ಕಾರ ಕಳೆದ 40–45 ದಿನಗಳಿಂದ ಏನು ಮಾಡುತ್ತಿದೆ? ಇಂತಹ ವಿಷಯಗಳ ಬಗ್ಗೆ ಆಲೋಚನೆಯನ್ನು ಸಹ ಮಾಡುತ್ತಿಲ್ಲ. ನಿಮ್ಮ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಎಲ್ಲಿ? ಇದರ ಬಗ್ಗೆ ನೀವು ಯೋಚನೆಯನ್ನು ಮಾಡಬಾರದೇ? ಅದರಿಂದಾಗಿಯೇ ನಾನು ಹೇಳುತ್ತಿರುವುದು, ಈ ಬಗ್ಗೆ ಟೈಮ್ ಗಡುವು ಕೊಟ್ಟಿರುವುದರಿಂದ ಬಹಳ ವೇಗವಾಗಿ ಹೋಗಬೇಕಾಗಿದೆ. ಸರ್ವೋಚ್ಚ ನ್ಯಾಯಲಯಕ್ಕೆ ನಾವು ಮೇಲ್ಮನವಿಯನ್ನು ಸಲ್ಲಿಸಬೇಕಾಗಿದೆ. ಈ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕಾಗಿದೆ. ಕಾನೂನು ತಜ್ಞರ ಜೊತೆಯಲ್ಲಿ ಮಾತನಾಡಬೇಕಾಗಿದೆ. ಸುಪ್ರೀಂಕೋರ್ಟಿನಲ್ಲಿ ನಾವು ಹೋರಾಟವನ್ನು ನಡೆಸಬೇಕೆನ್ನುವ ರೀತಿಯಲ್ಲಿ ನಾವು ಮಾತನಾಡಬೇಕಾಗಿದೆ. ಮುಖ್ಯಮಂತ್ರಿ ಚಂದ್ರುರವರನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ಮಾಡಿದರೆ ಸಾಲಲಿಲ್ಲ. ಇದರ ಬಗ್ಗೆ ತಾವು ಯೋಚನೆ ಮಾಡಬೇಕಾಗಿದೆ. ಆ ಬಗ್ಗೆ ಇಲ್ಲಿ ಯಾರಿಗೂ ಆಸಕ್ತಿ ಇದ್ದಂತೆ ಕಾಣಲಿಲ್ಲ. ಸ್ಲಮ್ ಬಗ್ಗೆ ಬಜೆಟ್‌ನಲ್ಲಿ ಬಹಳ ಪ್ರಸ್ತಾಪ ಮಾಡಿದ್ದೀರಿ. ಕೊಳಗೇರಿಯ ಬಗ್ಗೆ ಚೂರುಪಾರು ಕೊಟ್ಟು ಅವರ ಪುನರ್‌ವಸತಿಯ ಬಗ್ಗೆ ಮಾತನಾಡಿದ್ದೀರಿ ಬರೀ ಅವರಿಗೆ ಸೌಲಭ್ಯವನ್ನು ಕೊಡುವುದು ಅಷ್ಟೇ ಅಲ್ಲ. ಅವರ ಬಗ್ಗೆ ಏನು ಯೋಚನೆ ಮಾಡಿದ್ದೀರಿ? ಕೊಳಗೇರಿಯಲ್ಲಿ

ಬಹಳ ನಿಕೃಷ್ಟವಾಗಿ ಜೀವನವನ್ನು ನಡೆಸುವಂತಹವರು ಇದ್ದಾರೆ. ಅವರ ಸಾಮಾಜಿಕ ಹಿನ್ನೆಲೆಯನ್ನು ನೋಡಿದಾಗ ಬಹಳ ಶೋಚನೀಯವಾದ ಸ್ಥಿತಿಯಲ್ಲಿ ಇರತಕ್ಕಂತಹವರು ಅವರು. ಈ ದೇಶದಲ್ಲಿ ಸೂರ್ಯಚಂದ್ರ ಇರುವವರೆಗೂ ಕೊಳಗೇರಿ ಇರಬೇಕೇನು? ಅದನ್ನು ತೆಗೆಯುವುದು ಬೇಡವೇ? ಅದಕ್ಕೊಂದು time bound programme ಬೇಡವೇ? ನೀವು ಸ್ಲಮ್ಸ್ ಬಗ್ಗೆ ಸೀರಿಯಸ್ಸಾಗಿ ಯೋಚನೆಯನ್ನು ಮಾಡಬೇಕು. ನಿಮ್ಮ ಸರ್ಕಾರ 5 ವರ್ಷಗಳ ಕಾಲ ಇರುತ್ತದೆ. ನಾವು 5 ವರ್ಷಗಳಲ್ಲಿ no new more slums ಹೊಸ ಕೊಳಗೇರಿಗಳು ಬರಬಾರದೆಂದು ಒಂದು ಆರ್ಡಿನೆನ್ಸ್ ತೆಗೆದುಕೊಂಡು ಬನ್ನಿ. ಅದಕ್ಕೆ ಜವಾಬ್ದಾರರನ್ನಾಗಿ ಮಾಡಿ. ಒಂದು ಕೊಳಗೇರಿ ಇದ್ದರೆ ಮತ್ತೊಂದು ಹೊಸದಾಗಿ ಬರಬಾರದೆಂದು ಕಾನೂನು ಮಾಡಬೇಕು. 4-5 ವರ್ಷದಲ್ಲಿ ಅವರಿಗೆ ಎಲ್ಲಾ ಪುನರ್ ವಸತಿಯನ್ನು ಕಲ್ಪಿಸಿ ಎಲ್ಲಾ ಸೌಲಭ್ಯಗಳನ್ನು ಕೊಡುತ್ತೇವೆಂದು ಹೇಳಿ ಆ ರೀತಿಯಾದಂತಹ ಒಂದು ರಾಜಕೀಯ ಇಚ್ಛಾಶಕ್ತಿ ನಿಮಗೆ ಬೇಕು. ಏನು ಮೈಸೂರಿನಲ್ಲಿ ಮಾನ್ಯ ಯಡಿಯೂರಪ್ಪನವರು, ಶೋಭಾ ಕರಂದ್ಲಾಜೆಯವರು ಭಾಷಣ ಮಾಡುತ್ತಾರೆ. ಎರಡು ವರ್ಷಗಳಲ್ಲಿ ಕ್ರಾಂತಿಯನ್ನು ಮಾಡುತ್ತೇವೆಂದು 20 ವರ್ಷ ನಾವು ಆಡಳಿತದಲ್ಲಿ ಗಟ್ಟಿಯಾಗಿ ಕುಳಿತುಕೊಳ್ಳುತ್ತೇವೆಂದು ನಿಮ್ಮ ಕ್ರಾಂತಿ ಅಂದರೆ ಬೇರೆ ಪಕ್ಷದವರನ್ನು 40-45 ದಿನದೊಳಗೆ ಎಳೆದುಕೊಂಡು ಬಂದು ರಾಜೀನಾಮೆಯನ್ನು ಕೊಡಿಸಿ ಅವರುಗಳನ್ನು ಮಂತ್ರಿಗಳನ್ನಾಗಿ ಮಾಡಿದ್ದೀರಿ. ನಿಮ್ಮಲ್ಲೂ ಕೂಡ ಹತಾಶರಾಗಿ ಸಾಯುತ್ತಿದ್ದಾರೆ, ಒಳಗಡೆ ಅವರುಗಳ ನೋವುಗಳನ್ನು ತಡೆಯುವುದಕ್ಕೆ ಆಗುವುದಿಲ್ಲ. 2 ವರ್ಷದಲ್ಲಿ ಕ್ರಾಂತಿ, ಈ ಕ್ರಾಂತಿಗಳನ್ನೇ ತಾವು ಮಾಡುತ್ತಿರುವುದು. ನಿಮ್ಮ ತರಹ ಕ್ರಾಂತಿಯನ್ನು ಯಾರೂ ಮಾಡಲಿಲ್ಲ, ಅದು ನಮಗೆ ಗೊತ್ತಿದೆ. ನೀವು ಬಡವರ ಬಗ್ಗೆ ಸ್ಲಮ್‌ನವರ ಬಗ್ಗೆ ಎಷ್ಟು ಯೋಚನೆ ಮಾಡುತ್ತಿದ್ದೀರಿ? ಅವರ ಬದುಕು ಎಂತಹ ಶೋಚನೀಯವಾಗಿದೆ. ಆ ಬಗ್ಗೆ ತಾವು ಯೋಚನೆ ಮಾಡಬೇಕಾಗಿದೆ. ಹೊಸ ಸ್ಲಮ್‌ಗಳು ಬೇಡವೆಂದು ಒಂದು ಆರ್ಡಿನೆನ್ಸ್‌ಅನ್ನು ತೆಗೆದುಕೊಂಡು ಬನ್ನಿ. ಇದನ್ನು ಮಧ್ಯರಾತ್ರಿಯಲ್ಲಿ ಸುಗ್ರಿವಾಜ್ಞೆಯನ್ನು ತಂದು ಮಾಡಿ. ಬಹುಶಃ ಅದಕ್ಕೆ ಯಾರ‍್ಯಾರು ಕಾರಣಕರ್ತರು, ಒಂದು ಗುಡಿಸಲು ಬರಬಾರದು. ಇನ್ನು 4 ವರ್ಷಗಳಲ್ಲಿ ಅವರಿಗೆ ಪೂರ್ಣ ಸೌಲಭ್ಯಗಳನ್ನು ಪುನರ್ ವಸತಿಗಳನ್ನು ಕೊಡುತ್ತೇವೆಂದು ಹೇಳಿ ಆ ರೀತಿಯಾದಂತಹ ಒಂದು ಮನೋಸ್ಥೈರ್ಯ ನಿಮಗೆ ಬೇಕು. ತಾವು ಅವರ ಬಗ್ಗೆ ಯೋಚನೆಯನ್ನು ಮಾಡಬಾರದೇ? ನಾನು ಬಹಳ ದಿನಗಳಿಂದ ಯೋಚನೆಯನ್ನು ಮಾಢುತ್ತಿದ್ದೇನೆ. ನಿಮ್ಮ ಬಜೆಟ್‌ನಲ್ಲಿದೆ ನಿಜ. Scheduled cast it is a list of castes

ಅದು ಒಂದು ಜಾತಿಯಲ್ಲ, 101 ಜಾತಿಗಳು ಇವೆ. ಜಾತಿಗಳ ಪಟ್ಟಿ ಅದನ್ನು Schedule caste ಅಥವಾ Schedule tribe ಎನ್ನತಕ್ಕಂತಹದ್ದು, ನಿಜ ಅದರಲ್ಲಿ ನೀವು ಬಂಜಾರರಿಗೂ ಕೊಟ್ಟಿದ್ದೀರಿ, ನಾನು ಬೇಡವೆಂದು ಹೇಳುವುದಿಲ್ಲ. ಕರಾವಳಿ ಪ್ರದೇಶದಲ್ಲಿರುವಂತಹ ಕೊರವರ ಸ್ಥಿತಿಗತಿ ಏನು? ಆಧುನಿಕ ಸಮಾಜದಲ್ಲಿ ನಾವು ಇಲ್ಲಿ ಕುಳಿತಿರುವಂತಹ ಜನ ಹೆಮ್ಮೆ ಪಟ್ಟುಕೊಳ್ಳುತ್ತೇವೆ. 21ನೇ ಶತಮಾನದಲ್ಲಿ ನಾಗರೀಕತೆ ನಾಗಲೋಟದಲ್ಲಿ ಹೋಗುತ್ತಿದೆ. ಇವತ್ತು ವೈಜ್ಞಾನಿಕವಾದಂತಹ ಯುಗ. ದಿನೇ ದಿನೇ ಮನುಷ್ಯನ ಸಂಶೋಧನೆಗಳು ನಮ್ಮ ಮುಂದೆ ಬಂದಿವೆ. ನಮಗೆ ಅದ್ಭುತವಾದಂತಹ ಬುದ್ದಿಶಕ್ತಿ ಇದೆ ಎನ್ನುವಂತಹ ಕಾಲದಲ್ಲಿ, ಇವತ್ತು ಆ ಕೊರವರಂತಹವರು ವ್ಯವಸ್ಥೆ ಹೇಗಿದೆ? ಅವರ ಸ್ಥಿತಿಗತಿಗಳೇನು? ಅವರ ಬದುಕು ಹೇಗೆ ಇದೆ? ಬಹುಶಃ ಇದರ ಬಗ್ಗೆ ತಾವು ಯೋಚನೆ ಮಾಡಿದ್ದೀರೋ ಇಲ್ಲವೋ ಏನೋ ಒಂದು ಕಡೆ ಸ್ವಲ್ಪ ಅವರಿಗೆ ಕೊಡಬೇಕು. ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ ನೋಡಿದಂತಹ ಸಂದರ್ಭದಲ್ಲಿ Schedule caste ನಲ್ಲಿ sweeping community, ಪೌರ ಕಾರ್ಮಿಕರು ಯಾರು ಮಾಡುವುದಕ್ಕೆ ಆಗದೇ ಇರುವಂತಹ ಕೆಲಸವನ್ನು ಅವರು ಮಾಡುತ್ತಾರೆ. ಅವರದು ಏನಾಗಿದೆ? ಅವರನ್ನು ತಾವು ಖಾಯಂ ನೌಕರರನ್ನಾಗಿ ಮಾಡಿಲ್ಲ. ಸಣ್ಣ ಗುಡಿಸಲಿನೊಳಗೆ ಬದುಕುತ್ತಾರೆ. 100, 200 ರೂಪಾಯಿಗಳ ಸಂಬಳವನ್ನು ತೆಗೆದುಕೊಂಡು ಅವರಿವರನ್ನು ಕಾಡಿ ಬೇಡಿ, ಅವರಿವರ ಕಾಲು ಹಿಡಿದು ಊಟಕ್ಕೆ ಎರಡು ಹೊತ್ತು ಹೊಟ್ಟೆ ಹೊರೆದುಕೊಳ್ಳತಕ್ಕ ಪರಿಸ್ಥಿತಿ ಇವತ್ತು ಪೌರ ಕಾರ್ಮಿಕರದ್ದಾಗಿದೆ. ಅಶೋಕ್‌ರವರೆ, ತಾವು ಬೆಂಗಳೂರು ನಗರದಲ್ಲಿ ಈ ಸಮಸ್ಯೆಯನ್ನು ನೋಡಿರುವವರು. ಅವರ ಬದುಕು ಯಾವ ರೀತಿ ಇದೆ ಎಂಬುದು ತಮಗೆ ಗೊತ್ತಿದೆ. ಅವರು ಕೂಡ Scheduled Caste. ಆದರೆ, ನಿಜವಾಗಿಯೂ ನೀವು ಮಾಡಬೇಕಾಗಿರುವುದೇನೆಂದರೆ, ಅವರಿಗೆಂದೇ ಪ್ರತ್ಯೇಕ ಪೌರ ಕಾರ್ಮಿಕರ ನಿಗಮವೊಂದನ್ನು ಸ್ಥಾಪಿಸಬೇಕು. ಅವರುಗಳನ್ನು ಖಾಯಂಗೊಳಿಸಬೇಕು. ಅವರೆಲ್ಲರಿಗೂ ನಾಗರೀಕ ಸೌಲಭ್ಯಗಳು ಸಿಗಬೇಕು. ಅವರೆಲ್ಲರ ಮಕ್ಕಳಿಗೂ ಕಡ್ಡಾಯ ಶಿಕ್ಷಣ ಸಿಗಬೇಕು. ಅವರುಗಳಿಗೆ Residential Schools ಮಾಡಬೇಕು. ಇದನ್ನು ನೀವು ಮಾಡಬೇಕಾಗಿರುವುದು. ಪೌರ ಕಾರ್ಮಿಕರ ಬಗ್ಗೆ ಯೋಚನೆ ಮಾಡಿ ಅವರ ಬಗ್ಗೆ ಪ್ರತ್ಯೇಕವಾದ ನಿಗಮವೊಂದನ್ನು ಸ್ಥಾಪಿಸಿ, ಅವರಿಗೆಂದೇ ಬಜೆಟ್‌ನಲ್ಲಿ ಪ್ರತ್ಯೇಕವಾಗಿ ಸಂಪೂರ್ಣ ಹಣ ಮೀಸಲಿಡಬೇಕು. ಗುಡಿಸುವವನ ಮಗ ಬರೀ ಗುಡಿಸಿಕೊಂಡೇ ಹೋಗಬೇಕೆಂದೇನಲ್ಲ. ಆ ಜನರಿಗೂ ಕೂಡ ನಾಗರಿಕತೆ ಬೆಳೆಯತಕ್ಕಂಥ ಸಂದರ್ಭದಲ್ಲಿ ಎಲ್ಲಾ ರೀತಿಯಾದ ಸೌಲಭ್ಯಗಳು,

ಅವಕಾಶಗಳು ಸಿಗುವ ರೀತಿಯಲ್ಲಿ ಪ್ರತ್ಯೇಕ ನಿಗಮವೊಂದನ್ನು ಸ್ಥಾಪಿಸಿ ಅವರ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸಿ ಯೋಚಿಸಬೇಕಾದಂತಹ ಜವಾಬ್ದಾರಿ ನಮ್ಮ ಮೇಲಿದೆ ಎಂಬುದನ್ನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಇದನ್ನು ಮಾಡುವುದಕ್ಕೆ ಬಹಳ ದೊಡ್ಡದೇನೂ ಆಗುವುದಿಲ್ಲ. ಇದರ ಬಗ್ಗೆ ಯೋಚನೆ ಮಾಡಬೇಕು.

ಬಜೆಟ್‌ನ 83 ಪುಟಗಳಲ್ಲಿ 286 ಅಂಶಗಳನ್ನು ತಿಳಿಸಿ, 1 ಕೋಟಿ, 2 ಕೋಟಿಯಂತೆ ನಾನು ಹೇಳಿದ್ದೆಲ್ಲವನ್ನೂ ಕೊಟ್ಟಿದ್ದೀರಿ. ಎಲ್ಲೆಲ್ಲಿ ಓಟು ಬರಬೇಕೋ, ಮತ್ತು ಎಲ್ಲರನ್ನೂ ತೃಪ್ತಿಪಡಿಸತಕ್ಕಂಥ ಪ್ರಯತ್ನ ಮಾಡಿದ್ದೀರಿ. ಸಮಾಜದ ಬಗ್ಗೆ ಆಳವಾಗಿ ಯೋಚಿಸಬೇಕು. ಯಾರ ಬಗ್ಗೆ ನಾವು ಯೋಚನೆ ಮಾಡಬೇಕು, ಯಾರಿಗೆ ಏನು ಮಾಡಬೇಕು, ಏನು ಬೇಕಾಗಿದೆ, ಅವರು ಮನುಷ್ಯರಲ್ಲವೇನು? ಇದರ ಬಗ್ಗೆ ಕೂಡ ನಾವು ಬಹಳ ಯೋಚನೆ ಮಾಡಬೇಕಾಗಿದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದೇನೆ.

ಇನ್ನು ಆರೋಗ್ಯದ ಕುರಿತಂತೆ ಹೇಳುವುದಾದರೆ, ಇವತ್ತು ಮಾನ್ಯ ಹಿರಿಯ ಸದಸ್ಯರಾದ ಸಿದ್ದರಾಮಯ್ಯನವರು ಬಹಳ ಚೆನ್ನಾಗಿ ಮಾತನಾಡಿದರು. ನಾನು ಮತ್ತು ಅವರು ಹಳ್ಳಿಗಳಿಗೆ ಹೋದ ಸಂದರ್ಭದಲ್ಲಿ ಅಲ್ಲಿನ Primary Health Centre ಗಳಲ್ಲಿ ಔಷಧಿಗಳನ್ನು ಕೊಡುತ್ತೀರೋ, ಎಷ್ಟು ಕೊಟ್ಟಿದ್ದೀರೋ, ಅಲ್ಲಿ ಔಷಧಿಗಳೇ ಸಿಗುವುದಿಲ್ಲ. ಅಲ್ಲಿ Residential Doctors ಇರುವುದಿಲ್ಲ. ರೋಗಿಗಳಿಗೆ ತಕ್ಷಣದಲ್ಲಿ ಚಿಕಿತ್ಸೆ ಬೇಕೆಂದರೆ ಸಿಗುವುದಿಲ್ಲ. ನೀವು ಬಂದ ನಂತರ ಈ ಸಮಸ್ಯೆಗಳು ಬಂದಿದೆಯೆಂದಲ್ಲ. ನಾನೇನು ನಿಮ್ಮ ಮೇಲೆ ಆಪಾದನೆ ಮಾಡುತ್ತಿಲ್ಲ. ಆದರೆ, ಇವತ್ತು ಜವಾಬ್ದಾರಿ ಇರುವ ನೀವು ಇದರ ಬಗ್ಗೆ ಯೋಚನೆ ಮಾಡಬೇಕೆಂದು ಹೇಳುತ್ತಿದ್ದೇನೆ.

ಇವತ್ತು ದೊಡ್ಡ ದೊಡ್ಡ ಆಸ್ಪತ್ರೆಗಳಿವೆ. ನಮಗೆ ಆಶ್ಚರ್ಯವಾಗುತ್ತದೆ. ಇಲ್ಲಿ ಬೌರಿಂಗ್, ವಿಕ್ಟೋರಿಯಾ, ವಾಣಿ ವಿಲಾಸ ಮತ್ತು ಮೈಸೂರಿನಲ್ಲಿರುವ ಕೆ.ಆರ್. ಆಸ್ಪತ್ರೆಗಳನ್ನು ನೋಡಿದಂತಹ ಸಂದರ್ಭಗಳಲ್ಲಿ ಯಾವುದೇ ನರ್ಸಿಂಗ್ ಹೋಮ್‌ಗಳಿಗೂ ಕಡಿಮೆ ಇಲ್ಲದಿರುವ ರೀತಿಯಲ್ಲಿ ಈ ಆಸ್ಪತ್ರೆಗಳಿಗೆ ಸರ್ಕಾರ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದೆ. ತಾವೂ ಕೂಡ ಡಾಕ್ಟರ್ ಆಗಿದ್ದೀರಿ. ಡಾಕ್ಟರ್ ಅಂದರೆ, ತಾವು ಮೆಡಿಕಲ್ ಡಾಕ್ಟರ್ ಅಲ್ಲದೇ ಇದ್ದರೂ ಇವತ್ತು ತಮಗೆ ಸಂಬಂಧಿಸಿದಂತೆ ಮೆಡಿಕಲ್ ಕಾಲೇಜು, ಆಸ್ಪತ್ರೆ ಇದೆ, ನಿಮಗಿಂತಲೂ ಹೆಚ್ಚಿನ ರೀತಿಯಲ್ಲಿ ಸೌಲಭ್ಯಗಳನ್ನು ನಾವು ಸರ್ಕಾರಿ ಆಸ್ಪತ್ರೆಗಳಿಗೆ ಒದಗಿಸಿಕೊಟ್ಟಿದ್ದೇವೆ. ಅಲ್ಲಿ ಸಿಟಿ ಸ್ಕ್ಯಾನಿಂಗ್ ಕೊಡುತ್ತೇವೆ ಅಲ್ಲಿ ಎಕ್ಸರೇ ಯುನಿಟ್ಸ್ ಇರುತ್ತದೆ, ಅಲ್ಲಿ ಏನು ಇರುವುದಿಲ್ಲ? ಬೇಕಾದ ಡ್ರಗ್ಸ್ ಕೊಟ್ಟಿರುತ್ತೀರಿ.

ಸಿದ್ದರಾಮಯ್ಯನವರೆ, ಇಲ್ಲಿ ಏನಾಗಿದೆ ಎಂದರೆ, ಇವೆಲ್ಲವೂ ಸಿಗುತ್ತಿಲ್ಲ. ಎಲ್ಲಿಯಾದರೂ ಒಂದು O.T. ಚೆನ್ನಾಗಿ ಕೆಲಸ ಮಾಡುತ್ತಿದೆಯೇ? ಬಡವ ಯಾವುದಾದರೂ ಸರ್ಕಾರಿ ಆಸ್ಪತ್ರೆಗೆ ಹೋದರೆ ಆತನಿಗೆ ಉಚಿತವಾಗಿ ಎಕ್ಸರೇ ಸೌಲಭ್ಯ ಸಿಗುತ್ತಿದೆಯೇ? ಅಲ್ಲಿ ಸ್ಕ್ಯಾನಿಂಗ್ ಇದೆಯೇ? ಅಲ್ಲಿ ಇರುವುದಾದರೂ ಏನು? ಏಕೆ ಸಿಗುತ್ತಿಲ? ಇದಕ್ಕೆ ನನ್ನ ಸಜೆಶನ್ ಏನೆಂದರೆ, ಒಂದು ಎಕ್ಸ್‌ಪೆರಿಮೆಂಟ್ ಮಾಡಬಹುದು. ಏಕೆ ಇವುಗಳ ಮೇಂಟನೆನ್ಸ್ ಅನ್ನು ಚಾರಿಟಬಲ್ ಟ್ರಸ್ಟ್‌ಗೆ ವಹಿಸಿಕೊಡಬಾರದು? ನಿಮ್ಮದೇ ರಿಕ್ರೂಟ್‌ಮೆಂಟ್ ಇರಲಿ, ಡಾಕ್ಟರ್ಸ್, "ಡಿ" ಗ್ರೂಪ್ ಎಂಪ್ಲಾಯಿಸ್, ತೊಳೆಯುವುದೂ, ಪ್ರತಿಯೊಂದೂ ಎಲ್ಲವೂ ನಿಮ್ಮದೇ ಆಗಿರಲಿ, ಆದರೆ, ಮೇಂಟನೆನ್ಸ್‌ಗೆ ಮಾತ್ರ ಚಾರಿಟಬಲ್ ಟ್ರಸ್ಟ್‌ಗೆ ಒಂದು ವರ್ಷಕ್ಕೆ ಒಂದು ಆಸ್ಪತ್ರೆಯನ್ನು ವಹಿಸಿಕೊಟ್ಟು ನೋಡಿ. ಒಂದು ರೂಪಾಯಿಯ ಔಷಧಿಯೂ ವೇಸ್ಟ್ ಆಗುವುದಿಲ್ಲ. ನಿಮ್ಮ O.T. ಗಳು ಏಕಿರುತ್ತದೆ? ನಿಮ್ಮ ಎಕ್ಸರೇ ಯುನಿಟ್‌ಗಳು, ನಿಮ್ಮ ಸ್ಕ್ಯಾನಿಂಗ್‌ಗಳೆಲ್ಲವೂ ಹೇಗಾಗುತ್ತದೆ? ಅಶೋಕ್, ತಾವು ಹಿಂದೆ ಆರೋಗ್ಯ ಸಚಿವರಾಗಿರಲಿಲ್ಲವೇ ನಾವು ಎಷ್ಟು ಕೋಟಿ ರೂಪಾಯಿಗಳನ್ನು ಆಸ್ಪತ್ರೆಗಳಿಗೆ ಕೊಡುತ್ತಿದ್ದೇವೆ? ಅದರ ಪ್ರಂಯೋಜನ ಸಿಗುತ್ತಿದೆಂಯೇ? ಮತ್ತೆ ನಾವ್ಯಾಕೆ ಪ್ರಯತ್ನ ಮಾಡಬಾರದು? You give it to Charitable Trust on experiment basis. ಹೇಳಿ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಆರ್. ಅಶೋಕ್ : ಹಿಂದೆ ನಾನು ಆರೋಗ್ಯ ಮಂತ್ರಿಯಾಗಿದ್ದಾಗ ಈ ತರಹದ ಪ್ರಯೋಗ ಮಾಡಬೇಕೆಂತಲೇ Evening Clinic ಎಂದು ಪ್ರಾರಂಭಿಸಿದ್ದು. ಕೂಲಿಗೆ ಹೋಗುವ ಜನರು ಬೆಳಗ್ಗೆ ಎಂಟು ಗಂಟೆಗೆ ಹೊರಟರೆ ಸಂಜೆ ಐದು ಇಲ್ಲವೇ ಆರು ಗಂಟೆಗೆ ಬರುತ್ತಾರೆ. ಅವರು ಬರುವಷ್ಟರ ಹೊತ್ತಿಗೆ ಆಸ್ಪತ್ರೆಗಳು ಮುಚ್ಚಿರುತ್ತವೆ. ಅದಕ್ಕೋಸ್ಕರ, Evening Clinic ಎನ್ನುವ ಪದ್ಧತಿಯನ್ನು ಜಾರಿಗೆ ತಂದೆವು. ನಮ್ಮ ಡಾಕ್ಟರ್ ಇದ್ದರೆ ಅವರಿಗೆ 300 ರೂ. ನರ್ಸ್ ಇದ್ದರೆ 100 ರೂ. ಕೊಡಬೇಕು. ಇವರಿಬ್ಬರೂ ಇಲ್ಲದಿದ್ದರೆ ಖಾಸಗಿಯಾಗಿ ಡಾಕ್ಟರ್ ತೆಗೆದುಕೊಂಡು ನಮ್ಮ ಸರ್ಕಾರಿ ಆಸ್ಪತ್ರೆಗಳನ್ನು ನಡೆಸಬೇಕೆಂಬ ಪದ್ಧತಿಯನ್ನು ಜಾರಿಗೆ ತಂದೆ. ಮತ್ತೆ ನಾನು ಕೆಲವೊಂದು ಯೋಚನೆ ಮಾಡಿದ್ದೆ. ಬೆಂಗಳೂರಿನಲ್ಲಿರುವ ದೊಡ್ಡ ದೊಡ್ಡ ಆಸ್ಪತ್ರೆಗಳಲ್ಲಿ ಬೇರೆ ಬೇರೆ ಸಾಮಾಜಿಕ ಕಾರ್ಯಗಳನ್ನು ಮಾಡುವ ಕೆಲವರು ನಮ್ಮ ಆಸ್ಪತ್ರೆಗಳಿಗೆ ಬಂದು ಉಚಿತವಾಗಿ ಕಾರ್ಯ ನಿರ್ವಹಿಸಬೇಕೆಂದು ಆಗ ಯೋಚಿಸಿ ಒಂದು ಸಂವಾದ ಕಾರ್ಯಕ್ರಮ ಏರ್ಪಡಿಸಿದ್ದೆ. ಅದಕ್ಕೆ ನಮ್ಮ ಕಾರ್ಮಿಕರು

ಬಹಳ ವಿರೋಧ ವ್ಯಕ್ತಪಡಿಸಿದರು. ಅವರೆಲ್ಲರೂ ಬಂದರೆ ಪ್ರೈವೇಟೈಜೇಶನ್ ಆಗುತ್ತದೆ ಎನ್ನುವ ಒಂದು ಗುಮಾನಿಯನ್ನು ಆ ಸಂದರ್ಭದಲ್ಲಿ ತಂದರು. ಇವತ್ತೂ ಸಹ ನಾನು ನೋಡುತ್ತಿದ್ದೇನೆ. ವಿದೇಶದಿಂದ ಒಂದೊಂದು ಟೀಮ್ ಮಾಡಿಕೊಂಡು ಇಂಡಿಯಾದಲ್ಲಿ ವಿಶೇಷವಾಗಿ ಕರ್ನಾಟಕದಲ್ಲಿ ಕೆಲವು ಏರಿಯಾಗಳನ್ನು ಸೆಲೆಕ್ಟ್ ಮಾಡಿಕೊಂಡು ವಿಶಿಷ್ಟವಾದ ಕಾಯಿಲೆಗಳಿಗೆ 1-2 ತಿಂಗಳು ಬಂದು ಸರ್ವಿಸ್ ಮಾಡತಕ್ಕಂಥಾದ್ದು, ಹೋಗತಕ್ಕಂಥಾದ್ದು ಇದೆ. ತಾವು ಬಹಳ ಉತ್ತಮವಾದ ಸಲಹೆಯನ್ನು ಕೊಟ್ಟಿದ್ದೀರಿ. ಆರೋಗ್ಯ ಸಚಿವರು ಬಂದ ನಂತರ ಈ ಸಲಹೆಯನ್ನು ಅವರ ಗಮನಕ್ಕೆ ತರುತ್ತೇನೆ.

ಶ್ರೀ ವಿ. ಶ್ರೀನಿವಾಸ ಪ್ರಸಾದ್ : ನಾನು ಹೇಳಿದ್ದು, ತಾವು ಪ್ರೈವೇಟೈಜೇಶನ್ ಎಂದರೆ, employments, recruitments, ಅಲ್ಲ. ತಾವು ಹೇಳಿದ್ದು ಕರೆಕ್ಟ್, ನಾವು ಅವರಿಗೆ ಮನದಟ್ಟು ಮಾಡಿಕೊಡಬೇಕು. ಜನರಿಗೆ ಸೌಲಭ್ಯ ದೊರಕಲಿ ಎಂಬ ದೃಷ್ಟಿಯಿಂದ ನಿಷ್ಠೆಯಿಂದ, ಶ್ರದ್ಧೆಯಿಂದ, ಸಮಾಜದ ಬಗ್ಗೆ ಕಾಳಜಿ ಇರತಕ್ಕಂತವರು ಮಾಡಲಿ, ಆಗ ನಿಮಗೆ ಗೊತ್ತಾಗುತ್ತದೆ. ಸ್ವಲ್ಪ ಹಣವಿರುವ ಯಾರೂ ಕೂಡ ಸರ್ಕಾರಿ ಆಸ್ಪತ್ರೆಗೆ ಹೋಗುವುದಿಲ್ಲ. ಆತ ಪ್ರೈವೇಟ್ ನರ್ಸಿಂಗ್ ಹೋಮ್‌ಗೆ ಹೋಗುತ್ತಾನೆ. ಯಾರು ಬಹಳ ಅಸಹಾಯಕನಾಗಿರುತ್ತಾನೋ, ಹಣ ಕೊಡುವುದಕ್ಕಾಗುವುದಿಲ್ಲವೋ, ಅಂತಹವರು ಅಲ್ಲಿಗೆ ಹೋಗುತ್ತಾರೆ. ಅವರುಗಳಿಗೆ ಸೌಲಭ್ಯಗಳು ಸಿಗಬೇಕು. ಇದು ಸರ್ಕಾರದ ಜವಾಬ್ದಾರಿ. ನಮ್ಮ-ನಿಮ್ಮನ್ನು ನೋಡಿಕೊಳ್ಳಲಿ ಅಂತಲ್ಲ. ನಮಗೆ-ನಿಮಗೆ 30X40 ಅಳತೆಯ ಸೈಟ್ ಕೊಡದಿದ್ದರೂ ಆಗುತ್ತದೆ. ನಮಗೆ ಗೊತ್ತು. How to get a Site? ಸೈಟುಗಳನ್ನು ಹೇಗೆ ತೆಗೆದುಕೊಳ್ಳಬೇಕು? ನಮ್ಮ ಮಕ್ಕಳಿಗೆ ಹೇಗೆ ಎಜುಕೇಷನ್ ಕೊಡಬೇಕೆಂಬುದು ಗೊತ್ತು. ಮತ್ತು ನಮ್ಮ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕೆಂಬುದೂ ಗೊತ್ತಿದೆ.

ಸರ್ಕಾರ ನಮ್ಮ ಬಗ್ಗೆ ಚಿಂತನೆ ಮಾಡುವುದಲ್ಲ. ಅಸಹಾಯಕರು ಯಾರು ಇರುತ್ತಾರೆ, ಯಾರಿಗೆ ಈ ಸೌಲಭ್ಯಗಳೆಲ್ಲವನ್ನೂ ಪಡೆದುಕೊಳ್ಳುವ ಶಕ್ತಿ ಇಲ್ಲವೋ, ಅವರ ಬಗ್ಗೆ ಚಿಂತನೆ ಮಾಡಬೇಕು. ಮನೆ ಸೌಲಭ್ಯ ಪಡೆದುಕೊಳ್ಳಲು ಸಾಧ್ಯವಿಲ್ಲದಿರುವವರಿಗೆ ಮನೆಗಳನ್ನು ಕೊಡಬೇಕು, ನಿವೇಶನಗಳನ್ನು ಒದಗಿಸಿಕೊಡಬೇಕು, ಅವರ ಮಕ್ಕಳಿಗೆ ಶಿಕ್ಷಣ ಕೊಡಬೇಕು, ಅವರ ಆರೋಗ್ಯದ ಬಗ್ಗೆ ಯೋಚನೆ ಮಾಡಬೇಕು. ಇದು ಸರ್ಕಾರದ ಕರ್ತವ್ಯ ಸರ್ಕಾರಿ ಆಸ್ಪತ್ರೆಗಳಿಗೆ ಕೋಟ್ಯಂತರ ರೂಪಾಯಿಗಳನ್ನು ಕೊಡುತ್ತಿದ್ದೇವಲ್ಲ, ಇದರ ಪ್ರಯೋಜನವಾಗುತ್ತಿಲ್ಲ ಎಂಬ ವಿಷಯವನ್ನು ನಾನು ಹೇಳಿದೆ. ಪ್ರೈವೇಟೈಜೇಶನ್ ಅನ್ನು ನಾವ್ಯಾರೂ ಒಪ್ಪತಕ್ಕಂಥಾದ್ದಲ್ಲ. ಅದನ್ನು ಬಿಟ್ಟುಬಿಡುವುದೇ ಲೇಸು. ನಾನು ಹೇಳುವುದೇನೆಂದರೆ,

ಮೇಂಟನೆನ್ಸ್‌ಗೆ ಕೊಡಿ. ಕನಿಷ್ಠ ಅಲ್ಲಿರುವ ಕೋಟ್ಯಂತರ ರೂಪಾಯಿಗಳಷ್ಟು ಡ್ರಗ್ಸ್, ಇನ್ನಿತರ ಏನೇನು ಸೌಲಭ್ಯಗಳಿವೆಯೋ, ಅವೆಲ್ಲವೂ ಬಡವರಿಗೆ ಶ್ರೀಸಾಮಾನ್ಯರಿಗೆ ಸಿಗಬೇಕೆಂಬ ದೃಷ್ಟಿಯಿಂದ ಈ ಮಾತನ್ನು ತಮಗೆ ಹೇಳುತ್ತಿದ್ದೇನೆ. ತಾವು ಆರೋಗ್ಯ ಸಚಿವರಾಗಿದ್ದಿರಲ್ಲ, ಆ ದೃಷ್ಟಿಯಿಂದ ನಾನು ಮಾತನಾಡಿದೆ.

ಇನ್ನು resource mobilisation ಗೆ ಏನೇನು ಮಾಡಬೇಕೋ ಆ ಪ್ರಯತ್ನಗಳು ಆಗಲಿಲ್ಲ. ಆದರೆ excise ನಲ್ಲಿ ಒಂದಂತೂ ಮಾಡಿದ್ದೀರಿ. 1,000 CL-2 ಕೊಟ್ಟಿದ್ದೀರಿ, 500 ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ಕೊಟ್ಟಿದ್ದೀರಿ. ಸಾರಾಯಿ ನಿಲ್ಲಿಸಿದ ಮೇಲೆ ಹಣ ಹೇಗೆ ಬರುತ್ತದೆಂದು ನೀವು ರುಚಿ ನೋಡಿಬಿಟ್ಟಿದ್ದೀರಿ. ಸಾರಾಯಿ ಇದ್ದಾಗ ಗಂಡ ತನ್ನ ದುಡ್ಡಿನಲ್ಲಿ ಮಾತ್ರ ಕುಡಿಯುತ್ತಿದ್ದ. ಆದರೆ, ಸಾರಾಯಿ ನಿಲ್ಲಿಸಿ, ವಿಸ್ಕಿ ಬಂದ ನಂತರ ಹೆಂಡತಿ ದುಡ್ಡನ್ನೂ ಸೇರಿಸಿ ತೆಗೆದುಕೊಂಡು ಹೋಗಿ ಕುಡಿಯುವ ಸ್ಥಿತಿ ಬಂದುಬಿಟ್ಟಿದೆ! ಅವನ ದುಡ್ಡು ಸಾಲುವುದಿಲ್ಲವಲ್ಲ, ಹೆಂಡತಿ ದುಡ್ಡನ್ನೂ ಕಿತ್ತುಕೊಂಡು ಹೋಗುತಾನೆ. ಆ ಪರಿಸ್ಥಿತಿ ಇಂತಹ ಇವತ್ತು ಹಳ್ಳಿಗಳಲ್ಲಿ ಬಂದು ಇದರ ಹಾವಳಿ ಜಾಸ್ತಿಯಾಗಿದೆ.

ಮೊನ್ನೆ ನಾನು ಮತ್ತು ಸಿದ್ದರಾಮಯ್ಯನವರು ಕೆಡಿಪಿ ಮೀಟಿಂಗ್ ಮಾಡಿದಾಗ Excise Department ನ ಅಧಿಕಾರಿಗಳನ್ನು ಉದ್ದೇಶಿಸಿ, ನೀವು ಏನು ಮಾಡಿದ್ದೀರಿ? ಹಳ್ಳಿಗಳಲ್ಲಿ ಈ ರೀತಿ ಕುಡಿಯುವುದು ಇನ್ನೂ ಜಾಸ್ತಿಯಾಗುತ್ತಿದೆಯಲ್ಲ? ಇದಕ್ಕೆ ನೀವೇನು ಪ್ರಯತ್ನ ಮಾಡುತ್ತಿದ್ದೀರಿ? ಎಲ್ಲಿ ಭಯ ಇದೆ? ಏನು ರೈಡ್ ಮಾಡುತ್ತಿದ್ದೀರಿ? ಯಾರಿಗೆ ಶಿಕ್ಷೆಯಾಗುತ್ತಿದೆ? ಎಂದರೆ, ಬಹುಶಃ ಇದಕ್ಕೆ ಉತ್ತರ ಏನೂ ಇಲ್ಲ. ಬದಲಾಗಿ ಇವತ್ತು ಏನಾಗುತ್ತಿದೆ ಎಂದರೆ, ಯಡಿಯೂರಪ್ಪನವರು ಅನೌನ್ಸ್ ಮಾಡಿದಾಗ ಅವರ ಧಾಟಿ ಏನು, ಮಹಿಳೆಯರ ಹೋರಾಟ, ಮಠಾಧಿಪತಿಗಳು ಯಾರು ಸಮಾಜ ಸುಧಾರಣೆಯಾಗಬೇಕು, ಸಾರಾಯಿ ನಿಲ್ಲಬೇಕೆಂದು ಒಕ್ಕೊರಲಿನಿಂದ ಅವರು ಕೊಟ್ಟ ಸಲಹೆಗಳೆಲ್ಲವನ್ನೂ ತೆಗೆದುಕೊಂಡ ಯಡಿಯೂರಪ್ಪನವರು ಅಷ್ಟೊಂದು Jubiliant ಆಗಿಬಿಟ್ಟರು. "ನೋಡಿ, ಇವತ್ತು ಸಾರಾಯಿ ನಿಲ್ಲಿಸುತ್ತೇನೆ. ಇದಕ್ಕೋಸ್ಕರ, ಇವತ್ತು ಮಹಿಳೆಯವರು ಖುಷಿ ಪಡುತ್ತಾರೆ, ಅವರಿಗೆ ಇದು ಏನು ಶಾಪವಾಗಿ ಪರಿಣಮಿಸಿತ್ತೋ, ಸಾರಾಯಿ ನಿಷೇಧದಿಂದ ಅವರುಗಳು ಗಂಡಂದಿರಿಗೆ ಮುಕ್ತಿ ಕೊಡುತ್ತೇನೆ" ಎಂದು ಹೇಳಿದರು. ಏನು ಮಾಡಿದಿರಿ? ಇನ್ನೂ ಜಾಸ್ತಿ ಮಾಡಿದಿರಿ? ಅವರುಗಳು ಶಾಪ ವಿಮುಕ್ತಯಾಯಿತೇನು? ಅವರನ್ನು ಮತ್ತಷ್ಟು ಶಾಪಗ್ರಸ್ತರನ್ನಾಗಿಸಿಬಿಟ್ಟರಿ!

ನೀವು 1,000 CL-2 ಕೊಟ್ಟು resource mobilisation ಮಾಡುವುದಕ್ಕೆ ನೋಡಿಕೊಂಡಿದ್ದೀರಿ, ಇವತ್ತು ಸಾರಾಯಿಯಿಂದ ಇಷ್ಟು ಹಣ ಬರುತ್ತಿತ್ತು. ಆದಾದ ಮೇಲೆ ಎಷ್ಟು ಕುಡಿಯುತ್ತಿದ್ದೀರಿ, ಸರ್ಕಾರಕ್ಕೆ ಎಷ್ಟು ಆದಾಯ ಬರುತ್ತಿದೆ, ಬಹುಶಃ ನೀವು ಇದನ್ನು ಇನ್‌ಕ್ರೀಸ್ ಮಾಡುವುದಕ್ಕೆ ಹೋಗುತ್ತಿದ್ದೀರಿ. ಇದೇನಿದು? ನಿಮ್ಮ ಪ್ರಗತಿಪರವಾದಂಥ ಅಥವಾ ಸಮಜಕ್ಕೆ ಉಪಯೋಗಿವಾಗತಕ್ಕಂತ ಕೆಲಸಗಳೇ? ನನಗಂತೂ excise ಬಗ್ಗೆ ತಾವು ಯಾವ ರೀತಿಯಲ್ಲಿ ಯೋಚನೆ ಮಾಡಿದ್ದೀರೋ, ಬಹುಶಃ ನನಗನಿಸುತ್ತದೆ: ನೀವು ಸಾವಿರ ಸಂಖ್ಯೆಯಲ್ಲಿ CL-2 ಕೊಡಬೇಡಿ ಮತ್ತು 500 ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ನೀವು ಕೊಡಬೇಕಾದ ಪ್ರಮೇಯ ಇಲ್ಲ. ಇರತಕ್ಕಂಥಾದ್ದನ್ನೇ ಸರಿಯಾಗಿ ನೋಡಿ. ಅದು ಹಳ್ಳಿಗಳಿಗೆ ಹೋಗಬಾರದು. ನಗರ–ಪಟ್ಟಣಗಳಿಗೆ ಎಲ್ಲೆಲ್ಲಿ CL-2 ಗಳನ್ನು ಕೊಟ್ಟಿದ್ದೀರೋ, ಅಲ್ಲಿಯೇ ಇರಲಿ. ಹಳ್ಳಿಗಳಲ್ಲಿ ಸಿಗುತ್ತದೆಂದರೆ, ಅಲ್ಲಿ ಕುಡಿಯುವುದರಿಂದ ಇವತ್ತು ಸಮಾಜ ಹಾಳಾಗುತ್ತದೆ. ಅಲ್ಲಿರುವ ವಾತಾವರಣ ಕೂಡ ಹಾಳಾಗುತ್ತಿದೆ, ಮನೆಗಳೂ ಕೂಡ ಹಾಳಾಗುತ್ತಿರುವುದಕ್ಕೆ ನೀವು ಹೆಚ್ಚಿಗೆ ಪ್ರೋತ್ಸಾಹ ಕೊಡಬಾರದೆಂದು ಇವತ್ತು ತಮಗೆ ತಿಳಿಸುತ್ತಿದ್ದೇನೆ.ಇವತ್ತು ಬಿಪಿಎಲ್ ಕಾರ್ಡ್ ಕೊಡುವುದು, ಇದನ್ನು ಬಹಳ ಮುಖ್ಯವಾಗಿ ಮೊದಲೇ ತೆಗೆದುಕೊಳ್ಳಬೇಕಾಗಿತ್ತು. ಚುನಾವಣೆಯಲ್ಲಿ ತಾವು ಬಿಪಿಎಲ್ ಕಾರ್ಡನ್ನು ಬಹಳಷ್ಟು ಪ್ರಸ್ತಾಪಿಸಿದಿರಿ. ನಮ್ಮೆಲ್ಲರಿಗೂ ಕೂಡ ಇದು ಇರತಕ್ಕಂಥಾದ್ದು, ಇವತ್ತು ಬಿಪಿಎಲ್ ಏನು ಕೊಟ್ಟಿದ್ದೇವೆ, ತೃಪ್ತಿಯಿಲ್ಲ. ನಮ್ಮ ನಮ್ಮ ಕ್ಷೇತ್ರಗಳಲ್ಲಿ ದೊಡ್ಡ ಗೊಂದಲವುಂಟಾಗಿದೆ. ಕ್ಷೇತ್ರದ ಒಳಗಡೆ ನಾವು ಓಡಾಡುವುದಕ್ಕಾಗುತ್ತಿಲ್ಲ. ನಾವು ಸುಮಾರು 25 ವರ್ಷಗಳ ಕಾಲ ಸಂಸತ್ ಸದಸ್ಯನಾಗಿ ಕ್ಷೇತ್ರದ ಒಳಗಡೆ ಹೋಗುವುದಕ್ಕಾಗಲಿಲ್ಲ. ನಾನು ಮೊದಲನೇ ಸಲ ಶಾಸಕನಾಗಿ ಕ್ಷೇತ್ರದೊಳಗೆ ಹೋದಾಗ ನನಗೆ ಇದರ ಅನುಭವವಾಗುತ್ತಿದೆ. ಸಂಸತ್ ಸದಸ್ಯನಾಗಿದ್ದಾಗ flying visit ಮಾಡಿ ಎಲ್ಲೆಲ್ಲಿ ಬೇಕೋ ನೋಡುತ್ತಿದ್ದೆ. ಆದರೆ, ಇವತ್ತು ಒಬ್ಬ ಶಾಸಕನಾಗಿ ನಾನು ಹೋದಾಗ ಅವರ landable demand ಏನಿದೆ, ಅವರುಗಳ ಒತ್ತಾಯ ಏನು ಎಂಬುದು ಗೊತ್ತಾಗುತ್ತಿದೆ. ಬಿಪಿಎಲ್‌ವರಿಗೆ ಎಪಿಎಲ್ ಕಾರ್ಡುಗಳನ್ನು ಕೊಟ್ಟಿದ್ದೇವೆ. ಏನು ಯೋಚನೆ ಮಾಡಿದ್ದೀರಿ? ಬಿಪಿಎಲ್ ಕಾರ್ಡುಗಳನ್ನು ಹೆಚ್ಚು ಮಾಡಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಕಾರ್ಡುಗಳನ್ನು ಹೆಚ್ಚು ಮಾಡಿ ಇಂತಿಂಥ ಕ್ಷೇತ್ರಗಳಿಗೆ, ತಾಲ್ಲೂಕುಗಳಿಗೆ ಇಷ್ಟಿಷ್ಟು ಹೆಚ್ಚಾಗಬೇಕೆಂದು ಮಾಡುವ ಅಗತ್ಯವಿದೆ. ಅದನ್ನು ಸರಿಯಾಗಿ, ಸಮರ್ಪಕವಾಗಿ, ಅನ್ಯಾಯವಾಗದ ರೀತಿಯಲ್ಲಿ ಇವತ್ತು ಬಿಪಿಎಲ್‌ನವರಿಗೆ ಎಪಿಎಲ್ ಕಾರ್ಡು ಏನು ಸಿಕ್ಕಿದೆ, ಬಹುಶಃ ಅವರುಗಳಿಗೆ ಸಿಗತಕ್ಕಂತ ರೀತಿಯಲ್ಲಿ ಪ್ರಯತ್ನ ಮಾಡಬೇಕು.

ನಾನು Food Minister ಆಗಿದ್ದ ಸಮಯದಲ್ಲಿ ನಾವು food quota ಅನ್ನು enhance ಮಾಡಿದೆವು. ಪ್ರತಿ ಕುಟುಂಬಕ್ಕೂ ಇಷ್ಟು ಇರಲಿಲ್ಲ. ನಾನು Food Minister ಆಗಿದ್ದಾಗ all time record production ಆಗಿತ್ತು. ಉತ್ಪಾದನೆ ತುಂಬಾ ಹೆಚ್ಚಾಗಿ ಅದನ್ನು ಇಟ್ಟುಕೊಳ್ಳಲು ಗೋದಮುಗಳಲ್ಲಿ ಜಾಗ ಸಾಕಾಗದೆ ನಾವು ಈ ರೀತಿ ಬಿಪಿಎಲ್ ಕಾರ್ಡು ಅಥವಾ ಬೇರೆ ಬೇರೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸುಮಾರು 19 ಕೆ.ಜಿ ಅಕ್ಕಿ 6 ಕೆ.ಜಿ ಗೋಧಿ ಕೊಡುವ ಕಾರ್ಯಕ್ರಮವನ್ನು ಜಾರಿಗೆ ತಂದೆವು. ಈಗ ಕಷ್ಟ ಇದೆ. ಇವತ್ತು 2 ರೂ. ಗೆ ಕೆ.ಜಿ. ಅಕ್ಕಿ ಕೊಡುತ್ತೇವೆಂದು ಹೇಳಿದಿರಿ. ಅದು ಅಷ್ಟು ಸುಲಭವಲ್ಲ. ಕೇಂದ್ರ ಸರ್ಕಾರದವರು ನೀವು ಕೇಳಿದಷ್ಟನ್ನು ಕೊಡುವುದಿಲ್ಲ. 2 ರೂ. ಗೆ ಕೆ.ಜಿ ಅಕ್ಕಿ ಕೊಡುತ್ತೇವೆಂದಾಗ ಅದರ ಜವಾಬ್ದಾರಿ, ಹೊಣೆಗಾರಿಕೆಯನ್ನು ಯೋಚನೆ ಮಾಡಬೇಕಿತ್ತು. ನಾವು ಇದ್ದಾಗ ಪ್ಲಾನಿಂಗ್ ಕಮಿಷನ್ ಮುಖಾಂತರ ಪ್ರೊ: ಲಖಡವಾಲ ಕಮಿಟಿ ಅಪಾಯಿಂಟ್ ಮಾಡಿ ಅಲ್ಲಿಂದ ನಿಮಗೆ ಇಷ್ಟೇ ಬಿಪಿಎಲ್ ಕಾರ್ಡುಗಳನ್ನು ಕೊಡುತ್ತೇವೆಂದು ನಿರ್ದಿಷ್ಟಪಡಿಸುತ್ತೇವೆ.

ಇದರ ಮೇಲೆ ನೀವು ಬೇರೆ ಬೇರೆ ರೀತಿಯಾದ ಕ್ರೈಟೇರಿಯ ಬಳಸಿ ಕೊಟ್ಟರೆ ಅದರ burden ನಿಮಗೆ ಜಾಸ್ತಿಯಾಗುತ್ತದೆ. open market ನಲ್ಲಿ ನಿಮಗೆ ಎರಡು ರೂಪಾಯಿಗೆ ಒಂದು ಕೆ.ಜಿ ಅಕ್ಕಿ ಕೊಡುತ್ತಾರೆಯೇ? ಚುನಾವಣೆಯಲ್ಲಿ ಕೊಡುತ್ತೇವೆಂದು ಹೇಳಿದಿರಿ. ಚುನಾವಣೆಯಲ್ಲಿ ಹೇಳಿದ್ದು ಬಜೆಟ್‌ನಲ್ಲಿ ಸ್ವರ್ಗ ಕ್ರಿಯೇಟ್ ಮಾಡಿಬಿಡಬಹುದು, ಆದರೆ implementation ಮಾಡುವುದಕ್ಕೆ ಎಲ್ಲಿಂದ ಹಣ ತರುತ್ತೀರಿ? Implementation ಮಾಡುವುದಕ್ಕೆ ಕ್ಯಾಬಿನೆಟ್ ಇದೆ, ಕ್ಯಾಬಿನೆಟ್ ದುರ್ಬಲ ಎಂದು ನಾನು ಹೇಳುವುದಿಲ್ಲ. ಬಹಳ ಕಷ್ಟ ಇದೆ. ನಿಮ್ಮ ಈಗಿನ ರಾಜಕೀಯ ಬೆಳವಣಿಗೆಗಳನ್ನು ನೋಡಿದರೆ, yes ನೀವು captain of the team ಯಡಿಯೂರಪ್ಪನವರು ಆದರೆ ಅವರಿಗೆ ಸಹಕಾರ ಕೊಡತಕಕಂಥದ್ದು ನಿಮ ಬಜೆಟ್‌ಅನ್ನು implement ಮಾಡತಕ್ಕಂತದ್ದು ಅಷ್ಟು ಸುಲಭ ಅಲ್ಲ. ಮುಂದೆ ನಿಮಗೆ ಗೊತ್ತಾಗುತ್ತದೆ. ಈ ಸಮಯದಲ್ಲಿ ಎರಡು ರೂಪಾಯಿಗೆ ಒಂದು ಕೆ.ಜಿ ಅಕ್ಕಿಯನ್ನು ಏಕೆ ಕೊಡುವುದಕ್ಕಾಗುತ್ತಿಲ್ಲ ಎನ್ನುವುದನ್ನು ನೀವು ಯೋಚನೆ ಮಾಡಬೇಕು. ಕೊಡಿ ನೋಡೋಣ. ಒಂದು ಕಡೆ BPL ಕಾರ್ಡ್‌ನವರಿಗೆ ಕೊಡಬೇಕು. ಒಂದು ಕಡೆ ಎರಡು ರೂಪಾಯಿಗೆ ಒಂದು ಕೆ.ಜಿ ಅಕ್ಕಿಯನ್ನು ಅವರಿಗೆ ಕೊಡಬೇಕಾಗಿದೆ. ನಿಮ್ಮ ಬಜೆಟ್‌ನಲ್ಲಿ ಅಷ್ಟು ಹಣ ಎಲ್ಲಿದೆ? ಇರತಕ್ಕಂಥದ್ದಕ್ಕೆ ಕೊಡುವುದಕ್ಕಾಗುತ್ತಿಲ್ಲ. ಚುನಾವಣೆಯಲ್ಲಿ ತಾವು ಹೇಳಿದ್ದನ್ನು ಜನ ನಮ್ಮನ್ನು ಕೇಳುತ್ತಾರೆ. ಅಧಿಕಾರಕ್ಕೆ ಬರುವುದಕ್ಕಿಂತ ಮೊದಲು

ಎರಡು ರೂಪಾಯಿಗೆ ಒಂದು ಕೆ.ಜಿ ಅಕ್ಕಿ ಕೊಡುತ್ತೇವೆಂದು ಹೇಳಿದರು ಎಲ್ಲಿ ಅಕ್ಕಿ ಕೊಡುತ್ತಿಲ್ಲವೆಂದು ಕೇಳುತ್ತಿದ್ದಾರೆ. ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ ನೀವು ನಿಮ್ಮ ಅಸಹಾಯಕತೆಯನ್ನು ತೋರಿಸಬೇಕಾಗುತ್ತದೆ. ಅಂತ್ಯೋದಯದ ಬಗ್ಗೆ ನಾನು ಹೇಳಕ್ಕಂಥದ್ದು ನೀವು ಅದನ್ನು ಬಹಳ ವೇಗವಾಗಿ ಮಾಡುತ್ತಿದ್ದೀರಿ. ಅಂತ್ಯೋದಯ ಕಾರ್ಡ್‌ಗಳನ್ನು ಕೊಡುವುದು ಮುಖ್ಯವಾಗಿ Tribal colony ಗಳಲ್ಲಿ primitive tribes ಎಲ್ಲೆಲ್ಲಿದ್ದಾರೆ ಅವರಿಗೆ ನೀವು ಕೊಡಬೇಕು. ಪ್ರತಿಯೊಬ್ಬ ಟ್ರೈಬಲ್ ಕೂಡ ಯಾರು primitive tribes ಇದ್ದಾರೆ ಅಂತಹ ಪ್ರತಿಯೊಂದು ಕುಟುಂಬದವರು ಅಂತ್ಯೋದಯ ಕಾರ್ಡ್ ಇಲ್ಲವೆಂದು ಹೇಳಬಾರದು. ಆಗ ಅಂತ್ಯೋದಯ ಕಾರ್ಡ್‌ಗಳನ್ನು ಕೊಟ್ಟಿದ್ದಕ್ಕೂ ಸಾರ್ಥಕವಾಗುತ್ತದೆ. ಅಂತ್ಯೋದಯ ಕಾರ್ಡ್‌ಗಳ ಬಗ್ಗೆ ಕೂಡ ತಾವು ಯೋಚನೆ ಮಾಡಬೇಕೆಂದು ಹೇಳಿ, ನಮಗೆ ಸದಾ ಮನಸ್ಸಿನಲ್ಲಿ ನೋವಾಗತಕ್ಕಂಥದ್ದು ಬರ. ಬರ ಬಂದಂತಹ ಸಂದರ್ಭದಲ್ಲಿ ಇಲ್ಲಿ ಕೂತಿರುವವರೆಲ್ಲರೂ ನಮ್ಮ ಕ್ಷೇತ್ರಗಳಿಗೆ ಹೋದಾಗ ತತ್ತರಿಸಿ ಹೋಗಿ ಬಿಡುತ್ತೇವೆ. ನಮ್ಮಗಳ ಕಡೆಗಿಂತಲೂ ಉತ್ತರ ಕರ್ನಾಟಕದ ಕಡೆ 30 ರಿಂದ 40 ಎಕರೆ ಜಮೀನು ಇರುವವರೂ ಗುಳೇ ಹೋಗಿ ಬಿಡುತ್ತಾರೆ. ಅವರಿಗೆ ಜೀವನ ಮಾಡುವುದಕ್ಕಾಗುವುದಿಲ್ಲ. ಗೋವಾಕ್ಕೋ ಮಂಗಳೂರಿಗೋ ಸಿಕ್ಕ ಸಿಕ್ಕ ಕಡೆ ಕೂಲಿ ಕೆಲಸ ಮಾಡುವುದಕ್ಕೆ ಹೋಗುತ್ತಾರೆ. ಯಾವುದೇ ಸರ್ಕಾರ ಜೀವಂತವಾಗಿದೆ ಎಂದರೆ, ನೀವು ಅದನ್ನು ಸವಾಲಾಗಿ ಸ್ವೀಕಾರ ಮಾಡಬೇಕೆಂದಿದ್ದರೆ war footing ನಲ್ಲಿ face ಮಾಡುವುದಕ್ಕೆ ತಯಾರಾಗಿ. ಮಳೆ ವಿಫಲತೆಯಿಂದ ಒಬ್ಬರೂ ಗುಳೇ ಹೋಗದ ಹಾಗೆ ಸಮರೋಪಾದಿಯಲ್ಲಿ ನೀವು ಎದುರಿಸಬೇಕು. ಕೇಂದ್ರದ ಕಾರ್ಯಕ್ರಮ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಇದೆ. 94 ರಿಂದ 124 ರೂ. ಕೇರಳದಲ್ಲಿ ಕೋಡುತ್ತಿದ್ದಾರೆ. ಆ ರೀತಿ ಮಾಡಿ. ಪ್ರತಿಯೊಬ್ಬರಿಗೂ ಕಡ್ಡಾಯವಾಗಿ ಕೊಡಿ. ಪ್ರಾಣಿಗಳಿಗೆ ಮೇವು ಮತ್ತು ನೀರು ಕೊಡಬೇಕು. ದುಡಿಯತಕ್ಕಂತಹ ಕೈಗಳಿಗೆ ಕೆಲಸ ಕೊಡಬೇಕು. ಇವತ್ತಿನ ಬಜೆಟ್‌ನಲ್ಲಿ ಅದರ ಬಗ್ಗೆ ಪ್ರಸ್ತಾಪವಿಲ್ಲ. ಪರಿಸ್ಥಿತಿ ಆ ರೀತಿ ಬಂದಿದೆ. ಅದರ ಬಗ್ಗೆ ನೀವು ಯೋಚನೆ ಮಾಡಬೇಕು. ಬಂದಿರತಕ್ಕಂತಹ ಕ್ಷಾಮವನ್ನು ಎದುರಿಸತಕ್ಕಂತಹ ರೀತಿಯಲ್ಲಿ ನಿಜವಾಗಿಯೂ ನೀವು ಅದನ್ನು ಸವಾಲಾಗಿ ಸ್ವೀಕಾರ ಮಾಡಿ, ಪ್ರತಿಯೊಂದು ಊರಿನಲ್ಲಿ ಮತ್ತು ಪ್ರತಿಯೊಂದು ತಾಲ್ಲೂಕಿನಲ್ಲಿ ಕೂಡ ನಾವು ಮಾಡೋಣ. ನಾವು ಚುನಾಯಿತ ಪ್ರತಿನಿಧಿಗಳು ಮೊದಲು ಅದನ್ನು ಸತ್ಯ ಮಾಡೋಣ. ನಾವು ಯಾವ ಬರಕ್ಕೋಸ್ಕರ ಹಣ ಬಿಡುಗಡೆ ಮಾಡುತ್ತೇವೆ, ಅದರ 10 ಪೈಸೆ ನನ್ನ ಪಾಲಿಗೆ ಬರಬಾರದು, ದುರುಪಯೋಗ ಆಗದ ಹಾಗೆ ನೋಡಿಕೊಳ್ಳುತ್ತೇನೆಂದು ಇದನ್ನು

ನಾನು ಪ್ರಾಮಾಣಿಕವಾಗಿ ಅನುಸರಿಸುತ್ತೇನೆಂದು ಮಾಡಿ. ಆ ಮೇಲೆ ಸಂಬಂಧಪಟ್ಟ ಅಧಿಕಾರಿಗಳು ಕೂಡ ಹೇಳಿದ್ದು ಮಾಡುತ್ತಾರೆ. ಅದರಲ್ಲಿ ಕೂಡ ಲೂಟಿ ಹೊಡೆಯುತ್ತಾರೆ. ಬರ ಮತ್ತು ಕಾಮಗಾರಿಗಳಲ್ಲಿ ನಡೆಯುತ್ತಿರತಕ್ಕಂತಹ ಭ್ರಷ್ಟಾಚಾರ ನೋಡಿದರೆ, ನಾವೆಲ್ಲರೂ ತಲೆ ತಗ್ಗಿಸುವಂತಾಗಿದೆ. ಇದರ ಬಗ್ಗೆ ನೀವು ಯೋಚನೆ ಮಾಡಿ. ಇದನ್ನು ತಾವು ಸಪಾಲಾಗಿ ಸ್ವೀಕಾರ ಮಾಡಿ ಬರ ಪೀಡಿತ ಪ್ರದೇಶಗಳಲ್ಲಿ ತಾವು ರೈತರ ಜೊತೆಯಲ್ಲಿ ನಿಲ್ಲಬೇಕೆಂದು ನಾನು ಈ ಸಂದರ್ಭದಲ್ಲಿ ತಮಗೆ ಸಲಹೆಯನ್ನು ಕೊಡುವುದಕ್ಕೆ ಇಚ್ಛೆ ಪಡುತ್ತೇನೆ. ಜೊತೆಗೆ ಇವತ್ತು ಸಾಲ ಮನ್ನಾ, ಸಾಲ ಮನ್ನಾ ಮಾಡಬೇಕು ಎಂದು ಮಾಡುತ್ತಿದ್ದೀರಿ. ಕೇಂದ್ರ ಸರ್ಕಾರವೂ ಮುಂದೆ ಬಂದು 60,000 ಕೋಟಿ ರೂಪಾಯಿಗಳನ್ನು ರೈತರಿಗೆ ಸಾಲ ಮನ್ನಾ ಮಾಡಬೇಕೆಂದು ಮುಂದೆ ಮಾಡಿದೆ. ರಾಜ್ಯ ಸರ್ಕಾರ ಕೂಡ ಅದರ ಬಗ್ಗೆ ಯೋಚನೆ ಮಾಡಿದೆ. ಒಂದು ಹೆಜ್ಜೆ ಮುಂದೆ ಹೋಗಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಇರುವವರಿಗೆ ಕೂಡ ಅಂದರೆ weavers ಗೆ ಮತ್ತು Fishermen ಗೆ ಎಲ್ಲರಿಗೂ ಕೂಡ ಸಾಲ ಮನ್ನಾ ಮಾಡತಕ್ಕಂತಹ ರೀತಿಯಲ್ಲಿ ನೀವು ಹೋಗುತ್ತಿದ್ದೀರಿ. ಅದೇ ರೀತಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಬಗ್ಗೆಯೂ ಯೋಚನೆ ಮಾಡಿ. ಅವರೂ ಕೂಡ Scheduled Caste and Scheduled Tribe Corporation । ನಿಂದ ತೆಗೆದುಕೊಂಡ ಸಾಲಗಳನ್ನು ಮರುಪಾವತಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಇದನ್ನೂ ಕೂಡ ನೀವು ಯೋಚನೆ ಮಾಡಬೇಕು. ಅವರೂ ಕೂಡ ಕೇಳುತ್ತಾರೆ. ನಾವು ಬಡವರಲ್ಲವಾ? ನಮಗೂ ಸಾಲ ಕಟ್ಟುವುದಕ್ಕಾಗುತ್ತಿಲ್ಲವೆಂದು ಹೇಳುತ್ತಿದ್ದಾರೆ. ಯಾವ ಯಾವ ರೀತಿ ಅವರ ಸಾಲಗಳನ್ನು ಮನ್ನಾ ಮಾಡಬಹುದು ಎಂದು ಯೋಚನೆ ಮಾಡಿ ನಾನು ಔದಾರ್ಯದ ಉರುಳಾಗಿ ಎಂದು ಹೇಳುವುದಿಲ್ಲ. ಸಾಧ್ಯವಾದಷ್ಟು ಅವರಿಗೆ ಎಲ್ಲೆಲ್ಲಿ ಸಹಾಯ ಮಾಡಬಹುದು, ಯಾವ ರೀತಿ ಸಾಧ್ಯತೆ ಇದೆ ಎಂದು ಕೂಡ ಯೋಚನೆ ಮಾಡಬೇಕು. ವಿಶೇಷವಾಗಿ ನಿನ್ನೆ ಕರೆಂಟ್ ವಿಷಯ ಬಂದಾಗ ಹೇಳಿದಿರಿ. ಭಾಗ್ಯಜ್ಯೋತಿ ವಿಷಯ ಬಂದಾಗ ಮಾನ್ಯ ಸಿದ್ದರಾಮಯ್ಯನವರು ಪ್ರಶ್ನೆ ಮಾಡಿದಾಗ ಮಾನ್ಯ ಈಶ್ವರಪ್ಪನವರು ಐದು-ಆರು ವರ್ಷದ ಬಿಲ್ ಕಳುಹಿಸಿ ಅದನ್ನು ಮನ್ನಾ ಮಾಡುತ್ತೇವೆಂದು ಹೇಳಿದಿರಿ. ಆಶ್ರಯ ಮನೆಗಳಲ್ಲಿರುವವರು ಯಾರೂ ಶ್ರೀಮಂತರಿರುವುದಿಲ್ಲ. ಇಂದಿರಾ ಆವಾಸ್, ಮತ್ತು ಅಂಬೇಡ್ಕರ್ ಮನೆಗಳಿಗೆ ಪೂರ್ಣ ಸಬ್ಸಿಡಿ ಕೊಡುತ್ತೀರಿ. ಆದರೆ ಆಶ್ರಯ ಮನೆಗಳಿಗೆ ಅರ್ಧ ಸಬ್ಸಿಡಿ ಇನ್ನು ಅರ್ಧ ಅವರು ಹಾಕಿಕೊಳ್ಳಬೇಕು. ಅದೂ ಕಟ್ಟುವುದಕ್ಕಾಗಲಿಲ್ಲ. ಅದನ್ನೂ ಕೂಡ ತಾವು ಯೋಚನೆ ಮಾಡಬೇಕು. ಆಶ್ರಯ ಯೋಜನೆಯಲ್ಲಿ ಮನೆ

ತೆಗೆದುಕೊಂಡಿರುವವರಿಗೆ ಹಣ ಕಟ್ಟುವುದಕ್ಕಾಗುತ್ತಿಲ್ಲ ಅವರಿಗೆ ಸಾಲ ನೀಡಿ ಅವರಿಗೆ ಒಂದು ಮನೆ ಎಂದು ಮಾಡಬೇಕೆನ್ನುವ ದೃಷ್ಟಿಯಿಂದ ಅದೂ ಕೂಡ ತಾವು ಇವತ್ತು ಯೋಚನೆ ಮಾಡಬೇಕೆಂದು ನಾನು ತಮಗೆ ಸಲಹೆಗಳನ್ನು ಕೊಡುತ್ತಿದ್ದೇನೆ. SC-ST ಗಳವರಿಗೆ Pre-metric ಮತ್ತು Post-metric scholarship ಮತ್ತು ಊಟ ಕೊಡಬೇಕು. ಇದರ ಜೊತೆಯಲ್ಲಿ ಹಾಸ್ಟೆಲ್‌ಗಳ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಸರಿಯಾದ ಕಟ್ಟಡಗಳಿಲ್ಲ. ಅವರಿಗೆ ವಿದ್ಯಾರ್ಥಿ ನಿಲಯದ ಅವಶ್ಯಕತೆ ಇದೆ. ಈ ಸಮಾಜದ ಬಗ್ಗೆ ಚಿಂತನೆ ಮಾಡಬೇಕು. ಶೈಕ್ಷಣಿಕ ಕ್ಷೇತ್ರದಲ್ಲಿ ಚಿಂತನೆ ಮಾಡಬೇಕಾದುದು ಬಹಳ ಮುಖ್ಯವಾಗಿದೆ. ನಿಮಗೆ ಭೂಪಾಲ್ ಘೋಷಣೆ ಗೊತ್ತಾಗಿರಬೇಕು. ಹಿಂದೆ ಮಾನ್ಯ ದಿಗ್ವಿಜಯಸಿಂಗ್‌ರವರು ಮಧ್ಯಪ್ರದೇಶದ ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಒಂದು ಭೂಪಾಲ್ ಘೋಷಣೆ ಎಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಬಗ್ಗೆ ಒಂದು ಘೋಷಣೆ ಹಾಕಿದರು. ನಾನು globalization ಹಿನ್ನೆಲೆಯಲ್ಲಿ ಹಿಂದೆ ಮಾತನಾಡುವಂತಹ ಸಂದರ್ಭದಲ್ಲಿ ಅನೇಕ ಸಾರಿ ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಜಾಗತೀಕರಣದ ಹಿಂದೆಯೇ ಉದಾರೀಕರಣ ಬಂದಿದೆ. ಅದರ ಹಿಂದೆಯೇ ಖಾಸಗೀಕರಣ ಬಂದಿದೆ. Public Sector ನಲ್ಲಿ ನಡೆಯತಕ್ಕಂತಹ ಉದ್ಯಮಗಳೆಲ್ಲಾ ಇವತ್ತು disinvestment ಮಾಡುತ್ತಿವೆ. ಎಲ್ಲಾ ಕಡೆ ಮೀಸಲಾತಿ ಇದೆ ಹಿಂದೆ Public Sector ನಲ್ಲಿ ಇದ್ದುದು, ಈಗ Foreign Direct Investment ಇದೆಲ್ಲಾ ಬಂದಾಗ ನಾನು Constitution Review Committee ಗೆ ಇದನ್ನೇ ಪ್ರಶ್ನೆ ಮಾಡಿದ್ದೆ. ಇದೆಲ್ಲಾ ಬಂದಾಗ Schedled Caste and Tribe ಏನಿದೆ, They have been deprived from empolyment opportunities ಅವರಿಗೆ ಅವಕಾಶಗಳೇ ಇಲ್ಲ. ಯಾರು ತೆಗೆದುಕೊಳ್ಳುತ್ತಾರೆ. ಹೇಳಿ. Infosys ನವರು ತೆಗೆದುಕೊಳ್ಳುತ್ತಾರೆಯೇ? ನಮಗೆ ಯಾರು ತೆಗೆದುಕೊಳ್ಳುತ್ತಾರೆ ಹೇಳಿ. IT-BT ಗಳಲ್ಲಿ ಅಥವಾ ಖಾಸಗಿ ವಲಯಗಳಲ್ಲಿ ಇದೆಲ್ಲಾ ಆದ ಮೇಲೆ Article 16(4) ನಿಯಮ ಏನಿದೆ? SC/ST ಗೆ reservation ಕೊಡಬೇಕೆಂದು ಏನು ಸಂವಿಧಾನದಲ್ಲಿ 16(4) ನಿಯಮ ಏನಿದೆ ಅದರ ಕೆಲಸ ಏನಿದೆ? It has become totally defective. ಆದ್ದರಿಂದ ಖಾಸಗಿ ವಲಯದಲ್ಲಿಯೂ ನಮಗೆ ಅವಕಾಶಗಳು ಕೊಡಿ. ಅದರ ಹಿನ್ನೆಲೆಯಲ್ಲಿ It is a debatable point ನಮಗೆ ಬಂದಿಲ್ಲ. ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಬೇಕು, ಆಗುವ ಹಂತದಲ್ಲಿದೆ. ಅದನ್ನು ನೋಡೋಣ. ಆದರೆ ನಾನೇನು ಹೇಳುತ್ತೇನೆಂದರೆ, ಇವತ್ತು ನಮಗೆ ಸರ್ಕಾರಿ ಕೆಲಸಗಳು ಸಿಗುತ್ತಿಲ್ಲ. ಬೇರೆ ಬೇರೆ ಕಡೆಗಳಲ್ಲಿಯಾದರೂ ಸರ್ಕಾರ

ಏನು ಯೋಚನೆ ಮಾಡಿದೆ? ನಮ್ಮ ಸರ್ಕಾರದ ಕೈಯಲ್ಲಿ ಇರುವಂತಹ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾವಂತರಿಗೆ ನಿಮ್ಮ ಲೋಕೋಪಯೋಗಿ ಇಲಾಖೆ ಮತ್ತು ನೀರಾವರಿ ಇಲಾಖೆ, class-I ಮತ್ತು class-II contractor ಕೊಡಿ ಎಂದು ಅಲ್ಲ. ಅದರ ಕೆಳಗಡೆ ಇರುವಂತಹವರಿಗೆ ನಮ್ಮ ಯುವಕರಿಗೆ ಉದ್ಯೋಗ ಕೊಡುವಂತಹ ಅವಕಾಶಗಳಿವೆ. ನೀವು ಏಕೆ ಕೊಡುವುದಿಲ್ಲ? ಆದಾಯ ಬರತಕ್ಕಂತಹ ಕಡೆಗಳಲ್ಲಿ ಅವಕಾಶ ಕೊಡುವುದಿಲ್ಲ. ಮಧ್ಯ ಪ್ರದೇಶದಲ್ಲಿ ವಿಧಾನಸಭೆಗೆ ಬೇರೆ ಬೇರೆ material ಗಳನ್ನು ಏನು supply ಮಾಡುತ್ತಾರೆ, ಅದಕ್ಕೆಲ್ಲಾ Scheduled Caste ಹುಡುಗರೂ ಕೂಡ ಅದರಲ್ಲಿ ಪಾಲುದಾರರಾಗುವಂತಹ ಅವಕಾಶವನ್ನು ಅವರು ಕೊಟ್ಟರು. ಇದು ಭೂಪಾಲ್ ಘೋಷಣೆ ಉದ್ದೇಶ ಇರತಕ್ಕಂಥದ್ದು. Globalization ಹಿನ್ನೆಲೆಯಲ್ಲಿ ಇದನ್ನೆಲ್ಲಾ ಅವರು ಯೋಚನೆ ಮಾಡಬೇಕು. ಸಣ್ಣ ಪುಟ್ಟ ಸಂಸ್ಥೆಗಳಲ್ಲಿ ಕೂಡ ಅವರ ಪಾಲುದಾರಿಕೆಗೆ ಅವಕಾಶಗಳನ್ನು ಕೊಡಬೇಕು. ಅದರಲ್ಲಿಯೂ ವಿಶೇಷವಾಗಿ Primary Education ಗೆ ಬರುವುದಿಲ್ಲ, Higher education ಗೆ ಬರುತ್ತದೆ. University ಗಳಲ್ಲಿ ನನ್ನ ಡಿಮಾಂಡ್ ಇದೆ. ನಾವು ಎಲ್ಲಾ University ಗಳಲ್ಲಿ ಪ್ರಯತ್ನ ಮಾಡಬೇಕು. ಪ್ರತಿ University ಯಲ್ಲಿ Ambedkar Research and Extension Centre ಇದೆ, Ambedkar ಪೀಠಗಳಿವೆ. ತುಂಬಾ ಚೆನ್ನಾಗಿ ಕಾರ್ಯಕ್ರಮಗಳು ನಡೆಯುತ್ತಿವೆ. discussions ಆಗಿ debate ಆಗುತ್ತಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಬಹಳ ಮುಖ್ಯವಾಗಿ ಚರ್ಚೆ ಮಾಡುವುದು social justice. ಸಾಮಾಜಿಕ ನ್ಯಾಯದ ಬಗ್ಗೆ ಇವತ್ತು ನೋಡುತ್ತಿದ್ದೇವೆ. ಸಾಮಾಜಿಕ ನ್ಯಾಯದ ಬಗ್ಗೆ ಧ್ವನಿ ಕೊಟ್ಟಂತಹವರು ಡಾ: ಅಂಬೇಡ್ಕರ್‌ರವರು. ಇದರ ಬಗ್ಗೆ ಬಹಳಷ್ಟು ನಡೆಯುತ್ತಿದೆ. ವಿಸಿಟಿಂಗ್ Professors ಬರುತ್ತಿದ್ದಾರೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಗಳಾಗುತ್ತಿವೆ. ಎಲ್ಲಾ ಯೂನಿವರ್ಸಿಟಿಗಳವರು ಮಾನ್ಯ ಮುಖ್ಯ ಮಂತ್ರಿಗಳಿಗೆ ಮನವಿ ಕೊಟ್ಟಿದ್ದಾರೆ. ನಮಗೆ ಹಣಕಾಸಿನ ಕೊರತೆ ಇದೆ, ಒಂದೊಂದು ಯೂನಿವರ್ಸಿಟಿಗೂ ಒಂದೊಂದು ಕೋಟಿ ರೂಪಾಯಿಗಳನ್ನು ಒದಗಿಸಬೇಕು. Ambedkar Research and Extension Centre ಮತ್ತು ಅಂಬೇಡ್ಕರ್ ಪೀಠಗಳಿರುವಂತಹ ಕಡೆ ಈ ತರಹದ ಚಿಂತನೆ ಜಾಸ್ತಿಯಾಗಬೇಕು. ಸಮಾಜದ ಎಲ್ಲ ಕ್ಷೇತ್ರಗಳಲ್ಲಿ ಕೂಡ ಇದರ ಬಗ್ಗೆ ಚಿಂತನೆ ಮಾಡತಕ್ಕಂತಹವರು ಬರುತ್ತಾರೆ, ಕಲಿಯುತ್ತಾರೆ, workshop ಗಳಾಗುತ್ತಿವೆ, symposium, seminar ಗಳು ಇದೆಲ್ಲಾ ನಡೆಯುತ್ತಿದೆ. ಈ ದೃಷ್ಟಿಯಲ್ಲಿ ಅವರ ಮನವಿಯನ್ನು ಪರಿಗಣಿಸಿ ಎಲ್ಲಾ ವಿಶ್ವವಿದ್ಯಾಲಯಗಳಿಗೂ ನೀವು

ಸಹಾಯ ಮಾಡತಕ್ಕಂಥದ್ದನ್ನು ಮಾಡಬೇಕೆಂದು ಹೇಳಿ, ಹಾಲು ಉತ್ಪಾದಕರಿಗೆ ಎರಡು ರೂಪಾಯಿ ಸಹಾಯಧನ ಕೊಟ್ಟಿದ್ದೀರಿ. ರೈತರಿಗೆ ಬಹಳ ಉಪಯೋಗವಾಗುತ್ತಿದೆ. ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಒಂದು ಲೀಟರ್‌ಗೆ ಎರಡು ರೂಪಾಯಿ ಕೊಡುತ್ತಿದ್ದೀರಿ. ಹಳ್ಳಿಗಳಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಸದಸ್ಯರಾಗದೆ ಇದ್ದಂತಹವರೂ ಇದ್ದಾರೆ. ಅವರೂ ರೈತರೇ. ಅವರದೂ ಸಂಘ ಇದೆ. ಅವರಿಗೂ ನೀವು ಎರಡು ರೂಪಾಯಿಗಳನ್ನು ಕೊಡುವುದನ್ನು extend ಮಾಡಬಹುದು. ಹಾಲು ಉತ್ಪಾದಕರ ಸಹಕಾರ ಸಂಘಗಳ ಸದಸ್ಯರಾಗದೆ, ಪ್ರತ್ಯೇಕವಾದ ರೀತಿಯಲ್ಲಿ ಖಾಸಗಿಯಾಗಿ ಸಂಘವನ್ನು ಮಾಡಿಕೊಂಡಿರುವವರು ಸಾಕಷ್ಟು ಜನರಿದ್ದಾರೆ, ಅವರಿಗೂ ಕೂಡ ನೀವು ಸಬ್ಸಿಡಿ ಕೊಡಬೇಕು. ಅದೇನು ದೊಡ್ಡ amount ಅಲ್ಲ. ಲೀಟರ್‌ಗೆ 2 ರೂ.ಗಳು ಕೊಟ್ಟರೆ, ಅವನಿಗೆ ಪಾಪ ಅದು ದೊಡ್ಡ ಮೊತ್ತವಾಗುತ್ತದೆ. ಬಹುಶಃ ಇದನ್ನೂ ಕೂಡ ನೀವು ಗಣನೆಗೆ ತೆಗೆದುಕೊಳ್ಳಬೇಕು. ಮಾನ್ಯ ಈಶ್ವರಪ್ಪನವರೆ, ಸ್ಮಾರಕಗಳಿಗೆಲ್ಲಾ 1 ಕೋಟಿ, 2 ಕೋಟಿ ರೂ.ಗಳಂತೆ ಸಾಕಷ್ಟು ಹಣವನ್ನು ಕೊಟ್ಟಿದ್ದೀರಿ. ಮೈಸೂರಿನಲ್ಲಿ ಸ್ವಾಮಿ ವಿವೇಕಾನಂದರು ಬಂದು ಹೋಗಿರುವುದಕ್ಕೆ 5 ಕೋಟಿ ರೂ.ಗಳು, ಸಂಗೊಳ್ಳಿ ರಾಯಣ್ಣನದು ಮಾಡುವುದಕ್ಕೆ 1 ಕೋಟಿ, ಹೀಗೆ ಸಾಕಷ್ಟು ಹಣವನ್ನು ಕೊಟ್ಟಿದ್ದೀರಿ. ಆದರೆ ನನಗನಿಸುತ್ತದೆ, ನೀವು ಮರೆತಿಲ್ಲ, ಆದರೆ ನಿಮಗೆ ಅದನ್ನು ಜ್ಞಾಪಿಸಬೇಕು. ಕರ್ನಾಟಕ ಏಕೀಕರಣದಲ್ಲಿ ಭಾಗವಹಿಸಿದವರಲ್ಲಿ ಈ ಕಡೆಗೆ ಕೆಂಗಲ್ ಹನುಮಂತಯ್ಯನವರು ಮತ್ತು ಆ ಕಡೆಯಿಂದ ನಿಜಲಿಂಗಪ್ಪನವರು ಪ್ರಮುಖರಾಗಿದ್ದಾರೆ. ಏಕೀಕರಣ ಆಗಬೇಕೆಂದು ಅವರು ಹೋರಾಟ ಮಾಡಿದ್ದರು. ಮಾನ್ಯ ನಿಜಲಿಂಗಪ್ಪನವರು ಕರ್ನಾಟಕ ಏಕೀಕರಣದಲ್ಲಿ ಸಫಲರಾಗಿ, ನಂತರ ರಾಜ್ಯದ ಮುಖ್ಯಮಂತ್ರಿಗಳಾಗಿ ರಾಷ್ಟ್ರ ರಾಜಕೀಯದಲ್ಲಿ ಉನ್ನತವಾದಂತಹ ಸ್ಥಾನಕ್ಕೆ ಏರಿದರು. ಅವರು ಅತ್ಯಂತ ಪ್ರಾಮಾಣಿಕ ರಾಜಕಾರಣಿಯಾಗಿದ್ದವರು. ಈಗ ಅವರು ಸ್ಮಾರಕವನ್ನು ಕಟ್ಟುತ್ತಿದ್ದಾರೆ, ಅದು ನಿಂತ ಹೋಗಿದೆ. 2 ಕೋಟಿ ರೂ.ಗಳು ಇನ್ನೂ ಅಲ್ಲಿಗೆ ಬೇಕಾಗಿದೆ. ಈಗಾಗಲೇ ಅಲ್ಲಿ ಸಾಕಷ್ಟು ಖರ್ಚು ಮಾಡಿದ್ದಾರೆ. ಸ್ಮಾರಕವನ್ನು ಪೂರ್ತಿ ಮಾಡುವುದಕ್ಕೋಸ್ಕರ ಬೇಕಾಗಿರತಕ್ಕ 2 ಕೋಟಿ ರೂ.ಗಳನ್ನು ಕೊಡಬೇಕೆಂದು ನಾನು ಸರ್ಕಾರದವರನ್ನು ಅಗ್ರಹಿಸುತ್ತೇನೆ. ಕೊನೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತೇನೆ. ಏಕೆಂದರೆ, ಇವತ್ತಿನ ಮುಖ್ಯಮಂತ್ರಿಗಳನ್ನು ನಾನು ಹಿಂದಿನಿಂದಲೂ. ನೋಡುತ್ತಿದ್ದೇನೆ. ಈಶ್ವರಪ್ಪನವರು ಮತ್ತು ಅವರು ಎಲ್ಲರೂ ಒಂದೇ ಜಿಲ್ಲೆಯಿಂದ ಬರತಕ್ಕವರಾಗಿದ್ದಾರೆ. 1983ರಲ್ಲಿ ಮಾನ್ಯ ಯಡಿಯೂರಪ್ಪನವರು ಮೊಟ್ಟ ಮೊದಲ ಬಾರಿಗೆ

ಎಂ.ಎಲ್.ಎ. ಆದರು. 1983ರಲ್ಲಿ ಅವರು ಗೆಲ್ಲಬೇಕಾದರೆ ಅವರ ಹಿಂದೆ ಅವರು ಮಾಡಿದ್ದ ಜನಪರ ಹೋರಾಟ ಇತ್ತು. ಮುಖ್ಯವಾಗಿ ಕಾಂಗ್ರೆಸ್ ಸರ್ಕಾರದ 20 ಅಂಶಗಳ ಕಾರ್ಯಕ್ರಮವೇನಿತ್ತು, ಅದರ ದುರುಪಯೋಗವಾಗುತ್ತಿದೆ ಎಂದು ದೊಡ್ಡ ಹೋರಾಟವನ್ನು ಕರ್ನಾಟದಲ್ಲಿ ಮೊಟ್ಟ ಮೊದಲಿಗೆ ಮಾಡಿದವರು ಬಹುಶಃ ಮಾನ್ಯ ಯಡಿಯೂರಪ್ಪನವರು. ಆ ಒಂದು ದೊಡ್ಡ ಜನಪರ ಹೋರಾಟ, ಕಾಳಜಿ ಅವರಲ್ಲಿತ್ತು. ಶ್ರೀಸಾಮಾನ್ಯನಿಗೆ ಸಲ್ಲಿಸಬೇಕಾದ, ರೈತಾಪಿ ವರ್ಗಕ್ಕೆ ಬರಬೇಕಾದ ಹಣದ ದುರುಪಯೋಗವಾಗುತ್ತಿದೆ, ಆ ಕಾರ್ಯಕ್ರಮಗಳ ದುರುಪಯೋಗ ಮಾಡುತ್ತಿದ್ದಾರೆ. ಎಂದು ಹೋರಾಟ ಮಾಡುವುದರ ಮುಖಾಂತರ ಅವರು ರಾಜಕೀಯಕ್ಕೆ ಬಂದರು. ಅವರು ಇದುವರೆಗೂ ಕೂಡ ಸುಮಾರು 5–6 ಸಲ ವಿಧಾನ ಸಭೆಗೆ ಆಯ್ಕೆಯಾಗಿದ್ದಾರೆ. ಅವರು ವಿಧಾನ ಪರಿಷತ್ತಿನ ಸದಸ್ಯರೂ ಕೂಡ ಆಗಿದ್ದರು. Deputy Chief Minister ಆಗಿ, ನಂತರ ಅವರು Chief Minister ಆಗಿದ್ದಾರೆ. ಆದರೆ ಇವತ್ತು ನಾನು ಅವರ ಬಜೆಟ್ ಭಾಷಣದಲ್ಲಿ ಅವರ ಜನಪರ ಹೋರಾಟದ ಕಾಳಜಿಯನ್ನು ಕಾಣಲಿಲ್ಲ. ಅವರು ಜನರ ಸಮಸ್ಯೆಗಳನ್ನು ಎತ್ತಿಕೊಂಡು ಹೋರಾಟ ಮಾಡಿ ಬಂದವರು, ನಿಜ. ಅವರು ಬಜೆಟ್‌ನಲ್ಲಿ ಕುವೆಂಪುರವರು, ಡಾ: ಶಿವರುದ್ರಪ್ಪನವರು, ಕಾವ್ಯಾನಂದರವರ ಕವನಗಳ ತುಣುಕುಗಳನ್ನು ತೆಗೆದುಕೊಂಡು ಮಾತನಾಡಿದ್ದಾರೆ. ಆದರೆ ಆ ತುಣುಕುಗಳು ಅವರ ಹೋರಾಟದ ಹಿನ್ನೆಲೆಯಲ್ಲಿ ಇರಬೇಕಾಗಿತ್ತು. ಬಹಳ ಸಮಯ ಹೋಮ ಹವನ ಯಜ್ಞ ನಾನು ಬೇಡವೆಂದು ಹೇಳಲಿಲ್ಲ. ಬಜೆಟ್ ಮಂಡಿಸಿ 3.30 ಗಂಟೆಗೆ ತಿರುಪತಿಗೆ ಹೋಗಿ ಅವರು ಪ್ರಾರ್ಥನೆ ಮಾಡುತ್ತಾರೆ. ಅವರು ಮಾಡಲಿ. ನಾನು ಅದಕ್ಕೆ ಬೇಡ ಎನ್ನುವುದಿಲ್ಲ. ಆದರೆ ನಿಜವಾಗಿಯೂ ಕೂಡ ಅವರಿಗೆ ಈ ಬಜೆಟ್‌ನಲ್ಲಿ ಕುವೆಂಪು, ಜಿ.ಎಸ್. ಶಿವರುದ್ರಪ್ಪನವರೇ ಪ್ರೇರೇಪಣೆಯಾಗಬೇಕಾಗಿದ್ದರೆ, ಅವರನ್ನು ಬೇರೆ ರೀತಿ ತಮಗೆ ಹೇಳುತ್ತೇನೆ. ಕುವೆಂಪುರವರು ಒಂದು ಮಾತು ಹೇಳಿದ್ದರು.

ನೂರು ದೇವರುಗಳು ನೂಕಾಚೆ ದೂರ
ಭಾರತಾಂಬೆಯೇ ತಾಯಿ ಪೂಜಿಸುವ ಬಾರಾ

100 ಕೋಟಿ ಜನರ ಪ್ರತಿಬಿಂಬ ಭಾರತಾಂಬೆ. ಅವರು ಹಾಗೆ ಹೇಳಿರತಕ್ಕದ್ದು ತಮಗೆ ಸ್ಫೂರ್ತಿಯಾಗಬೇಕಾಗಿತ್ತು. ಮಾನ್ಯ ಶಿವರುದ್ರಪ್ಪನವರು ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಬಹಳ ಚೆನ್ನಾಗಿ ಹೇಳಿದ್ದಾರೆ. ಶಿವರುದ್ರಪ್ಪನವರನ್ನು ನೀವು ಅನುಸರಿಸಬೇಕಾದರೆ ಇದನ್ನು ಕೇಳಿ.

ಎಲ್ಲೋ ಹುಡುಕಿದೆ, ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಪ್ರೇಮಗಳ
ಕಾಣದಾದೆನು ನನ್ನೊಳಗೆ

ಎಂಬ ಮಾತನ್ನು ಅವರು ಹೇಳಿದ್ದಾರೆ. ನಾನು ಏಕೆ ಈ ಮಾತನ್ನು ಹೇಳಿದೆ ಎಂದರೆ, ಪ್ರಜಾಪ್ರಭುತ್ವದಲ್ಲಿ ಒಬ್ಬ ವ್ಯಕ್ತಿಗೆ, ಒಬ್ಬ ನಾಯಕನಿಗೆ, ನಾಯಕತ್ವ ತೆಗೆದುಕೊಂಡಿರುವವನಿಗೆ, he should believe in people. ಅದರ ಹಿನ್ನೆಲೆಯಲ್ಲಿ ಅವರು ಅದನ್ನು ಅನುಸರಿಸಬಹುದಾಗಿತ್ತು. ಏಕೋ ಅವರು ಆ ಆಲೋಚನೆಗಳಿಂದ ದೂರವಾಗಿದ್ದಾರೆ. ಬಹುಶಃ ಆಗ ಒಳ್ಳೆಯ ನಾಯಕತ್ವ, ಒಳ್ಳೆಯ ಆಡಳಿತವನ್ನು ಕೊಡಲಿಕ್ಕೆ ಸಾಧ್ಯವೆಂದು ನಾನು ಅವರಿಗೆ ಹೇಳುತ್ತಿದ್ದೇನೆ. ನಾವ್ಯಾರು ಜನಪ್ರತಿನಿಧಿಗಳು ಇದ್ದೇವೋ, ನಮಗೆ ಸಿಗತಕ್ಕ ಅವಕಾಶಗಳಲ್ಲಿ ನಾವು ಮೊದಲು ನಂಬಿಕೆ ಇಡಬೇಕಾದುದು, ನಾನು ಹೇಳಿದ ಹಾಗೆ, we should believe in people. ಬಹುಶಃ ಆ ಹಿನ್ನೆಲೆಯಲ್ಲಿ ಅವರು ಚಿಂತನೆ ಮಾಡಬೇಕು, ಯೋಚನೆ ಮಾಡಬೇಕು. ಆಗ ಮಾತ್ರ ಬಜೆಟ್ ಬಗ್ಗೆ ಯೋಚನೆಯನ್ನು ಮಾಡಿ, ಜನರಿಗೆ ಒಳ್ಳೆಯ ಆಡಳಿತವನ್ನು ಒಳ್ಳೆಯ ಸರ್ಕಾರವನ್ನು ಕೊಡಲಿಕ್ಕೆ ಸಾಧ್ಯ, ಇಡೀ ಕರ್ನಾಟಕ ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಚಿಂತನೆ ಮಾಡಲಿಕ್ಕೆ ಸಾಧ್ಯ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇಲ್ಲಿಗೆ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ. ಮತ್ತೊಮ್ಮೆ ತಮಗೆ ಧನ್ಯವಾದಗಳನ್ನು ತಿಳಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಗೇರಿಯವರು ಈಗ ತಾನೇ ಸದನಕ್ಕೆ ಬರುತ್ತಿದ್ದಾರೆ. ಅದರ ಬಗ್ಗೆ ಹೇಳಿ ಬಿಡುತ್ತೇನೆ. ಮಾನ್ಯ ಸಚಿವರೆ, ನೀವು ಆಗಲೇ ಇರಲಿಲ್ಲ. ನೀವು ಬಂದ ತಕ್ಷಣ ಪ್ರಾಥಮಿಕ ಶಿಕ್ಷಣದ ಬಗ್ಗೆ ನೀವು ಕೊಟ್ಟ ಹೇಳಿಕೆಯನ್ನು ನಾನು ನೋಡಿದೆ. ಮುಂದೆ ಏನಾಗಿದೆ ಎಂದು ಗೊತ್ತಿಲ್ಲ. ನೀವು ಈ ಸದನದ ಮುಂದೆ ಚರ್ಚೆಗೆ ಬರಬೇಕಾಗಿತ್ತು. ಏಕೆ ಅದನ್ನು ತೆಗೆದುಕೊಂಡು ಬರಲಿಲ್ಲ? ಬಹಳ ಮುಖ್ಯವಾದುದು ಅದು. ನಾವು ಕಾವೇರಿ tribunal interim order ಬಂದಾಗಲೆಲ್ಲಾ ಇಲ್ಲಿ ಚರ್ಚೆ ಮಾಡಿ, resolution ಮಾಡಿ ಕೇಂದ್ರ ಸರ್ಕಾರದ ಗಮನ ಸೆಳೆದಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ political backup ಕೂಡ ಮಾಡಬೇಕಾಗುತ್ತದೆ. ನಾನು ಇದರ ಬಗ್ಗೆ ಆದಷ್ಟು ಬೇಗನೇ ಮೇಲ್ಮನವಿಯನ್ನು ಸಲ್ಲಿಸಬೇಕಾಗಿತ್ತು. ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ವಿಷಯವನ್ನು ಪ್ರಸ್ತಾಪ ಮಾಡುವಾಗ, ನಾನು ಇಲ್ಲೇ ಹೊರಗಡೆ ಇದ್ದೆ. ಆದರೆ ಈ ವಿಷಯವನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಂಡಿದೆ. ಭಾಷಾ ನೀತಿಗೆ ಸಂಬಂಧಪಟ್ಟಂತೆ, ನಿನ್ನೆ SLP ಯನ್ನು ನಾವು Supreme Court ನಲ್ಲಿ ಸಲ್ಲಿಸಿಯಾಗಿದೆ. ನಾವು ಸರ್ಕಾರದಲ್ಲಿ ಈ ಎಲ್ಲಾ ವಿಷಯಗಳ ಕುರಿತಂತೆ, ಗಂಭೀರವಾದಂತಹ ಕ್ರಮವನ್ನು ತೆಗೆದುಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಬಹಳ ಒಳ್ಳೆಯ ಸಭೆ ಕೂಡ ನಡೆಯಿತು. ಅದರ ಆಧಾರದ ಮೇಲೆ ನಿನ್ನೆ ನಾವು SLP ಯನ್ನು Supreme Court ನಲ್ಲಿ admit ಮಾಡಿದ್ದೇವೆ. ನಾನು ಇದನ್ನು ತಾವು ವಿಶೇಷವಾಗಿ ಪ್ರಸ್ತಾಪ ಮಾಡಿರುವುದರಿಂದ ಹೇಳುತ್ತಿದ್ದೇನೆ. ಉಳಿದೆಲ್ಲಾ ವಿವರಗಳೊಂದಿಗೆ ಈ ಸದನದಲ್ಲಿ ನಾನು ಮುಂದಿನ ದಿನಗಳಲ್ಲಿ ಚರ್ಚೆ ಸಂದರ್ಭದಲ್ಲಿ ಉತ್ತರಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಯು.ಟಿ. ಖಾದರ್ (ಉಲ್ಲಾಳ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು 2008-09ನೇ ಸಾಲಿನ ಮುಂಗಡ ಪತ್ರವನ್ನು ಮಂಡಿಸಿದ ಬಗ್ಗೆ ಈಗಾಗಲೇ ನಮ್ಮ ಹಿರಿಯ ನಾಯಕರು ವಿಶೇಷವಾಗಿ ವಿಮರ್ಶಿಸಿ ಚರ್ಚಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಕ್ಷೇತ್ರದ ಪ್ರತಿನಿಧಿಯಾಗಿ, ನನ್ನ ಜಿಲ್ಲೆ ಮತ್ತು ಕ್ಷೇತ್ರದ ಸಮಸ್ಯೆ ಬಗ್ಗೆ ಪ್ರಾಮಾಣಿಕವಾಗಿ ನಿಮ್ಮ ಮುಂದಿಡಲು ಇಚ್ಛಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಜನರು ಯಾವ ತಪ್ಪು ಮಾಡಿದ್ದಾರೆಂದು ನಾವು ಈಗ ಆಲೋಚಿಸುವಂತಹ ಸಮಯ ಬಂದಿದೆ ಎಂದು ಹೇಳಲಿಕ್ಕೆ ಇಚ್ಛಿಸುತ್ತೇನೆ. ಸತತವಾಗಿ ರಾಜ್ಯದ ಬಜೆಟ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಅನ್ಯಾಯವಾಗುತ್ತಾ ಬಂದಿದ್ದು, ಈ ಬಾರಿ ಕೂಡ ಬಜೆಟ್‌ನಲ್ಲಿ ಕರಾವಳಿಯ ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಮಂಗಳೂರು ಜಿಲ್ಲೆಗಳಿಗೆ ಯಾವುದೇ ಕೊಡುಗೆಯನ್ನು ನೀಡದಿರುವುದಕ್ಕೆ ನಾನು ವಿಷಾದಿಸುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಜನರು ಯಾವುದೇ ದೊಡ್ಡ ದೊಡ್ಡ ಯೋಜನೆ ಕೇಳುತ್ತಿಲ್ಲ. ನಮಗೆ ಏತ ನೀರಾವರಿ ಕೊಡಿ, ಡ್ಯಾಂ ಕೊಡಿ, ಬ್ಯಾರೇಜ್ ಕೊಡಿ ಅಥವಾ ಸಾವಿರಾರು ಕೋಟಿ ರೂಪಾಯಿಗಳ ಯೋಜನೆ ಕೊಡಿ ಎಂದು ಕೇಳುವುದಿಲ್ಲ. ಏನಿದ್ದರೂ ಕೂಡ ಸಮುದ್ರದ ಕೊರತೆಗೆ ಕುಡಿಯುವ ನೀರಿನ ಯೋಜನೆಗೆ, ರಸ್ತೆಗಳಿಗೆ ಮತ್ತು ಇನ್ನಿತರ ಮೀನುಗಾರಿಕೆಗೆ ಜಾಸ್ತಿಯೆಂದರೆ, 200 ಕೋಟಿ ರೂ.ಗಳ ಅನುದಾನವನ್ನು ಮಾತ್ರವೇ ಕೇಳಿದ ಸಂದರ್ಭದಲ್ಲಿ ಅದುಕೂಡ ಈ ಒಂದು ಬಜೆಟ್‌ನಲ್ಲಿ ಸಿಗಲಿಲ್ಲವೆಂದರೆ, ಇದು ದಕ್ಷಿಣ ಕನ್ನಡ ಜಿಲ್ಲೆಗೆ ಮಾಡಿದಂತಹ ಅನ್ಯಾಯವೆಂದು ನಾನು ಹೇಳಲಿಚ್ಛಿಸುತ್ತೇನೆ. ಇವತ್ತು ನಮ್ಮ ರಸ್ತೆ ಬಗ್ಗೆ ನಾನು ಮಾತನಾಡಬೇಕಾದರೆ, ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ನಮ್ಮ ನಗರ ಮತ್ತು ಗ್ರಾಮೀಣ ಮಟ್ಟದ ರಸ್ತೆಯು ಎಲ್ಲಾ ಸಂಪೂರ್ಣವಾಗಿ ದುರಸ್ತಿಯಲ್ಲಿದೆ.

ಇದನ್ನು ಮಳೆಗಾಲದಲ್ಲಿ ಸರಿಪಡಿಸುವಂತಹ ಯಾವುದೇ ಒಂದು ಕೆಲಸವೂ ಕೂಡ ಇನ್ನೂ ಪ್ರಾರಂಭವಾಗಿಲ್ಲ. ಇವತ್ತು ಬೆಳಿಗ್ಗೆ ನಾನು RDPR ಸಚಿವರೊಂದಿಗೆ ಮಾತನಾಡುವ ಸಂದರ್ಭದಲ್ಲಿ ನಾನು ಅವರಿಗೆ ಕೇಳಿದೆ. ಜಿಲ್ಲಾ ಪಂಚಾಯಿತಿಗೆ ರಸ್ತೆಗಳ maintenance ಮಾಡುವ ಬಗ್ಗೆ ಅನುದಾನವನ್ನು ಬಿಡುಗಡೆ ಮಾಡುವ ಮಾತನ್ನು ಆಗ ಅವರು ನನಗೆ ಹೇಳಿದರು. ಈಗ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ಇವತ್ತು ಯಾವ ಒಂದು ಅನುದಾನವನ್ನು ಬಿಡುಗಡೆ ಮಾಡಲಿಕ್ಕೆ ಹೊರಟಿದ್ದಾರೆ, ಅದು ಒಬ್ಬ ಜಿಲ್ಲಾ ಪಂಚಾಯಿತಿ ಸದಸ್ಯರಿಗೆ 4 ಲಕ್ಷ ರೂ.ಗಳ ಅನುದಾನವನ್ನು ಕೊಟ್ಟು, ಅವರು 400 ಮೀಟರ್ ಅನ್ನು ಡಾಂಬರೀಕರಣಗೊಳಿಸಿದ್ದಾರೆ. ಆದರೆ ರಸ್ತೆ ಉದ್ದಕ್ಕೂ ಅಲ್ಲಲ್ಲಿ ಹೊಂಡ ಬಿದ್ದದ್ದು, ಆ ಒಂದು ರಸ್ತೆಯಲ್ಲಿ ಹೋಗುವಂತಹ ಪರಿಸ್ಥಿತಿಯನ್ನು ಸರಿಪಡಿಸುವಂತಹ ಕಾರ್ಯಕ್ರಮ ಯಾವುದೂ ಕೂಡ ಆಗಿಲ್ಲ. ಆದಕಾರಣ ಮಾನ್ಯ ಸಚಿವರು ಆ ಜಿಲ್ಲಾ ಪಂಚಾಯಿತಿಯ ಅಧಿಕಾರಿಗಳಿಗೆ ಬಹಳ ಸ್ಪಷ್ಟವಾಗಿ ನಿರ್ದೇಶನ ಕೊಡಬೇಕು. ಆ ಒಂದು ಸಮತಟ್ಟಾದ ರಸ್ತೆಯನ್ನು ಮಾಡಲು ಆ ಜವಾಬ್ದಾರಿ ಮತ್ತು ಹೊಣೆಗಾರಿಕೆ, ಎರಡನ್ನೂ ಕೊಟ್ಟು, ಆ ಅನುದಾನವನ್ನೂ ಕೂಡ ಅವರಿಗೆ ಕೊಡುವಂತಹ ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕಳೆದ ವರ್ಷ ಈಗಿನ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಮಂಗಳೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ, ನಾವು ಮಂಗಳೂರಿಗೆ sky bus ನೀಡುತ್ತೇವೆ, ಅದಕ್ಕೆ 1 ಕೋಟಿ ರೂ.ಗಳನ್ನು ಅಧ್ಯಯನ ಮಾಡಲಿಕ್ಕೆ ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದರು. ಆದರೆ ಈ ಸಲ sky bus ಹೋಗಿ, ಅದು ಮಾನೋರೈಲು ಅಗಿದೆ. ಕಳೆದ ವರ್ಷ sky bus ಕೊಡುತ್ತೇವೆಂದು ಹೇಳಿದ್ದು ಏನಾಗಿದೆ? ಅದು ಆಗುತ್ತದೆಯೇ? ಇಲ್ಲವೇ? ಎಂದು ಇನ್ನೂ ಕೂಡ ನಮಗ್ಯಾರಿಗೂ ಗೊತ್ತಿಲ್ಲ. ಜನರೆಲ್ಲರೂ ಕೂಡ ಆಕಾಶದಲ್ಲಿ ಬಸ್ಸು ಬರುತ್ತದೆಂದು ಆಕಾಶವನ್ನು ನೋಡಲಿಕ್ಕೆ ಹೊರಟಾಗ, sudden ಆಗಿ ಅವರಿಗೆ ಮಾನೋರೈಲಿನ ಆಶ್ವಾಸನೆ ಸಿಕ್ಕಿದೆ. ಅಂತಹ 'ಸಂದರ್ಭದಲ್ಲಿ ಇವತ್ತು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಜನರು ಅದು ಮಾನೋರೈಲೋ ಅಥವಾ sky bus ಎಂದು ಕೇಳುತ್ತಿಲ್ಲ. ಓಡಾಡಲಿಕ್ಕೆ ಒಂದು ಉತ್ತಮ ರಸ್ತೆ ಮಾಡಿಕೊಡಿ ಎಂದು ಕೇಳುತ್ತಿದ್ದಾರೆ. ಅದಕ್ಕೆ ಪ್ರಪ್ರಥಮವಾದ ಆದ್ಯತೆಯನ್ನು ನೀಡಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ದಕ್ಷಿಣ ಕನ್ನಡ ಜಿಲ್ಲೆಯ ಮತ್ತು ಕರಾವಳಿ ಜಿಲ್ಲೆಯ ವಿಶೇಷವಾದ ತೊಂದರೆ ಏನೆಂದರೆ, ಕಡಲ ಕೊರತೆದ ಸಮಸ್ಯೆ. ಇವತ್ತು ನಮಗೆಲ್ಲರಿಗೂ ತಿಳಿದ ಹಾಗೆ, ಸಮುದ್ರ ಈ ದೇಶದ ಸಂಪತ್ತು. ಅದನ್ನು ಚೆನ್ನಾಗಿ ಉಪಯೋಗಿಸಿಕೊಂಡರೆ, ಪ್ರವಾಸೋದ್ಯಮದಿಂದ ಅಥವಾ ಮೀನುಗಾರಿಕೆಯಿಂದ ಬೇಕಾದಷ್ಟು

ಸಂಪನ್ಮೂಲವನ್ನು ಕ್ರೋಢೀಕರಿಸಬಹುದು. ಆದರೆ ಸಮುದ್ರವನ್ನು ನಿರ್ಲಕ್ಷಿಸಿದರೆ ಯಾವ ಒಂದು ಅಪಾಯವಾಗುತ್ತದೆ ಎಂಬುದು ನಮಗೆ ಈಗಾಗಲೇ ಕಡಲ ಕೊರೆತದ ಮುಖಾಂತರ ತೋರಿಸಿ ಕೊಟ್ಟಿದೆ. ಈಗಾಗಲೇ ಇದರ ಬಗ್ಗೆ ಪ್ರಶ್ನೆಯನ್ನೂ ಕೂಡ ನಾನು ಕೇಳಿದ್ದೆ. ನಾನು ಬಹಳಷ್ಟು ಈ ಬಜೆಟ್ಟಿನ ಬಗ್ಗೆ ಆಶಾಭಾವನೆ ಹೊಂದಿದ್ದೆ. ಈ ಸಲ ಕಡಲ ಕೊರೆತಕ್ಕೆ ಏನಾದರೊಂದು ಪರಿಹಾರ ಸಿಗಬಹುದು ಎಂದು ಭಾವಿಸಿದ್ದೆ. ಏಕೆಂದರೆ, ಈಗಿನ ಮುಖ್ಯಮಂತ್ರಿಗಳು ಆ ಪ್ರದೇಶಕ್ಕೆ ಭೇಟಿ ನೀಡದ ಸಂದರ್ಭದಲ್ಲಿ ಖಂಡಿತವಾಗಿಯೂ, ಉಲ್ಲಾಳವನ್ನು ದತ್ತು ತೆಗೆದುಕೊಳ್ಳುತ್ತೇನೆ, ಈ ಕಡಲ ಕೊರತೆಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳುತ್ತೇನೆ ಎನ್ನುವಂತಹ ಮಾತನ್ನೂ ಅವತ್ತಿನ ಸಂದರ್ಭದಲ್ಲಿ ಹೇಳಿದ್ದರು. ಆದರೆ ಇವತ್ತು ಬಜೆಟ್‌ನಲ್ಲಿ ನೋಡಿದಾಗ, ಇದರ ಬಗ್ಗೆ ಯಾವುದೇ ಒಂದು ಪ್ರಸ್ತಾವನೆ ಇಲ್ಲದಿರುವುದನ್ನು ನೋಡಿ ಬಹಳ ಬೇಸರವಾಯಿತು. ಯಾವುದಾದರೊಂದು ಕಾರ್ಯಕ್ರಮ, ಅದು ಕೇಂದ್ರದ್ದು ಇರಲಿ, ರಾಜ್ಯದ್ದು ಇರಲಿ, ಅದರ ಮೂಲಕ ಕಡಲ ಕೊರತೆಕ್ಕೊಂದು ಶಾಶ್ವತವಾದ ಪರಿಹಾರ ಕಂಡುಹಿಡಿಯುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಮೂಲಭೂತ ಸೌಕರ್ಯಗಳಲ್ಲಿ ಒಂದಾದ ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಇವತ್ತು ನಮ್ಮ ಮಂಗಳೂರು ನಗರದಲ್ಲೂ ಕೂಡ ಕುಡಿಯುವುದಕ್ಕೆ ನೀರಿಲ್ಲದ ಪರಿಸ್ಥಿತಿ ಇದೆ. ನಮ್ಮ ತುಂಬೆಯ ವೆಂಟೆಡ್ ಡ್ಯಾಂಗೆ, ಇವತ್ತು ಮಂಗಳೂರು ನಗರಕ್ಕೆ ಎಲ್ಲಿ ನೀರು ಬರುತ್ತದೆಯೊ ಅಲ್ಲಿ ಡ್ಯಾಂ ಅನ್ನು ಕಟ್ಟುವುದಕ್ಕೆ 40 ಕೋಟಿ ಅನುದಾನ ಬಿಡುಗಡೆಯಾಗಿದೆ ಎಂದು ಕಳೆದ 3 ವರ್ಷಗಳಿಂದ ಸತತವಾಗಿ ಕೇಳುತ್ತಿದ್ದೇವೆ, ಆದರೆ ಯಾವುದೇ ಒಂದು ನಯಾ ಪೈಸೆ ಇದುವರೆವಿಗೂ ಅಲ್ಲಿಗೆ ಬಿಡುಗಡೆಯಾಗಿಲ್ಲ. ಈ ಬಜೆಟ್‌ನಲ್ಲಿ ಹುಬ್ಬಳ್ಳಿ ಧಾರವಾಡಕ್ಕೆ 136 ಕೋಟಿ ಕೊಟ್ಟಿರುವುದು ಬಹಳ ಸಂತೋಷ. ಅದರ ಜೊತೆಗೆ ನಮ್ಮ ಮಂಗಳೂರಿಗೆ 50 ಕೋಟಿ ರೂಪಾಯಿಗಳನ್ನು ಕುಡಿಯುವ ನೀರಿಗಾಗಿ ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು. ಇದುವರೆವಿಗೂ ಒಂದು ನಯಾಪೈಸೆಯೂ ಬಂದಿಲ್ಲ. ಆದರೆ ಇದು ಬರೀ ನಗರ ಸಮಸ್ಯೆ ಮಾತ್ರವಲ್ಲ, ಮಂಗಳೂರು ನಗರಕ್ಕೆ ನೀರು ಸಿಕ್ಕರೆ ಮಾತ್ರ ಇವತ್ತು ನಮ್ಮ ಕ್ಷೇತ್ರಕ್ಕೆ ನೀರು ಸಿಗಲು ಅವಕಾಶವಾಗುತ್ತದೆ. ನನ್ನ ಉಲ್ಲಾಳ ಕ್ಷೇತ್ರದಲ್ಲಿ 13 ಕೋಟಿ ರೂಪಾಯಿಗಳ ಪೈಪ್ ಲೈನ್‌ಗಳ ಕೆಲಸವೆಲ್ಲಾ ಆಗಿ ಕಾಮಗಾರಿ ಪೂರ್ಣಗೊಂಡಿದ್ದರೂ ಕೂಡ ಇವತ್ತು ಮಂಗಳೂರಿಗೆ ನೀರು ಕೊಡಲಾಗುತ್ತಿಲ್ಲ ನಿಮಗೆ ಹೇಗೆ ಕೊಡಲು ಸಾಧ್ಯವೆನ್ನುವ ಮಾತು ಕೇಳಿಬರುತ್ತದೆ. ಆದಷ್ಟು ಬೇಗನೆ ವಿಶೇಷವಾದ ಕಾಳಜಿಯನ್ನು ವಹಿಸಿಕೊಂಡು ಆ vented Dam ನಿರ್ಮಾಣಕ್ಕೆ ಬೇಕಾದ ರೂ.40–45

ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡುವ ಆದೇಶ ಹೊರಡಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇವತ್ತು ಮೀನುಗಾರಿಕೆಗೆ ಸಂಬಂಧಪಟ್ಟಂತೆ ದಕ್ಷಿಣ ಕನ್ನಡ ಜಿಲ್ಲೆಯ ಬಹಳಷ್ಟು ಜನರು ಮೀನುಗಾರಿಕೆಯನ್ನು ಅವಲಂಬಿಸಿದ್ದಾರೆ. ಈ ಬಜೆಟ್‌ನಲ್ಲಿ ಮೀನುಗಾರಿಕೆಗೆ ಸಂಬಂಧಪಟ್ಟಂತೆ ಯಾವುದೇ ಒಂದು ಯೋಜನೆ ಇಲ್ಲ. ಮೀನುಗಾರಿಕೆ ರಸ್ತೆಗಳಿಗೆ 10 ಕೋಟಿ ಕೊಡುವಂಥ ಅವಕಾಶವಾಯಿತು ಇವತ್ತು ನಮಗೆ ಬಹಳಷ್ಟು ಸಂತೋಷವಾಯಿತು, ಅದಕ್ಕಾಗಿ ನಮ್ಮ ಮುಖ್ಯಮಂತ್ರಿ ಹಾಗೂ ಮೀನುಗಾರಿಕೆ ಸಚಿವರನ್ನು ನಾನು ಅಭಿನಂದಿಸುತ್ತೇನೆ. ಬರೀ ರಸ್ತೆ ಅಭಿವೃದ್ಧಿಯಾದರೆ ಮೀನುಗಾರಿಕೆ ಅಭಿವೃದ್ಧಿಯಾಗುವುದಿಲ್ಲ. ಇವತ್ತು ಮೀನುಗಾರಿಕೆ ಅಭಿವೃದ್ಧಿಯಾಗಬೇಕಾದರೆ ಅಲ್ಲಿ ಪ್ರಪ್ರಥಮವಾಗಿ ಡ್ರೆಜ್ಜಿಂಗ್ ಆಗಬೇಕು. ಇಡೀ ಕರಾವಳಿ ಪ್ರದೇಶದ ರಸ್ತೆಗಳ ಡ್ರೆಜಿಂಗ್‌ಗೆ ಕೇವಲ 5 ಕೋಟಿ ರೂಪಾಯಿಗಳನ್ನು ಇವತ್ತು ಬಜೆಟ್‌ನಲ್ಲಿ ಇಟ್ಟಿದ್ದಾರೆ. ಇವತ್ತು ಮಂಗಳೂರು ಬಂದರಿಗೆ ಸಾಧಾರಣವಾಗಿ ಮೀನುಗಾರರು ಹಿಡಿಯಲು ಹೋಗುತ್ತಾರೆ, ಅಲ್ಲಿ ಡ್ರೆಜ್ಜಿಂಗ್ ಆಗದ ಕಾರಣ 10 ಜನರು ತೀರಿಕೊಂಡಿದ್ದಾರೆ. ಇವತ್ತು ಮಂಗಳೂರಿನ ಅಲಿವೆಲ್ಲಿಯಲ್ಲಿ ಡ್ರೆಜಿಂಗ್ ಮಾಡಬೇಕಾದರೆ ಕನಿಷ್ಟ ಏಳೂವರೆ ಕೋಟಿ ರೂಪಾಯಿಗಳ ಅಗತ್ಯವಿದೆ ಎಂದು ಹೇಳಬಯುಸುತ್ತೇನೆ. ಅದೇ ರೀತಿಯಲ್ಲಿ ಯಜಮಾಡಕೊಡಿ ಇದೆ ಉಡುಪಿ ಇದೆ, ಗಂಗೋಲಿ ಇದೆ, ಕುಂದಾಪುರವಿದೆ, ಕಾರವಾರದ ಬೇರೆ ಬೇರೆ ಪ್ರದೇಶಗಳಲ್ಲಿ ಮಾಡುವ ಸಂದರ್ಭದಲ್ಲಿ ಖಂಡಿತವಾಗಿಯೂ ಈ 5 ಕೋಟಿ ಏನೇನು ಸಾಕಾಗುವುದಿಲ್ಲ. ಆದ ಕಾರಣ ಇದರ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿ ಆದಷ್ಟು ಬೇಗ ಕನಿಷ್ಟ 25–30 ಕೋಟಿಯನ್ನು ಇಟ್ಟುಕೊಂಡು ಒಂದು ಪ್ರದೇಶಕ್ಕೆ ಸೀಮಿತವಾಗಿ ಕೆಲಸ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಜೊತೆಯಲ್ಲಿ ಇವತ್ತು ಜಟ್ಟಿ ನಿರ್ಮಾಣದ ಬಗ್ಗೆ ಹೇಳುವುದಾದರೆ, ಇವತ್ತು ಮಂಗಳೂರು ಮೀನುಗಾರಿಕೆ ಪ್ರದೇಶ ಬಹಳಷ್ಟು ಮೀನುಗಾರಿಕೆ ಒತ್ತಡದಿಂದಾಗಿ ಅಲ್ಲಿ ಬೋಟ್‌ಗಳು ನಿಲ್ಲುವುದಕ್ಕೆ ಜಾಗವಿಲ್ಲ, ಜನರು ಅಲ್ಲಿ ಸರಿಯಾಗಿ ವ್ಯವಹಾರ ಮಾಡುವುದಕ್ಕಾಗುವುದಿಲ್ಲ. ಆದ ಕಾರಣ ಬೇರೆ ಬೇರೆ ಪ್ರದೇಶಗಳಲ್ಲಿ ಸಣ್ಣ ಸಣ್ಣ ಜಟ್ಟಿಗಳ ನಿರ್ಮಾಣ ಮಾಡಿದರೆ ಮಂಗಳೂರಿನ ಒತ್ತಡವನ್ನು ಬೇರೆಡೆಗೆ ಸ್ಥಳಾಂತರಿಸಿ ಆ ಪ್ರದೇಶಗಳು ಅಭಿವೃದ್ಧಿಯಾಗಿ ಮೀನುಗಾರಿಕೆಗೆ ಮತ್ತಷ್ಟು ಉತ್ತೇಜನವಾಗುತ್ತದೆ. ಉಲ್ಲಾಳ ಕ್ಷೇತ್ರದ ಕೋಟೆಪುರದಲ್ಲಿ ನಾಲ್ಕೂವರೆ ಕೋಟಿಗೆ ಜಟ್ಟಿ ನಿರ್ಮಾಣ ಮಾಡಲು ನಮ್ಮ ಸರ್ಕಾರದ

ಮುಂದೆ ಪ್ರಸ್ತಾವನೆ ಇದೆ, ಪೂರಕ ಬಜೆಟ್‌ನಲ್ಲಿ ಅದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇವತ್ತು ನಮ್ಮ ಶಿಕ್ಷಣ ವಿಚಾರದಲ್ಲಿ, ಯಾವುದೇ ಕಾಲೇಜುಗಳು ನಮ್ಮ ಜಿಲ್ಲೆಗೆ ಮಂಜೂರಾಗಿಲ್ಲ. ಇವತ್ತು ಬಹಳ ಬೇಸರದಿಂದ ಹೇಳಬೇಕೆಂದಿರುವ ಸಂಗತಿ ಏನೆಂದರೆ, ಇವತ್ತು ಮಂಗಳೂರು ಕ್ಷೇತ್ರಕ್ಕೆ ಮಂಗಳೂರು ಎಂದು ಹೆಸರಿದ್ದರು ಕೂಡ ಎಲ್ಲವೂ ಕೂಡ ಗ್ರಾಮೀಣ ಮಟ್ಟದ ರೀತಿಯಲ್ಲಿದೆ. ಹಿಂದಿನ ನನ್ನ ಉಲ್ಲಾಳ ಕ್ಷೇತ್ರದ 12 ಗ್ರಾಮಗಳು, ವಿಠಲದಿಂದ ಬಂದ 12 ಗ್ರಾಮಗಳು, ಉಲ್ಲಾಳ ಹೋಬಳಿ ಮಟ್ಟದಲ್ಲಿ ಇವತ್ತು ಒಂದೇ ಒಂದು ಸರ್ಕಾರಿ ಕಾಲೇಜು ಇಲ್ಲವೆಂದು ನಾನು ಹೇಳಬಯಸುತ್ತೇನೆ. ಕಳೆದ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯಮಂತ್ರಿಗಳು ಮಂಗಳೂರಿಗೆ ಬಂದಾಗ ಉಲ್ಲಾಳ ಕ್ಷೇತ್ರಕ್ಕೆ ಖಂಡಿತವಾಗಿಯೂ ಒಂದು ಫಸ್ಟ್‌ಗ್ರೇಡ್ ಕಾಲೇಜು ಮತ್ತು ಪದವಿಪೂರ್ವ ಕಾಲೇಜನ್ನೂ ಕೊಡುತ್ತೇನೆಂದು ಸಾರ್ವಜನಿಕವಾಗಿ ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದ್ದರು, ಇನ್ನು ಕೂಡ ಅದು ಅನುಷ್ಠಾನಕ್ಕೆ ಬಂದಿಲ್ಲ. ಬಂಟ್ವಾಳ ಹೋಬಳಿ ಮಟ್ಟದ ಕ್ಷೇತ್ರದಲ್ಲಿ ಎರಡು ಕಾಲೇಜುಗಳಿವೆ. ಅವು ಏತಕ್ಕೆ ಬಂತೆಂದರೆ, ಕಳೆದ ಆ ಒಂದು ಸಂದರ್ಭದಲ್ಲಿ ಅ ಪ್ರದೇಶದ ಶಾಸಕರು ಆಡಳಿತ ಪಕ್ಷ ಸದಸ್ಯರಾಗಿದ್ದರು ಹಾಗಾಗಿ ಅವರಿಗೆ ಬೇಕಾದ ಎರಡು ಕಡೆ ಕೊಟ್ಟಿದ್ದರು. ಆದರೆ ಆ ಕಾಲೇಜಿಗೆ ಇನ್ನೂ ಕಟ್ಟಡವಿಲ್ಲ, ಅನುದಾನಲ್ಲದೆ ಕಟ್ಟಡ ಅರ್ಧದಲ್ಲಿ ನಿಲ್ಲುವಂಥ ಪರಿಸ್ಥಿತಿಯಾಗಿದೆ, ಪೀಠೋಪಕರಣಗಳಿಲ್ಲ, ಸರಿಯಾದ ಉಪನ್ಯಾಸಕರುಗಳೂ ಇಲ್ಲ. ಆದ ಕಾರಣ ಇವತ್ತು ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣಕ್ಕೆ ವಿಶೇಷವಾದ ಮಹತ್ವ ಕೊಡುವ ಸಂದರ್ಭದಲ್ಲಿ ಇದನ್ನೆಲ್ಲಾ ಮಾನ್ಯ ಸಚಿವರು ಮನಗಂಡು ಪೂರಕ ಬಜೆಟ್‌ನಲ್ಲಿ ಆ ಕಟ್ಟಡವನ್ನು ಪೂರ್ಣಗೊಳಿಸುವುದಕ್ಕೆ ಅನುದಾನವನ್ನು ನೀಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆ ಗ್ರಾಮೀಣ ಮಟ್ಟದ ಮತ್ತೊಂದು ಸಮಸ್ಯೆ ಎಂದರೆ ಸಾರಿಗೆ ಸೌಕರ್ಯ. ಇವತ್ತು ನಗರಪ್ರದೇಶದಲ್ಲಿ ಬೇಕಾದಷ್ಟು ಬಸ್‌ಗಳ ಸೌಕರ್ಯ ಇದ್ದರೂ ಕೂಡ ಇವತ್ತು ಮಂಗಳೂರು ಜಿಲ್ಲೆಯ ಗ್ರಾಮೀಣ ಮಟ್ಟದಲ್ಲಿ ಬಹಳಷ್ಟು ಜನರು ಕಷ್ಟದಲ್ಲಿದ್ದಾರೆ. ಇವತ್ತು ವಿದ್ಯಾರ್ಥಿಗಳು, ಕೆಲಸಕ್ಕೆ ಹೋಗುವವರು, ಶಿಕ್ಷಕರು 2–3 ಕಿ.ಮೀ ನಡೆಯುವಂಥ ಪರಿಸ್ಥಿತಿ ಇದೆ. ಬಸ್ ಇದ್ದರೂ ಒಂದು ಅಥವಾ ಎರಡು ಬಸ್‌ಗಳಿವೆ. ಆದಕಾರಣ ವಿದ್ಯಾರ್ಥಿಗಳು ಬಸ್‌ನ ಟಾಪ್ ಮೇಲೆ ಕುಳಿತುಕೊಂಡು ಹೋಗುವುದನ್ನು ನಮ್ಮ ಜಿಲ್ಲೆಯಲ್ಲಿ

ನೋಡುತ್ತಿದ್ದೇವೆ. ಆದ ಕಾರಣ ಭವಿಷ್ಯದಲ್ಲಿ ಏನಾದರು ಒಂದು ಕಾನೂನನ್ನು ತಂದು ಇದರ ಬಗ್ಗೆ ವಿಶೇಷವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು.

ಇವತ್ತು ನಾವು ಉಸ್ತುವಾರಿ ಸಚಿವರನ್ನು ಅಭಿನಂದಿಸಬೇಕು, ಇದನ್ನು ಸರಿಯಾಗಿ ಮಾಡದೆ ಇದ್ದರೆ ರಾಷ್ಟ್ರೀಕರಣಗೊಳಿಸುತ್ತೇವೆನ್ನುವ ಮಾತನ್ನು ಮೊನ್ನೆ ಕೆ.ಡಿ.ಪಿ ಸಭೆಯಲ್ಲಿ ಧೈರ್ಯವಾಗಿ ಹೇಳಿದ್ದಾರೆ. ಅಂಥ ಸಂದರ್ಭದಲ್ಲಿ ಅವರು ಯಾವ ಒಂದು ಯೋಜನೆಯನ್ನು ಹಾಕಿದ್ದಾರೆ ಅದನ್ನು ಸಂಬಂಧಪಟ್ಟ ಸಾರಿಗೆ ಇಲಾಖೆಯ ಅಧಿಕಾರಿಗಳು ಮಾತನಾಡಿಕೊಂಡು ಆ ಜನರಿಗೆ ಕನಿಷ್ಟ ಯಾವ ಪ್ರದೇಶದಲ್ಲಿ ಬಸ್ ಇಲ್ಲ ಆ ಪ್ರದೇಶಕ್ಕಾದರೂ ಬಸ್ ಸೌಕರ್ಯವನ್ನು ಒದಗಿಸುವ ಕೆಲಸವನ್ನು ಸರ್ಕಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಬಡಜನರ ಮೂಲಭೂತ ಸೌಕರ್ಯವಾದ ಹಕ್ಕುಪತ್ರದ ಬಗ್ಗೆ ಹೇಳುವುದಾದರೆ, ಇವತ್ತು ನನ್ನ ಕ್ಷೇತ್ರದಲ್ಲಿ ಹಲವಾರು ಜನರಿಗೆ ಮನೆ ಇದೆ, ಹಕ್ಕುಪತ್ರವಿಲ್ಲ. ಇನ್ನು 100–200 ಜನರಿಗೆ ಹಕ್ಕುಪತ್ರವಿದ್ದರೆ ಅಲ್ಲಿ ಜಾಗವಿಲ್ಲ, ಮನೆಕಟ್ಟುವುದಕ್ಕೆ ಕಾದು ಕುಳಿತುಕೊಂಡಿದ್ದಾರೆ ಅವರಿಗೆ ವ್ಯವಸ್ಥೆಯಾಗಿಲ್ಲ. ಆದಕಾರಣ ಇದಕ್ಕೆಲ್ಲಾ ಏನಾದರು ಒಂದು ರೂಪುರೇಷೆ ಕೊಡುವಂಥ ಒಂದು ಕಾರ್ಯಕ್ರಮ ಈ ಸರ್ಕಾರದಿಂದ ಆದಷ್ಟು ಬೇಗನೆ ಆಗಬೇಕು, ಜನರಿಗೆ ಧೈರ್ಯದಿಂದ ಬದುಕುವಂಥ ಆಸರೆಯನ್ನು ಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇವತ್ತು ಎ.ಪಿ.ಎಲ್. ಮತ್ತು ಬಿ.ಪಿ.ಎಲ್. ಬಗ್ಗೆ ವಿಶೇಷವಾಗಿ ಹೇಳಿದ್ದಾರೆ. ಎ.ಪಿ.ಎಲ್. ಅನ್ನು ಬಿ.ಪಿ.ಎಲ್. ಮಾಡುವಂಥ ಪರಿಸ್ಥಿತಿ, ಬಿ.ಪಿ.ಎಲ್. ನವರಿಗೆ ಎ.ಪಿ.ಎಲ್. ಕಾರ್ಡ್ ಕೊಡುವಂಥ ಪರಿಸ್ಥಿತಿಯಾಗಿದೆ. ಇಂಥ ಪರಿಸ್ಥಿತಿ ಬರುವುದಕ್ಕೆ ಪ್ರಮುಖ ಕಾರಣವೆಂದರೆ, ಕಾರ್ಡ್ ಮಾಡುವ ಕಂಪ್ಯೂಟರ್ ಸಂಸ್ಥೆ ಇಡೀ ರಾಜ್ಯದಲ್ಲಿ ಒಬ್ಬರಿಗೆ ವಹಿಸಿ ಕೊಟ್ಟಿದ್ದಾರೆ. ಇವತ್ತು ಇಡೀ ರಾಜ್ಯದಲ್ಲಿ ರೇಷನ್ ಕಾರ್ಡ್ ಮಾಡುವ ಕೆಲಸ ಒಬ್ಬರಿಗೆ ವಹಿಸಿಕೊಟ್ಟಿರುವುದು. ಇವತ್ತು ನಮ್ಮ ಜಿಲ್ಲೆ, ಮಂಗಳೂರಿನಲ್ಲಿ ಏನಾದರು ಸ್ಪೆಲಿಂಗ್ ಮಿಸ್ಟೇಕ್ ಆಗಿ, ಫೋಟೊ ಚೇಂಜ್ ಅಥವಾ ಇನ್ನಿತರೆ ಬದಲಾವಣೆಯಾಗಿದ್ದರೆ ಅದನ್ನು ಸರಿಪಡಿಸಲು ಆ ಜಿಲ್ಲೆಯಲ್ಲಾಗುವುದಿಲ್ಲ. ಅವರು ಅದನ್ನು ರಾಜ್ಯಧಾನಿಗೆ ಕಳುಹಿಸಿ ಮತ್ತೆ ಅದನ್ನು ಸರಿಪಡಿಸಬೇಕು, ಅವರು ಸರಿಯಾಗಿ ಸ್ಪಂದಿಸುವುದಿಲ್ಲ. ಸರ್ಕಾರದಲ್ಲಿ ನನ್ನ ಕಳಕಳಿಯ ವಿನಂತಿ ಏನೆಂದರೆ, ಗಣಕೀಕರಣವನ್ನು ಬರೀ ರಾಜ್ಯದಲ್ಲಿ ಒಂದೇ ಕಡೆ ಮಾಡದೇ ಅದನ್ನು ವಿಕೇಂದ್ರೀಕರಣಗೊಳಿಸಿ, ಆ ಜಿಲ್ಲೆ, ಆ ತಾಲ್ಲೂಕಿನಲ್ಲಿ ಮಾಡುವಂತೆ ಮಾಡಿದರೆ

ಏನಾದರು ಹೆಚ್ಚು ಕಡಿಮೆಯಾದರೆ ಹೋಗಿ ಸರಿಪಡಿಸಿಕೊಳ್ಳಲು ಅವಕಾಶವಾಗುತ್ತದೆ. ಆ ರೀತಿಯಲ್ಲಿ ಅದನ್ನು ವಿಕೇಂದ್ರೀಕರಣಗೊಳಿಸುವಂಥ ಕೆಲಸವನ್ನು ಈ ಸರ್ಕಾರ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಈಗಲೂ ಬಹಳಷ್ಟು ಜನರು ಪಡಿತರ ಚೀಟಿಗಾಗಿ ಹೊಸದಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಈಗ ಸರ್ಕಾರದ ಆದೇಶವಿಲ್ಲದೆ ಅವರಿಗೆ ತಾತ್ಕಾಲಿಕವಾದ ಪಡಿತರ ಚೀಟಿಯನ್ನು ಕೊಡಲಾಗಿಲ್ಲ. ಇಂಥ ಸಂದರ್ಭದಲ್ಲಿ ಯಾರು ಹೊಸ ಪಡಿತರ ಚೀಟಿಗಾಗಿ ಅರ್ಜಿಯನ್ನು ಹಾಕಿದ್ದಾರೆ ಅವರಿಗೆ ಆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಗ್ಯಾಸ್ ಇದ್ದವರಿಗೆ ಸೀಮೆ ಎಣ್ಣೆ ಇಲ್ಲವೆನ್ನುವ ಕಾನೂನನ್ನು ತಂದು ಎಲ್ಲರೂ ಇವತ್ತು ಕಷ್ಟದಲ್ಲಿದ್ದಾರೆ. ಇವತ್ತು ಕರೆಂಟ್ ಹೋದರೆ ಸೀಮೆ ಎಣ್ಣೆ ಬೇಕಾಗಿದೆ, ರಾತ್ರಿಯ ಸಮಯದಲ್ಲಿ ವಿದ್ಯಾರ್ಥಿಗಳು ಓದುವುದಕ್ಕೆ ಅನುಕೂಲವಾಗಲು ಗ್ಯಾಸ್ ಸೌಲಭ್ಯ ಯಾರಿಗಿದೆಯೊ ಅಂಥವರಿಗೆ ಕನಿಷ್ಟ 2–3 ಲೀಟರ್ ಸೀಮೆ ಎಣ್ಣೆ ಕೊಡಲು ಸರ್ಕಾರ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ರೇಷನ್ ಶಾಪ್‌ಗಳು ಬಹಳ ಹಿಂದಿನ ಕಾಲದಲ್ಲಿ ಆರಂಭವಾಗಿದ್ದು, ಅವತ್ತಿನ ಗ್ರಾಮೀಣ ಮಟ್ಟದ ಜನಸಂಖ್ಯೆಗೆ ಅನುಗುಣವಾಗಿ ಗ್ರಾಮ ಮಟ್ಟದಲ್ಲಿ ತೆರೆಯಲಾಗಿದೆ. ಇವತ್ತು ಜನಸಂಖ್ಯೆ ಜಾಸ್ತಿಯಾಗಿರುವ ಸಂದರ್ಭದಲ್ಲಿ ಇನ್ನು ಬೇಡಿಕೆ ಹಲವಾರು ಕಡೆ ಇದೆ. ಆದಕಾರಣ ಜನರಿಗೆ ಹತ್ತಿರವಾಗುವಂತೆ ಇಷ್ಟು ಜನರಿಗೊಂದು ನ್ಯಾಯಬೆಲೆ ಅಂಗಡಿ ಎಂದು ತೆರೆಯಲು ಹೊಸದಾಗಿ ಅವಕಾಶ ಕೊಡಬೇಕೆಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ.

ಇವತ್ತು ಆರೋಗ್ಯ ಬಹಳ ಅತ್ಯಗತ್ಯವಿದೆ, ಇವತ್ತು ಒಂದು ಪ್ರದೇಶ ಅಭಿವೃದ್ಧಿಯಾಗಬೇಕಾದರೆ, ನಾವು ಎಷ್ಟೇ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರು ಜನರ ಆರೋಗ್ಯ ಸರಿಯಿಲ್ಲದಿದ್ದರೆ ಅಭಿವೃದ್ಧಿ ಕುಂಠಿತವಾಗುತ್ತದೆ. ಈಗ ದಕ್ಷಿಣ ಕನ್ನಡ ಜಿಲ್ಲೆಯ ಬಗ್ಗೆ ಹೇಳುತ್ತೇನೆ, ಮೊನ್ನೆ ನಮ್ಮ ಜಿಲ್ಲೆಯಲ್ಲಿ ಚಿಕನ್ ಗುನ್ಯ ವ್ಯಾಪಿಸಿ ಬಹಳಷ್ಟು ಜನರು ಕೆಲಸಕ್ಕೆ ಹೋಗದೆ ಅಭಿವೃದ್ಧಿ ಕುಂಠಿತವಾಗಿದೆ. ಆ ರೋಗ ಬಂದವರಿಗೆ ಮದ್ದು ಕೊಡುವ ಕೆಲಸ ಮಾತ್ರವಲ್ಲದೆ ಇದನ್ನು ಸಮರ್ಪಕವಾಗಿ ತಡೆಗಟ್ಟುವಂಥ ಕೆಲಸ ನಾವು ಮಾಡಬೇಕಾಗಿದೆ. ಆದಕಾರಣ ಇವತ್ತು ನಮ್ಮ ಮಂತ್ರಿಗಳೆಲ್ಲಾ. ಬಂದು ಸಭೆ ಮಾಡಿದರೂ ಕೂಡ ಅದನ್ನು ತಡೆಗಟ್ಟುವ ಕೆಲಸದಲ್ಲಿ ನಾವು ಯಶಸ್ವಿಯಾಗಿಲ್ಲ. ಏಕೆಂದರೆ, ಇವತ್ತು ಸ್ಪ್ರೆಯಿಂಗ್ ಮತ್ತು ಫಾಗಿಂಗ್ ಮೆಷಿನ್‌ಗಳು ಕಡಿಮೆ ಇವೆ. ಒಂದು ಗ್ರಾಮಪಂಚಾಯತಿಗೆ ಕನಿಷ್ಟ ಒಂದಾದರೂ ಸ್ಪ್ರೆಯಿಂಗ್ ಮತ್ತು ಫಾಗಿಂಗ್ ಮೆಷಿನ್ ಒದಗಿಸಿಕೊಡುವ ಕೆಲಸವಾದರೆ ಮಾತ್ರ ಸಂಪೂರ್ಣವಾಗಿ ಆ ಸೊಳ್ಳೆಗಳನ್ನು ಕೊಲ್ಲುವ ಮತ್ತು ಸೊಳ್ಳೆಗಳ ಮೊಟ್ಟೆಗಳನ್ನು

ನಾಶಪಡಿಸುವ ಕೆಲಸವಾಗುತ್ತದೆ. ಇವತ್ತು 260 ಗ್ರಾಮಪಂಚಾಯತಿಗಳಿದ್ದರೆ 43 ಮೆಷಿನ್‌ಗಳನ್ನು ಇಟ್ಟುಕೊಂಡು ಚಿಕನ್ ಗುನ್ಯವನ್ನು ನಿಯಂತ್ರಿಸಲು ಖಂಡಿತ ಸಾಧ್ಯವಿಲ್ಲವೆಂದು ಹೇಳುತ್ತೇನೆ. ಹಾಗೇ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ಎಲ್ಲಾ ವೈದ್ಯರು, ಮತ್ತು ಸಿಬ್ಬಂದಿಗಳನ್ನು ಆದಷ್ಟು ಬೇಗ ತುಂಬಲು ಸರ್ಕಾರ ಕ್ರಮತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಜಿಲ್ಲಾ ನ್ಯಾಯಾಲಯದ ಕಟ್ಟಡ 13 ಕೋಟಿ ಅಂದಾಜಿನಲ್ಲಿ ಕೆಲಸ ಪ್ರಾರಂಭವಾಗಿ 2 ವರ್ಷಗಳಾಗಿವೆ, ಮೂರೂವರೇ ಕೋಟಿ ರೂಪಾಯಿಗಳು ಮಂಜೂರಾಗಿದ್ದರೂ ಇದುವರೆವಿಗೆ ಒಂದೇ ಒಂದು ಪೈಸೆ ಕೂಡ ಬಿಡುಗಡೆಯಾಗದೆ ಅದು ಅರ್ಧಂಬರ್ಧ ಸ್ಥಿತಿಯಲ್ಲಿದೆ. ಇವತ್ತು ಬೇರೆಡೆ ಎಲ್ಲಾ ಜಿಲ್ಲಾ ನ್ಯಾಯಾಲಯಗಳಿಗೆ ಅನುದಾನವನ್ನು ಬಿಡುಗಡೆ ಮಾಡುವಾಗ ದಕ್ಷಿಣ ಕನ್ನಡ ಜಿಲ್ಲೆಯನ್ನು ಬಿಟ್ಟಿದ್ದು ಸರಿಯಲ್ಲವೆಂದು ಹೇಳುತ್ತೇನೆ. ಮುಂದಿನ ಪೂರಕ ಬಜೆಟ್‌ನಲ್ಲಿ ಅದಕ್ಕೆ ಬೇಕಾಗುವ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಂಗಳೂರು ವಿಶ್ವವಿದ್ಯಾನಿಲಯ ಇಡೀ ನಮ್ಮ ರಾಜ್ಯವಲ್ಲದೇ ರಾಷ್ಟ್ರಮಟ್ಟದಲ್ಲಿಯೂ ಕೂಡ ಹೆಸರು ಪಡೆದುಕೊಂಡಿದೆ. ಈ ಪ್ರದೇಶದ ಮೂಲಭೂತ ಸೌಕರ್ಯದ ಅಭಿವೃದ್ಧಿಗೂ ಕೂಡ ಕಳೆದ ಹಲವಾರು ವರ್ಷಗಳಿಂದ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿಲ್ಲವೆಂದು ವಿಷಾಧಿಸುತ್ತೇನೆ. ಈ ಒಂದು ವಿಶ್ವವಿದ್ಯಾನಿಲಯ ನನ್ನ ವ್ಯಾಪ್ತಿಯಲ್ಲಿರುವ ಕಾರಣ ಇದರ ಸಮಸ್ಯೆ ನನಗೆ ಚೆನ್ನಾಗಿ ಗೊತ್ತಿದೆ. ಭವಿಷ್ಯದ ದಿನಗಳಲ್ಲಿ ಅಲ್ಲಿನ ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದ ಶಿಕ್ಷಣದ ಜೊತೆಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಸಂದರ್ಭದಲ್ಲಿ ಪೂರಕ ಬಜೆಟ್ ನಲ್ಲಿ ಕನಿಷ್ಟ 5 ಕೋಟಿ ರೂಪಾಯಿಗಳ ಅನುದಾನವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇವತ್ತು ಕಾನೂನು ಸುವ್ಯವಸ್ಥೆ ಬಗ್ಗೆ ಹೇಳಬೇಕೆಂದರೆ, ದಕ್ಷಿಣ ಕನ್ನಡ ಜಿಲ್ಲೆ ಯಾವಾಗಲೂ ಸೂಕ್ಷ್ಮವಾದ ಪ್ರದೇಶಕ್ಕೆ ಹೆಸರಾಗಿದೆ. ಆದಕಾರಣ ಆ ಪ್ರದೇಶದ ಎಲ್ಲಾ ಸಮಸ್ಯೆಗಳನ್ನು ಅರಿತುಕೊಂಡು ಪೋಲೀಸ್ ಇಲಾಖೆಯನ್ನು ಸದೃಢಗೊಳಿಸುವಂತಹ ಸಂದರ್ಭದಲ್ಲಿ ಅತ್ಯಂತ ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಗಳನ್ನು ಅಲ್ಲಿಗೆ ನೇಮಿಸುವುದು, ಅಲ್ಲಿಯ ಪೋಲೀಸ್ ಇಲಾಖೆಯಲ್ಲಿ ಯಾವ ಯಾವ ಸಿಬ್ಬಂದಿಗಳ ಕೊರತೆ ಇದೆ ಆ ಸಿಬ್ಬಂದಿಗಳನ್ನು ಅಲ್ಲಿಗೆ ನೇಮಿಸುವುದು, ಎಲ್ಲಾ ಸೌಕರ್ಯಗಳನ್ನು ಒದಗಿಸುವುದರ ಜೊತೆಗೆ ಮಂಗಳೂರಿನಲ್ಲಿ ಒಂದು ಪೋಲೀಸ್ ಕಮಿಷನರ್‌ರವರ ಕಛೇರಿಯನ್ನು ತೆರೆಯಬೇಕೆಂದು ಹಲವಾರು

ವರ್ಷಗಳಿಂದ ಬೇಡಿಕೆ ಇದೆ. ಇದಕ್ಕೆ ಸರ್ಕಾರ ಮಹತ್ವ ಕೊಡಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತಾ, ಅಲ್ಪಸಂಖ್ಯಾತರ ಇಲಾಖೆಯಲ್ಲಿ ಬೇರೆ ಬೇರೆ ಯೋಜನೆಗಳನ್ನು ಪ್ರಕಟಿಸಿದ್ದಾರೆ. ಆದರೆ ಇವತ್ತು ನಾನು ಅಲ್ಪಸಂಖ್ಯಾತರ ಇಲಾಖೆಯಲ್ಲಿ ಪ್ರಕಟಿಸಿರುವಂತಹ ಯೋಜನೆಗಳು ಸಮರ್ಪಕವಾಗಿಲ್ಲವೆಂದು ಹೇಳುವುದಕ್ಕೆ ಇಚ್ಚಿಸುತ್ತೇನೆ, ಕಲಿಯುವ ವಾಹಿನಿಗೆ 20,000 ರೂಪಾಯಿಗಳನ್ನು ಕೊಡುತ್ತೇವೆ. ಆ 20,000 ರೂಪಾಯಿಗಳಲ್ಲಿ ಇಂಜಿನಿಯರಿಂಗ್ ಕಲಿಯುವುದಕ್ಕಾಗದೇ ಅವನು ಅಸಹಾಯಕ ಸ್ಥಿತಿಯಲ್ಲಿದ್ದಾನೆ. ಇಂಜಿನಿಯರಿಂಗ್‌ಗೆ 40,000 ರೂ. ಡಾಕ್ಟರ್ಸ್‌ಗೆ 70,000 ರೂ, MBA ಕಲಿಯುವವನಿಗೆ 20,000 ರೂ. ಇದು ಯಾವುದಕ್ಕೂ ಸಾಲದ ಇರುವಂತಹ ಸಂದರ್ಭದಲ್ಲಿ ಇದಕ್ಕೆ ಬೇರೆ ಯಾವುದಾದರೂ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಜೊತೆಗೆ ಅಲ್ಪಸಂಖ್ಯಾತರ ಇಲಾಖೆಯಿಂದ ಹೌಸಿಂಗ್ ಸ್ಕೀಮ್ ಅಥವಾ ಬೇರೆ ಯಾವುದಾದರೂ ಸ್ಕೀಮ್‌ಅನ್ನು ತರಬೇಕೆಂದು ಕೇಳಿಕೊಳ್ಳುತ್ತಾ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲಾ ಸವಲತ್ತುಗಳು ಇದ್ದರೂ ಕೂಡ ಕ್ರೀಡೆಯಲ್ಲಿ ಬಹಳಷ್ಟು ಹಿಂದೆ ಬಿದ್ದಿದೆ. ಕ್ರೀಡಾ ಹಾಸ್ಟೆಲ್ ಇದೆ ಅದನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುವಂತಹ ಅಧಿಕಾರಿ ಆ ಪ್ರದೇಶದಲ್ಲಿಲ್ಲ. ಬೆಂಗಳೂರಿನಲ್ಲಿ ಬಿಟ್ಟರೆ ದೊಡ್ಡ ಕ್ರೀಡಾಂಗಣ ಎಲ್ಲಿಯೂ ಇಲ್ಲ. ಇವತ್ತು ನಮಗೆ ವಿಶ್ವಾಸ ಇದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುವ ದಿನಗಳಲ್ಲಿ ಅತ್ಯುತ್ತಮವಾದ ಸ್ಟೇಡಿಯಂ ಅನ್ನು ತಯಾರು ಮಾಡಲು ಸರ್ಕಾರ ಯೋಚಿಸಬೇಕು. ಅದಕ್ಕೆ ಬೇಕಾದಂತಹ ಜಾಗ ಕೂಡ ನಮ್ಮ ಕ್ಷೇತ್ರದಲ್ಲಿ ಇದ್ದ ಕಾರಣ ಇದನ್ನೂ ಕೂಡ ಅಲ್ಲಿ ಮಾಡಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತಾ, ಇವತ್ತಿನ ಮುಂಗಡ ಪತ್ರ ದಕ್ಷಿಣ ಕನ್ನಡ ಜಿಲ್ಲೆಗೆ ಯಾವುದೇ ಸಹಾಯ ಅಥವಾ ಯೋಜನೆಗಳು ಇಲ್ಲದೆ ಇರುವಂತಹ ಸಂದರ್ಭದಲ್ಲಿ ಸ್ವಾಭಾವಿಕವಾಗಿ ನಾನು ಇದನ್ನು ವಿರೋಧಿಸುತ್ತೇನೆಂದು ಹೇಳುತ್ತಾ, ಪೂರಕ ಬಜೆಟ್‌ನಲ್ಲಿ ಯಾವ್ಯಾವುದು ಲೋಪದೋಷವಿದೆ ಅವುಗಳನ್ನು ಸರಿಪಡಿಸಿಕೊಂಡು ಅದರ ಜೊತೆಯಲ್ಲಿ ವಿಶೇಷವಾಗಿ ಶಾಸಕರ ನಿಧಿ ಈ ಸಾರಿ ಪ್ರಕಟಿಸಿಲ್ಲ, ಶಾಸಕರಿಗೆ ಬರುವಂತಹ ದಿನಗಳಲ್ಲಿ ಒಂದು ಕೋಟಿ ರೂಪಾಯಿಗಳು ಸಾಕಾಗುವುದಿಲ್ಲ. ಏಕೆಂದರೆ ಈಗಾಗಲೇ SR rate 30 ರಿಂದ 40% ಜಾಸ್ತಿಯಾಗಿದೆ. ಒಂದು ರಸ್ತೆ ಮಾಡಬೇಕಾದರೆ ಕನಿಷ್ಟ 15 ರಿಂದ 20 ಲಕ್ಷ ರೂಪಾಯಿಗಳು ಬೇಕಾಗುತ್ತವೆ. ನಾವು ಐದು ಕೋಟಿ ರಸ್ತೆ ಮಾಡುವಾಗ ಒಂದು ಕೋಟಿ ರೂ. ಅಲ್ಲಿಯೇ ಹೋಗುತ್ತದೆ. ಕನಿಷ್ಟ ಎರಡು ಕೋಟಿ ರೂಪಾಯಿಗಳಿಗೆ ಏರಿಸಬೇಕೆಂದು ಒಬ್ಬ ಶಾಸಕನಾಗಿ ಕಳಕಳಿಯ ವಿನಂತಿ ಮಾಡುತ್ತಾ, ಈ ಪೂರಕ ಬಜೆಟ್‌ನಲ್ಲಿ ಇದೆಲ್ಲಕ್ಕೂ ಸಮ್ಮತಿ ನೀಡಬೇಕೆಂದು ಕೇಳಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.